೧೯೮೯-೯೦ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ೭೫೨ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಆ ಜಿಲ್ಲಾ ಆಯ್ಕೆ ಸಮಿತಿಯಿಂದ ನೇಮಕಾತಿ ಕಾರ್ಯಕ್ರಮ ಜರುಗಿಸಲಾಯಿತು. ಈ ೭೫೨ ಹುದ್ದೆಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಯೊಂದರ ಅನ್ವಯ ಮಂಜೂರಾದ ೧೦೨ ಹಿಂದಿ ಶಿಕ್ಷಕರ ಹುದ್ದೆಗಳೂ ಸೇರಿರುತ್ತವೆ. ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದುದರಿಂದ ಹಿಂದಿ ಶಿಕ್ಷಕರನ್ನು ಒಳಗೊಂಡಂತೆ ೪೩೦ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮಾತ್ರ ಅವಕಾಶವಿತ್ತು. ಉಳಿದ ೩೨೨ ಹುದ್ದೆಗಳಿಗೆ ಭರ್ತಿ ಮಾಡಲು ಮಂಜೂರಾತಿ ಇರಲಿಲ್ಲ.

ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಸದ್ಯದ ಮಿತವ್ಯಯ ಆದೇಶದಿಂದ ಸಡಿಲಗೊಳಿಸಲಾಗಿದೆ. ವಿದ್ಯಾರ್ಥಿಗಳ ದಾಖಲಾತಿಗೆ ಹೊಂದಿಕೊಂಡಂತೆ ಹೆಚ್ಚುವರಿ ೧೭೦೦ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಬೇಕೆಂಬ ವಿಷಯವನ್ನು ಈ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

## ೫. ವಿತ್ತೀಯ ಕಾರ್ಯಕಲಾಪಗಳು

## ೧೯೯೦-೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

## (ಭೂಕಂದಾಯ, ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಮುಜರಾಯಿ ಮತ್ತು ಧರ್ಮಾದಾಯ ಸಂಸ್ಥೆಗಳು, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಗಳು)

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಹೆಸರಿನಲ್ಲಿ ಮಂಡಿಸಿರತಕ್ಕಂಥ ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ನಮ್ಮ ರಾಜ್ಯದಲ್ಲಿ ಅತೀ ಮುಖ್ಯವಾದ ಇಲಾಖೆಗಳಲ್ಲಿ ಕಾರ್ಮಿಕ ಇಲಾಖೆಯು ಪ್ರಥಮ ಎಂದು ಪರಿಗಣಿಸ ಬೇಕಾಗುತ್ತದೆ. ಬಹುಶಃ ಕಾರ್ಮಿಕ ಇಲಾಖೆ ಎಂದು ಕರೆಯುವುದರ ಬದಲು ಇದನ್ನು ಮಾಲೀಕರ ಇಲಾಖೆ ಎಂದು ಕರೆಯ ಬಹುದೇನೋ ಎನ್ನುವಷ್ಟರ ಮಟ್ಟಿಗೆ ಇದರ ಕಾರ್ಯ ವೈಖರಿ ನಡೆದಿದೆ. ಈ ನಮ್ಮ ಕಾರ್ಮಿಕ ಇಲಾಖೆಯು ಇವೊತ್ತಿನ ದಿವಸ ಕಾರ್ಮಿಕ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಬಯಸುತ್ತೇನೆ. ಇದು ಒಂದು ರೀತಿಯಲ್ಲಿ ಮಾಲೀಕರುಗಳ ಏಜಂಟರಾಗಿ ಕೆಲಸ ಮಾಡುತ್ತಾ ಇದೆಯೇನೋ ಎನ್ನುವ ಭಾವನೆಯು ಇವೊತ್ತು ಸಾಮಾನ್ಯರಲ್ಲಿ ಬರುತ್ತಿದೆ. ನಾನು ಮಾನ್ಯ ಅಧ್ಯಕ್ಷರೂ. ಹಿರಿಯರೂ ಆದ ಕೆ. ಹೆಚ್. ಪಾಟೀಲರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ತಾವುಗಳು ಎಲ್ಲಿಯವರೆವಿಗೆ ಈ ಖಾತೆಯನ್ನು ಹೊಂದಿರುತ್ತೀರೋ ಅಲ್ಲಿಯವರೆಗೆ ಅದರೊಳಗಾಗಿ ಈ ಕಾರ್ಮಿಕ ಇಲಾಖೆಯನ್ನು ಒಂದು ಕಾರ್ಮಿಕರ ಹಿತರಕ್ಷಣೆಯ ಇಲಾಖೆಯನ್ನಾಗಿ ಮಾಡಬೇಕು. ಒಳ್ಳೆಯ ಕಾರ್ಯ ನೀತಿ ಮತ್ತು ಆದರ್ಶಗಳನ್ನು ಅದರಲ್ಲಿ ತುಂಬಿ ಅದಕ್ಕೊಂದು ಹೊಸ ಜೀವಕಳೆಯನ್ನು ಕೊಟ್ಟು ಕಾರ್ಮಿಕರ ಹಿತವನ್ನು ಕಾಯುವಲ್ಲಿ ಬೇಕಾಗುವಂಥ ಸೂಕ್ತ ನಿಬಂಧನೆಗಳನ್ನು ಮಾಡಿಕೊಂಡು ಕಾರ್ಮಿಕವರ್ಗದವರ ಏಳಿಗೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇಂಥ ಒಂದು ಕಾರ್ಮಿಕರ ರಕ್ಷಣ ಕಾರ್ಯ ತಮ್ಮ ಕಾಲದಲ್ಲಿ ಸೂಕ್ತ ರೀತಿಯಲ್ಲಿ ಸಮರ್ಪಕವಾಗಿ ಆಯಿತು ಎಂದು ಮುಂದಿನ ಜನಸಾಮಾನ್ಯರೂ ಪ್ರಶಂಶಿಸುವ ರೀತಿಯಲ್ಲಿ ತಾವುಗಳು ಕಾರ್ಯನಿರ್ವಹಣೆ ಮಾಡಬೇಕೆಂದು ಕೋರಿ ಆ ಒಂದು ವಿಶ್ವಾಸವನ್ನು ಕೂಡ ವ್ಯಕ್ತಪಡಿಸುತ್ತೇನೆ. ತಮ್ಮ ಸತ್ಕಾರ್ಯಗಳನ್ನು ಜನರು ಮುಂದೆ ನೆನಪಿನಲ್ಲಿಟ್ಟುಕೊಳ್ಳಬಹುದಾಗಿರಬೇಕು ಎಂದು ನಾನು ಆಶಿಸುತ್ತೇನೆ. ಮಂತ್ರಿ ಪದವಿ ಇಂದು ಇದ್ದು ನಾಳೆ ಹೋಗಬಹುದು. ಅದು ಯಾರಿಗೂ ಶಾಶ್ವತವಲ್ಲ ಆದರೆ ಆ ಅವಧಿಯಲ್ಲಿ ತಾವುಗಳು ನಿರ್ವಹಿಸಿದ ಮಹತ್ಸಾಧನೆಗಳನ್ನು ಜನರು ಎಂದಿಗೂ ಮರೆಯು ವುದಿಲ್ಲ. ಹಾಗೆ ತಾವುಗಳು ಜರುಗಿಸಿದ ಕ್ರಮಗಳು ಪರಿಣಾಮಕಾರಿಯಾಗಿ ಜನವರ್ಗದ ಮೇಲೆ ಉಳಿಯುತ್ತವೆ. ಇಂಥ ಕಾರ್ಮಿಕ ವರ್ಗದವರ ಕಲ್ಯಾಣಕಾರಿ ಕ್ರಮಗಳನ್ನು ತಾವುಗಳು ಯಶಸ್ವಿಯಾಗಿ ನಿರ್ವಹಿಸುತ್ತೀರಿ ಎಂದು ನಂಬಿದ್ದೇನೆ. ತಮ್ಮ ಗಮನಕ್ಕೆ ಒಂದು ವಿಚಾರ ತರುವುದೇನೆಂದರೆ, ತಾವುಗಳು ಈ ಪದವಿಯಲ್ಲಿರುವವರೆಗಾದರೂ ಕಾರ್ಮಿಕರ ಹಿತರಕ್ಷಣೆಗಾಗಿ ಸಲಹೆ-ಸೂಚನೆಗಳನ್ನು ಪಡೆದುಕೊಳ್ಳಲು ಕಾರ್ಮಿಕ ಮುಖಂಡರುಗಳನ್ನು ಕರೆದು, ಆಹ್ವಾನಿಸಿ ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರದ ಪರವಾಗಿ ಅವರನ್ನು ಕರೆದು ಚರ್ಚಿಸಿದರೆ ಎಷ್ಟೋ ಉತ್ತಮ.

ಪರಿಹಾರಗಳು ದೊರಕಬಹುದಾಗಿದೆ. ಹಿರಿಯ ಕಾರ್ಮಿಕ ಮುಖಂಡರುಗಳಾದ ಶ್ರೀ ಎಂ. ಸಿ. ನರಸಿಂಹನ್, ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಸೂರ್ಯನಾರಾಯಣ್‌ರಾವ್. ಶ್ರೀ ಅಲಂಪಳ್ಳಿ ವೆಂಕಟರಾಂ, ಮೈಕೇಲ್‌ಫರ್ನಾಂಡಿಸ್ ಹಾಗೂ ರೈತ ಸಂಘದ ಪ್ರೊ. ಶ್ರೀ ನಂಜುಂಡಸ್ವಾಮಿಯವರಂಥವರು ಇದ್ದಾರೆ; ಮಾಜಿ ಸಚಿವರಾದ ಶ್ರೀರಾಮುಲು ಇದ್ದಾರೆ. ಅಂಥವರನ್ನು ಸೇರಿಸಿ ಒಂದು ಸಲಹಾ ಸಮಿತಿಯನ್ನು ಮಾಡಿ ಕಾರ್ಮಿಕರ ಎಷ್ಟು ಸಮಸ್ಯೆಗಳು ಇವೆ ಅವುಗಳೆಲ್ಲವನ್ನು ಸಮಗ್ರವಾಗಿ ಬಗೆಹರಿಸಬೇಕೆಂದು ಕೇಳಿಕೊಂಡು ಆ ಬಗ್ಗೆ ತಾವುಗಳು ಗಮನಹರಿಸುತ್ತೀರಿ ಎಂಬ ಕಳಕಳಿಯನ್ನು ವ್ಯಕ್ತಪಡಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಸಣ್ಣ ಕಾರ್ಖಾನೆಗಳಿಂದ ಹಿಡಿದು ದೊಡ್ಡ ಕಾರ್ಖಾನೆಗಳವರೆಗೆ ಸುಮಾರು ೬ ಸಾವಿರ ಕಾರ್ಖಾನೆಗಳು ಇಂದು ಮುಚ್ಚಿವೆ. ಅವುಗಳಲ್ಲಿ ಬಹುತೇಕ ಕಾರ್ಖಾನೆಗಳು ಹತ್ತಿ ಮತ್ತು ಬಟ್ಟೆ ಗಿರಣಿಗಳಾಗಿವೆ, ಬಾಗಲಕೋಟೆ, ದಾವಣಗೆರೆ, ಮೈಸೂರು ಮುಂತಾದ ಕಡೆಗಳಲ್ಲಿ ಮುಚ್ಚಲ್ಪಟ್ಟ ಇಂಥ ಕಾರ್ಖಾನೆಗಳಲ್ಲಿ ಪ್ರತಿಯೊಂದರಲ್ಲಿಯೂ ೨೦ ರಿಂದ ಹಿಡಿದು ೫ ಸಾವಿರ ಜನ ಕಾರ್ಮಿಕರುಗಳು ಕೆಲಸ ಮಾಡುತ್ತಿದ್ದರು. ಈ ಕಾರ್ಖಾನೆಗಳು ಮುಚ್ಚಿರುವುದರಿಂದ ಸುಮಾರು ೫೦ ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರು ಇಂದು ಬೀದಿಪಾಲಾಗಿದ್ದಾರೆ. ಇದರಿಂದ ಕಾರ್ಮಿಕ ವರ್ಗದವರಿಗಾದ ಕಷ್ಟನಷ್ಟಗಳು ಎಷ್ಟೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮೈಸೂರಿನ ಕೃಷ್ಣರಾಜೇಂದ್ರ ಗಿರಣಿಯು ಮುಚ್ಚಿ ಎಷ್ಟು ವರ್ಷಗಳಾದುವು ? ಅದೊಂದು ಚರಿತ್ರೆಯೇ ಆಗತಕ್ಕಂಥಾ ವಿಷಯವಾಗಿದೆ. ಮೊದಲು ಅದಕ್ಕೆ ರಾಜಮನೆತನದವರ ಆಶ್ರಯ ಕೂಡ ಇತ್ತು. ಅಂದರೆ ಅದರ ಮಹತ್ವ ಗೊತ್ತಾಗುತ್ತದೆ. ಅಂಥ ಒಂದು ಮಿಲ್ ಕೆಲವು ವರ್ಷಗಳಿಂದ ಮುಚ್ಚಿ ಅಲ್ಲಿನ ಕಾರ್ಮಿಕ ವರ್ಗ ಬೀದಿಪಾಲಾದರೆ. ಕೆಲವು ಹೆಣ್ಣುಮಕ್ಕಳು ತಮ್ಮ ಸೌಭಾಗ್ಯದ ಕುರುಹಾದ ಮಾಂಗಳಸೂತ್ರವನ್ನು ಕೂಡ ಮಾರಿಕೊಂಡಿರತಕ್ಕ ನಿದರ್ಶನ ಇದೆ. ಊಟಕ್ಕೆ ಗತಿಯಿಲ್ಲದೇ ಎಷ್ಟೋ ಜನರು ಇಂದು ಬೀದಿಯಲ್ಲಿ ಭಿಕ್ಷೆ ಬೇಡುತ್ತಾ ಇದ್ದಾರೆ. ಆ ಜನರು ಇಂದು ನಾನಾ ವಿಧವಾದ ಕಷ್ಟನಷ್ಟಗಳಿಗೆ ತುತ್ತಾಗಿದ್ದಾರೆ.

ಮೈಸೂರಿನ ಕೃಷ್ಣರಾಜೇಂದ್ರ ಮಿಲ್ ಹಿಂದೆ ರಾಜಾಶ್ರಯದಲ್ಲಿದ್ದಾಗ ಅದರ ಕಾರ್ಮಿಕರು ರಾಜಾಶ್ರಯದಲ್ಲಿದ್ದಹಾಗೇ ಇದ್ದವರು ಇವತ್ತು ಬೀದಿ ಭಿಕಾರಿಗಳಾಗಿದ್ದಾರೆ. ಇವತ್ತು ಕರ್ನಾಟಕದಲ್ಲಿ ಸುಮಾರು ೬,೦೦೦ ಕಾರ್ಖಾನೆಗಳು ಮುಚ್ಚಿದ್ದು ೫೦,೦೦೦ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಯಾವುದೇ ಕಾರ್ಖಾನೆಯನ್ನು ಮುಚ್ಚಬೇಕಾದರೆ ಒಂದು ನಿಯಮ ಇದೆ. ಸರ್ಕಾರದ ಅನುಮತಿಯನ್ನು ಪಡೆದು ಕಾರ್ಖಾನೆಯನ್ನು ಮುಚ್ಚಬೇಕು. ಈಗ ಮುಚ್ಚಿರತಕ್ಕ ಬಹುತೇಕ ಕಾರ್ಖಾನೆಗಳವರು ಸರ್ಕಾರದ ಅನುಮತಿ ಪಡೆದಿಲ್ಲ. ಅಂದ ಮೇಲೆ ಆ ಕಾರ್ಖಾನೆಗಳ ಮೇಲೆ ಕ್ರಮ ಜರುಗಿಸುವ ಅವಕಾಶ ತಮಗಿದೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ಎಷ್ಟು ಕಾರ್ಖಾನೆಗಳು ಮುಚ್ಚಿವೆ ಎಷ್ಟು ಜನ ಕಾರ್ಮಿಕರು ಹೊರಗಡೆ ಬಂದಿದ್ದಾರೆ ಇವೆಲ್ಲದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡುವುದಕ್ಕೆ ಒಂದು ಶ್ವೇತ ಪತ್ರ ಹೊರಡಿಸಿ ನಾನು ಆಗಲೇ ತಮಗೆ ಹೇಳಿದ ಹಾಗೆ, ತಾವು ಕಾರ್ಮಿಕ ಮುಖಂಡರಿದ್ದೀರಿ ವಿಶಾಲವಾಗಿ ಯೋಚನೆ ಮಾಡುವವರಾಗಿದ್ದೀರಿ. ತಾವು ರಾಜಕೀಯ ಮಾಡುವವರಲ್ಲ, ಕಮ್ಯುನಿಸ್ಟರನ್ನು ಬೆಳೆಸಬೇಕೆಂಬುವವರಲ್ಲ. ಆದ್ದರಿಂದ ಎಲ್ಲ ರಾಜಕೀಯ ಮುಖಂಡರನ್ನೂ ಕರೆದು ಅವರ ಸಲಹೆಯನ್ನು ತೆಗೆದುಕೊಂಡು ಈ ಬಗ್ಗೆ ಪರಿಣಾಮಕಾರಿಯಾಗಿ ಏನು ಮಾಡಬೇಕೋ ಅದನ್ನು ಕೈಗೊಳ್ಳಬೇಕೆಂದು ಕೇಳುತ್ತೇನೆ.

ಈ ವ್ಯಾಜ್ಯಗಳನ್ನು ತೀರ್ಮಾನ ಮಾಡುವುದಕ್ಕೆ ಕಾರ್ಮಿಕರ ನ್ಯಾಯಾಲಯಗಳಿವೆ. ಆದರೆ ಎಷ್ಟೋ ವರ್ಷಗಳಿಂದ ಅವುಗಳಿಗೆ ನ್ಯಾಯಾಧೀಶರಿಲ್ಲ. ಈಗಲೇ ಮೊಕದ್ದಮೆಗಳು ಇತ್ಯರ್ಥವಾಗುವುದಕ್ಕೆ ಹತ್ತಾರು ವರ್ಷಗಳಾಗುತ್ತವೆ. ಇನ್ನು ನ್ಯಾಯಾಧೀಶರಿಲ್ಲದಿದ್ದರೆ ಹೇಗೆ ? ಅಂತಹ ಕಡೆಗಳಲ್ಲೆಲ್ಲ ಕೂಡಲೇ ನ್ಯಾಯಾಧೀಶರನ್ನು ನೇಮಕ ಮಾಡಿ. ಎಲ್ಲಿ ಕಾರ್ಮಿಕರ ಪರವಾಗಿ ಕೇಸುಗಳು ಇವೆಯೋ ಅಲ್ಲಿ ತೀವ್ರ ಕ್ರಮ ಕೈಗೊಂಡು ಅವರಿಗೆ ನ್ಯಾಯ ಕೊಡಿಸಿ. ಇವಲ್ಲದೆ ಇನ್ನೂ ಕೆಲವು ಕಾರಣಗಳು ಉದ್ಭವಿಸುತ್ತವೆ. ರಾಷ್ಟ್ರಪತಿಯವರನ್ನು ಕರೆದುಕೊಂಡು ಬಂದು ಕೆಲವು ಸಲ ಉದ್ಘಾಟನೆ ಮಾಡಿಸುತ್ತಾರೆ. ಒಂದು ವರ್ಷದ ಮೇಲೆ ಅದನ್ನು ಮುಚ್ಚುತ್ತಾರೆ ಅಥವಾ ಬೇರೆಯವರ ಹೆಸರಿನಲ್ಲಿ ಕಾರ್ಖಾನೆ ಮಾಡುತ್ತಾರೆ. ಈ ರೀತಿಯ ಕೆಟ್ಟ ಪ್ರವೃತ್ತಿಗೆ ತಾವು ಕಡಿವಾಣ ಹಾಕಬೇಕು. ಈಗಾಗಲೇ ಕೆಲವು ಕಾರ್ಖಾನೆಗಳವರು ತಮ್ಮ ಅಧೀನದಲ್ಲಿರುವ ಆಸ್ತಿಯನ್ನು ಮಾರುವುದಕ್ಕೆ ಸರ್ಕಾರದ ಅನುಮತಿಯನ್ನು ಕೇಳುತ್ತಿದ್ದಾರೆ. ಅವರ ಉದ್ದೇಶವೇನೆಂದರೆ, ಆಸ್ತಿಯನ್ನು ಮಾರಿ ಕಾರ್ಮಿಕರಿಗೆ ಕೊಡುವುದಲ್ಲ, ಆ ಹಣವನ್ನು ಬೇರೆಕಡೆಗೆ ತೆಗೆದುಕೊಂಡು ಹೋಗಬೇಕೆಂಬುದು. ಇಂತಹ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಎಷ್ಟಿವೆ ಎಂದು ತಾವು ಯೋಚನೆ ಮಾಡಬೇಕು ಮತ್ತು ಅಂಥವರಿಗೆ ಆಸ್ತಿಯನ್ನು

ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡಬಾರದು. ನೀವು ಒಂದು ತ್ರಿಪಕ್ಷೀಯ ಸಮಿತಿ ಎಂದು ಮಾಡಿ. ಅದರಲ್ಲಿ ಸರ್ಕಾರದ ಪ್ರತಿನಿಧಿ, ಕಾರ್ಖಾನೆಯ ಮಾಲೀಕರ ಪ್ರತಿನಿಧಿ ಮತ್ತು ಕಾರ್ಮಿಕರ ಪ್ರತಿನಿಧಿ ಈ ಮೂರೂ ಜನ ಇರುವ ತ್ರಿಪಕ್ಷೀಯ ಸಮಿತಿಯನ್ನು ರಚನೆ ಮಾಡಿ ಅದರ ಮೂಲಕ ತಾವು ಅನುಕೂಲಗಳನ್ನು ಪಡೆಯಬೇಕು. ಸರ್ಕಾರದ ಅನುಮತಿ ಇಲ್ಲದೆ ಮುಚ್ಚಿರತಕ್ಕಂಥ ಕಾರ್ಖಾನೆಗಳ ಒಂದು ಲಿಸ್ಟನ್ನು ಮಾಡಿ. ಎಷ್ಟು ಕಾರ್ಖಾನೆಗಳಿವೆ, ಯಾವ ಯಾವ ಕಾರಣಗಳಿಗಾಗಿ ಆ ಕಾರ್ಖಾನೆಗಳನ್ನು ಮುಚ್ಚಿದ್ದಾರೆ ಎನ್ನುವುದರ ಬಗ್ಗೆ ತಾವು ಸಮಗ್ರವಾಗಿ ಚಿಂತನೆ ನಡೆಸಬೇಕು. ಇದನ್ನು ನಡೆಸದೆ ಇದ್ದರೆ ಇವತ್ತು ಅತ್ಯಂತ ಶೋಚನೀಯವಾದಂಥ ಪರಿಸ್ಥಿತಿ ಬರುತ್ತದೆ. ಈ ಕಾರ್ಮಿಕ ಇಲಾಖೆಗೆ ನೀವು ಹೊಸ ಒಂದು ಕಾಯಕಲ್ಪ ಮಾಡಬೇಕಾಗಿದೆ. ಈ ಕಾರ್ಖಾನೆಗಳ ಇ.ಎಸ್.ಐ. ಆಸ್ಪತ್ರೆಗಳು ಯಾವಿವೆ ಅವುಗಳಿಂದ ಕಾರ್ಮಿಕರಿಗೆ ಯಾವ ಅನುಕೂಲ ಸಿಗಬೇಕಾಗಿತ್ತೋ ಅದು ಸಿಗುತ್ತಿಲ್ಲ.

ಈಗ ಕಾರ್ಖಾನೆಗಳೇ ಕೆಲವು ಕಡೆ ಆಸ್ಪತ್ರೆಗಳನ್ನು ನಡೆಸುತ್ತಿವೆ. ಮೈಸೂರು ಸಿಮೆಂಟ್ಸ್‌ನವರು ನಡೆಸತಕ್ಕಂಥ ಒಂದು ಆಸ್ಪತ್ರೆ ಬಹಳ ಚೆನ್ನಾಗಿದೆ. ಕೆ.ಎಸ್.ಆರ್.ಟಿ.ಸಿ.ಯವರು ನಡೆಸತಕ್ಕಂಥ ಆಸ್ಪತ್ರೆ ಚೆನ್ನಾಗಿದೆ. ಆದುದರಿಂದ ಕೆಲವರು ಯಾರ್ಯಾರು ಸ್ವತಃ ಆಸ್ಪತ್ರೆಯನ್ನು ನಡೆಸುತ್ತಾರೋ ಅವರಿಗೆ ಆಸ್ಪತ್ರೆಯ ವ್ಯವಸ್ಥೆಯನ್ನು ತಾವು ಕೊಡತಕ್ಕಂಥದ್ದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ನಾನು ಕಳಕಳಿಯಿಂದ ಪ್ರಾಮಾಣಿಕವಾಗಿ ಹೇಳುತ್ತೇನೆ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಬೆಳಗೊಳ ಕಾಗದದ ಕಾರ್ಖಾನೆಯಲ್ಲಿ ೧೦-೧೫ ವರ್ಷಗಳಿಂದ ದಿನಗೂಲಿ ಕೆಲಸ ಮಾಡತಕ್ಕಂಥವರನ್ನು ಹೊರಗಡೆ ಹಾಕಿ ಅವರಿಗೆ ಇಲ್ಲದ ಸಲ್ಲದ ತೊಂದರೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರನ್ನು ಕರೆಸಿ ಅವರ ಪರಿಸ್ಥಿತಿಯನ್ನು ತಾವು ಕೂಡಲೇ ಸರಿಪಡಿಸಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮತ್ತು ಇವತ್ತು ಈ ಒಂದು ಕಾರ್ಮಿಕ ಇಲಾಖೆಯನ್ನು ಅಲಕ್ಷ್ಯ ಮಾಡದೆ ಕಾರ್ಮಿಕ ಇಲಾಖೆಗೆ ಹೊಸ ಚೈತನ್ಯವನ್ನು ಕೊಡತಕ್ಕಂಥ ನೀತಿ ತಮ್ಮದಾಗಬೇಕು ಎಂದು ಹೇಳುತ್ತೇನೆ. ಬೇರೆ ವಿಚಾರವಾಗಿ ನಾನು ಹೇಳುತ್ತಿದ್ದೇನೆ. ಈ ಸ್ಟಾಂಪ್ ಡ್ಯೂಟಿ. ಇದು ಒಂದು ಬಹಳ ದೊಡ್ಡ ದುರಂತ. ಎಲ್ಲಿ ಯಾವ ಯಾವ ರೀತಿಯಲ್ಲಿ ಸ್ಟಾಂಪ್ ಡ್ಯೂಟಿಯನ್ನು ಕೊಡಬೇಕು ಎನ್ನತಕ್ಕಂಥದ್ದನ್ನು ಸರ್ಕಾರ ನಿರ್ಧಾರ ಮಾಡಬೇಕು. ಏಕೆಂದರೆ, ಒಬ್ಬೊಬ್ಬರು ಒಂದು ರೀತಿ ಕೊಡುತ್ತಿದ್ದಾರೆ. ಬಿ.ಡಿ.ಎ. ಬಗ್ಗೆ ಉದಾಹರಣೆಗಾಗಿ ಹೇಳುತ್ತೇನೆ. ೧೮ನೇ ಏಪ್ರಿಲ್‌ನಲ್ಲಿ ಜಮೀನು ಮೊತ್ತದ ಮೇಲೆ ರಿಜಿಸ್ಟರ್ ಮಾಡಿಸಬೇಕು ಎಂದು ಬಿ.ಡಿ.ಎ ನವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಏನು ಜಮೀನು ಇದೆ, ಅದರ ಮೊತ್ತದ ಮೇಲೆ ಸ್ಟಾಂಪ್ ಡ್ಯೂಟಿ ಕೊಡಬೇಕು ಎಂದು ನಿರ್ಣಯ ಮಾಡಿದೆ. ಅದನ್ನು ಬಿಟ್ಟು ಅಲ್ಲಿ ಕಟ್ಟತಕ್ಕಂಥ ಮನೆಗಳು, ಅಲ್ಲಿ ಫ್ಲಾಟ್‌ಗಳು, ಅಲ್ಲಿ ಕಟ್ಟತಕ್ಕಂಥ ಎಲ್ಲರೂ ಕೂಡಾ ಸ್ಟಾಂಪ್ ಡ್ಯೂಟಿಯನ್ನು ಕೊಡಬೇಕು ಎನ್ನತಕ್ಕಂಥ ದ್ವಂದ್ವನೀತಿ ಇದೆಯಲ್ಲಾ, ಇದರ ಬಗ್ಗೆ ತಾವು ತೀವ್ರತರವಾಗಿ ಗಮನವನ್ನು ಹರಿಸಬೇಕು. ಬಿ.ಡಿ.ಎ.ನವರು ತಮ್ಮ ಹಣಕಾಸಿನ ನೆರವಿನಿಂದ ಕೊಡತಕ್ಕಂಥ ಮನೆಗಳು ಏನು ಇದೆ, ಆ ಮನೆಗಳವರು ಸ್ಟಾಂಪ್ ಡ್ಯೂಟಿಯನ್ನು ಕೊಡಬೇಕು ಎಂದು ಹೇಳಿದರೆ ಬಹಳ ಅನ್ಯಾಯವಾಗುತ್ತದೆ. ಅಲ್ಲಿರತಕ್ಕಂಥವರು ಬಹಳ ಮಧ್ಯಮ, ತೀರಾ ಕೆಳದರ್ಜೆಯವರು, ಅತ್ಯಂತ ಕಡಿಮೆ ತೀರಾ ತೊಂದರೆಯಲ್ಲಿರತಕ್ಕಂಥ ಜನ ಇರುತ್ತಾರೆ. ದಯಮಾಡಿ ಇದನ್ನು ಗುರುತು ಹಾಕಿಕೊಂಡು ಅದರ ಬಗ್ಗೆ ತೀವ್ರತರವಾಗಿ ಪರಿಶೀಲನೆಯನ್ನು ನಡೆಸಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ಇದು ಬಹಳ ಮುಖ್ಯವಾದುದು. ಇದರ ಬಗ್ಗೆ ಒಂದು ಬದಲಾವಣೆ ಆಗಬೇಕು. ಎಲ್ಲದಕ್ಕೂ ಸ್ಟಾಂಪ್ ಡ್ಯೂಟಿ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಒಂದು ಕಡೆಗೆ ಜಮೀನಿಗೆ ಹಾಕುತ್ತಾರೆ, ಅದು ಸರಿ. ಆದರೆ ಜಮೀನಿನ ಮೇಲೆ ಕಟ್ಟತಕ್ಕಂಥ, ಅದರ ಮೇಲೆ ಕಟ್ಟತಕ್ಕಂಥ ಮಹಡಿ ಮನೆ ಎಲ್ಲದಕ್ಕೂ ಸ್ಟಾಂಪ್ ಡ್ಯೂಟಿ ಕೊಡಬೇಕು ಎಂದು ಹೇಳಿದರೆ ಸರಿಹೋಗುವುದಿಲ್ಲ. ದಯಮಾಡಿ ಇದನ್ನು ಸ್ವಲ್ಪ ತೀವ್ರತರವಾಗಿ ಯೋಚನೆ ಮಾಡಬೇಕು. ನಿಮ್ಮಲ್ಲಿ ಮುಜರಾಯಿ ಇಲಾಖೆ ಏನಿದೆ. ಈ ಮುಜರಾಯಿ ಇಲಾಖೆ ಬಗ್ಗೆ ಚೆನ್ನಾಗಿ ನಡೆಸಿಕೊಂಡರೆ ತಮಗೆ ಪುಣ್ಯ ಬರುತ್ತದೆ. ತಾವು ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೆ ಪಾಪ ಬರುತ್ತದೆ. ಏಕೆಂದರೆ ಅದು ದೇವರುಗಳು ಇರತಕ್ಕಂಥ ಇಲಾಖೆ. ಆದುದರಿಂದ ನಾನು ತಮ್ಮಲ್ಲಿ ಹೇಳುತ್ತಿದ್ದೇನೆ. ಬಹಳ ಜನ ಪೂಜಾರಿಗಳು ನಮಗೆ ಹೇಳುತ್ತಾರೆ. ಮಂಗಳಾರತಿ ಕಾಸು ಬಿಟ್ಟರೆ ಯಾವುದೋ ಹಳೆಯ ಕಾಲದಲ್ಲಿ ನಿಗದಿ ಮಾಡಿದ ಐದು ರೂಪಾಯಿ, ಮೂರು ರೂಪಾಯಿ ಸಂಬಳವನ್ನು ನಮಗೆ ಕೊಡುತ್ತಿದ್ದಾರೆ ಎಂದು ಹೇಳುತ್ತಾರೆ. ಅನೇಕ ದೇವಸ್ಥಾನಗಳವರು ಹೇಳುತ್ತಾರೆ. ತಾವು ಕಂದಾಯ ಸಚಿವರಾಗಿ ದೇವಸ್ಥಾನಗಳಿಗೆ ಹೋದರೆ ತಮ್ಮನ್ನು ಕರೆಯುತ್ತಾರೆ. ಬಹಳ ಅತ್ಯಂತ ಪ್ರೀತಿ

ವಿಶ್ವಾಸದಿಂದ ಒಳಗೆ ಬನ್ನಿ ಎಂದು ಕರೆಯುತ್ತಾರೆ. ಅವರು ನಿಮ್ಮನ್ನು ಏತಕ್ಕೆ ಕರೆಯುತ್ತಾರೆ ಎಂದರೆ, ಮಂತ್ರಿಗಳು ಬಂದಿದ್ದಾರೆಂದು ಕರೆಯುತ್ತಾರೆ. ಅವರಿಗೆ ನಿಜವಾಗಲೂ ಸಂಕಟ ಇದೆ. ಅವರು ಯಾವುದೇ ವರ್ಗದವರಾಗಲೀ. ಯಾರೇ ಪೂಜೆ ಮಾಡಲಿ ನಾನು ನೋಡಿದ್ದೇನೆ. ಈ ರಾಜ್ಯದಲ್ಲಿ ದೇವಸ್ಥಾನಗಳಲ್ಲಿ ಪೂಜೆ ಮಾಡತಕ್ಕಂಥ ಪೂಜಾರಿಗಳು ಮಂಗಳಾರತಿ ಕಾಸು ಬಿಟ್ಟರೆ ಅವರು ಸಂಬಳದಿಂದ ಮಾತ್ರ ಬದುಕುವುದಕ್ಕಾಗುವುದಿಲ್ಲ. ಅವರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಿ ಅವರ ಸಂಬಳಸಾರಿಗೆಯನ್ನು ಜಾಸ್ತಿ ಮಾಡುವ ವ್ಯವಸ್ಥೆ ಇದ್ದರೆ ತಾವು ಮಾಡಬೇಕು. ಇವತ್ತು ರಾಜ್ಯದಲ್ಲಿರತಕ್ಕಂಥ ಅನೇಕ ಮುಜರಾಯಿ ದೇವಸ್ಥಾನಗಳು ಶಿಥಿಲವಾಗಿದೆ. ಶಿಥಿಲವಾಗಿರುವ ಬಗ್ಗೆ ತಾವು ಪ್ರಾಮಾಣಿಕವಾಗಿ ನೋಡಿ. ಎಲ್ಲೆಲ್ಲಿ ದೇವಸ್ಥಾನಗಳು ಶಿಥಿಲವಾಗಿವೆ ನಿಮ್ಮ ಕಾಲದಲ್ಲಿ ಆ ದೇವಸ್ಥಾನಗಳಿಗೆ ಒಂದು ದುರಸ್ತಿ ಕಾರ್ಯಕ್ರಮವನ್ನು ಹಾಕಿಕೊಂಡು ದೇವರುಗಳಿಗೆ ಪೂಜೆ ಮಾಡುವಂಥಾಗಲಿ. ಅನೇಕ ಮುಜರಾಯಿ ದೇವಸ್ಥಾನಗಳಲ್ಲಿರುವ ದೇವರುಗಳು ಪೂಜೆ ಇಲ್ಲದೇ ನೀರು ಇಲ್ಲದೆ, ಹೂವಿಲ್ಲದೇ ದಿಕ್ಕೆಟ್ಟು ದಿಕ್ಕೆಟ್ಟು ಬಯಲು ಬಿದ್ದು ಹೋಗಿವೆ. ಅಲ್ಲಿ ತಾವು ನೋಡಿ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಮತ್ತೊಂದು ಪ್ರಮುಖವಾದುದನ್ನು ನಾನು ತಮಗೆ ಹೇಳುತ್ತೇನೆ. ಅನೇಕ ಜನರು ಮುಜರಾಯಿಗೆ ಸೇರಿದಂಥ ಆಸ್ತಿಗಳನ್ನು ೨೫ ವರ್ಷ, ೫೦ ವರ್ಷ, ೬೦ ವರ್ಷ, ೭೦ ವರ್ಷ ಈ ರೀತಿ ಗುತ್ತಿಗೆಗೆ ಪಡೆದಿದ್ದಾರೆ. ಇದರ ಮೇಲೆ ಲಕ್ಷಾಂತರ ರೂಪಾಯಿ ಬಾಡಿಗೆಯನ್ನು ಪಡೆದಿರತಕ್ಕಂಥ ಅನೇಕ ದೊಡ್ಡ ದೊಡ್ಡ ಅಂಗಡಿಗಳನ್ನು, ಮುಂಗಟ್ಟುಗಳನ್ನು ಕಟ್ಟಿರತಕ್ಕಂಥದ್ದೂ ಉಂಟು. ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ತರಿಸಿ ಮುಜರಾಯಿ ದೇವಸ್ಥಾನಗಳು ಎಲ್ಲೆಲ್ಲಿ ಇವೆ, ಒಂದು ಕಡೆಯಿಂದ ಆ ದೇವಸ್ಥಾನಗಳ ಜಾಗಗಳನ್ನು ಯಾರ್ಯಾರು ಲೀಸ್‌ಗೆ ಪಡೆದಿದ್ದಾರೆ. ಆ ಲೀಸಿಗೆ ಕರಾರು ಏನು ಎಂಬುದನ್ನು ಸಮಗ್ರವಾಗಿ ತರಿಸಿ ತಾವು ಅದನ್ನು ಪರಿಶೀಲನೆ ಮಾಡಬೇಕು. ಈ ರೀತಿ ಮುಜರಾಯಿ ಇಲಾಖೆಯಿಂದ ಬರುವ ನೂರಾರು ಕೋಟಿ ರೂಪಾಯಿ ಆಸ್ತಿಯ ಉಪಯೋಗವನ್ನು ಬೇರೆಯವರು ಪಡೆಯುತ್ತಿದ್ದಾರೆ.

೧೨-೦೦ ಮಧ್ಯಾಹ್ನ

ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇವೆ. ಮತ್ತೆ ಈ ಸಬ್ಜೆಕ್ಟ್‌ಗೆ ಬಂದಿರಿ ಎಂದು ಹೇಳಬೇಡಿ. ಈ ಇಲಾಖೆಗಳಲ್ಲೂ ಸಹ ಗ್ರಾನೈಟ್ ಬರುತ್ತದೆ. ಮಾನ್ಯ ಕೆ. ಹೆಚ್. ಪಾಟೀಲರು ಇದರ ಬಗ್ಗೆ ಗಮನ ಕೊಡಬೇಕು. ನಿಮ್ಮ ಇಲಾಖೆಯಲ್ಲೂ ಗ್ರಾನೈಟ್ ಬರುತ್ತದೆ. ಮುಜರಾಯಿಗೆ ಸೇರಿದ ದೇವಸ್ಥಾನಗಳು, ಬೆಟ್ಟಗಳೂ, ಗುಡ್ಡಗಳು ನಿಮ್ಮ ಇಲಾಖೆಗೆ ಸೇರುತ್ತವೆ. ಈಗ ಜಾಸ್ತಿ ಕಲ್ಲು ಒಡೆಯುತಕ್ಕಂಥಾದ್ದು ಬೆಟ್ಟ ಗುಡ್ಡಗಳ ಪ್ರದೇಶದಲ್ಲಿ. ಅದು ಅರಣ್ಯ ಇಲಾಖೆಗೂ ಸೇರುತ್ತದೆ, ತಮ್ಮ ಇಲಾಖೆಗೂ ಸೇರಿದೆ. ಈಗ ಬಿಳಿಗಿರಿ ರಂಗನ ಬೆಟ್ಟ ತಮ್ಮ ಇಲಾಖೆಗೆ ಸೇರಿದೆ. ಮಹದೇಶ್ವರ ಬೆಟ್ಟ ತಮಗೆ ಸೇರಿದೆ. ಸಾವನ ದುರ್ಗ ತಮಗೆ ಸೇರಿದೆ. ಈ ದೇವಸ್ಥಾನಗಳ ಸುತ್ತ ಈ ರೀತಿಯಾಗಿ ಕಲ್ಲು ಒಡೆಯುತಕ್ಕಂಥ ಪರಿಸ್ಥಿತಿ ಇದೆ. ಅಲ್ಲಿ ಈಗಾಗಲೆ ಬಹಳಷ್ಟು ಕಲ್ಲನ್ನು ಲೂಟಿ ಮಾಡಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಏನೇ ಅನುಮತಿ ಕೊಟ್ಟಿರಲಿ, ನಾನು ತಮಗೆ ಹೇಳುತ್ತೇನೆ. ನಿಮ್ಮ ಇಲಾಖೆಗೆ ಸೇರಿದ ಜಾಗದಲ್ಲಿ ಒಂದು ಇಂಚೂ ಸಹ ಕಲ್ಲನ್ನು ತೆಗೆಯಬಾರದು ಎಂದು ವಿಶೇಷವಾಗಿ ಬೇರೆ ಒಂದು ಆಜ್ಞೆಯನ್ನು ಹೊರಡಿಸಿ. ಆದರಿಂದ ತಮಗೆ ಒಂದು ಗೌರವ ಬರುತ್ತದೆ. ಮತ್ತು ಅಲ್ಲಿ ಕಲ್ಲು ತೆಗೆಯುವುದು ನಿಲ್ಲುತ್ತದೆ. ಗ್ರಾನೈಟ್ ಬಗ್ಗೆ ತಾವು ನೊಂದಿದ್ದೀರಿ ಎಂದು ನಾನು ಬಲ್ಲೆ. ತಾವು ಬಹಿರಂಗವಾಗಿ ಹೇಳದಿದ್ದರೂ ಗ್ರಾನೈಟ್ ಬಗ್ಗೆ, ಅದು ಲೂಟಿಯಾಗುತ್ತಿರುವ ಬಗ್ಗೆ, ಅನ್ಯಾಯ ಆಗುತ್ತಿರುವ ಬಗ್ಗೆ ತಾವು ನೊಂದಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಂ. ಪಿ. ವೆಂಕಟೇಶ್.—ರೆವಿನ್ಯೂ ಇಲಾಖೆಯು ಒಪ್ಪಿಗೆ ಕೊಡದಿದ್ದರೆ ಗ್ರಾನೈಟ್‌ಗೆ ಮಂಜೂರಾತಿ ಮಾಡುವುದೇ ಇಲ್ಲ. ತಮ್ಮ ಒಪ್ಪಿಗೆ ಬೇಕಾಗುತ್ತದೆ.

ಶ್ರೀ ಕೆ. ಶಿವಮೂರ್ತಿ.—ಈ ಮಾತನ್ನು ದೇವಸ್ಥಾನದಲ್ಲಿರುವ ದೇವರಿಗೂ ಸ್ವಲ್ಪ ನೀವು ಹೇಳಿ ಬಿಡಬೇಕು.

ಶ್ರೀ ವಾಟಾಳ್ ನಾಗರಾಜ್.—ಈಗ ದೇವರನ್ನೇ ಕಿತ್ತು ಎಸೆಯುತ್ತಿದ್ದೀರಲ್ಲ. ದೇವಸ್ಥಾನ ಇಲ್ಲ, ಏನೂ ಇಲ್ಲ. ಎಲ್ಲವನ್ನೂ ಕಂಪ್ಲೀಟ್ ಮುಗಿಸುತ್ತಿದ್ದಾರೆ. ಎಲ್ಲವನ್ನೂ ಒಡೆದು ಲೂಟಿ ಮಾಡುತ್ತಿದ್ದಾರೆ. ಗಜನಿ ಮಹಮದ್ ದಂಡಯಾತ್ರೆ ಮಾಡಿದ ಮೇಲೆ ನೆಕ್ಸ್ಟ್ ಬಂದವರು ಇವರೇ. ನಾನು ತಮಗೆ ಹೇಳುತ್ತಿದ್ದೇನೆ, ದಯವಿಟ್ಟು ಇದನ್ನು ನಿಲ್ಲಿಸಿ. ಮಾಜಿ ಶಾಸಕರಾದ ಮಾನ

ಶ್ರೀ ಶಾಮಣ್ಣನವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಇಲ್ಲಿ ಒಂದು ಕುಪ್ಪೂರ ಸ್ವಾಮಿ ದೇವಸ್ಥಾನ ಎಂದು ಇದೆ. ಇದು ತಮ್ಮ ಇಲಾಖೆಗೆ ಸೇರಿರತಕ್ಕಂಥಾದ್ದು. ಇಲ್ಲಿ ಲಕ್ಷಾಂತರ ರೂಪಾಯಿ ಲೂಟಿ ಆಗಿದೆ ಎಂದು ಪತ್ರ ಬರೆದಿದ್ದಾರೆ. ಅದನ್ನು ತಾವು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ಸಾಗುವಳಿ ಚೀಟಿಗೋಸ್ಕರ ಸಾವಿರಾರು ಜನ ಇಡೀ ರಾಜ್ಯದ್ಯಾಂತ ಕಾದಿದ್ದಾರೆ. ಅವರಿಗೆ ತಮ್ಮ ಅಧಿಕಾರಾವಧಿಯಲ್ಲಿ ತಮ್ಮ ನೇತೃತ್ವದಲ್ಲಿ, ತಮ್ಮ ನಾಯಕತ್ವದಲ್ಲಿ ತಮ್ಮಲ್ಲಿ ಅಧಿಕಾರ ಇರುವಾಗ ಸಮಗ್ರವಾಗಿ ಸಾಗುವಳಿ ಚೀಟಿಯನ್ನು ತಾವು ವಿತರಣೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್) — ಮಾನ್ಯ ಸಭಾಧ್ಯಕ್ಷಿಣಿಯವರೇ, ಇಂದಿನ ದಿವಸ ಹಿರಿಯ ಸಚಿವರಾದ ಶ್ರೀಮಾನ್ ಕೆ. ಹೆಚ್. ಪಾಟೀಲರು ಮಂಡಿಸಿದಂತಹ ಕಂದಾಯ ಇಲಾಖೆಯ ಬೇಡಿಕೆಗೆ ಬೆಂಬಲವನ್ನು ಸೂಚಿಸುತ್ತಾ, ಕೆಲವು ಸಲಹೆಗಳನ್ನು ಕೊಡಬಯಸುತ್ತಿದ್ದೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಿದ್ದಾರೆ ಮತ್ತು ಸಾಕಷ್ಟು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಆದರೆ ಈ ಇಲಾಖೆಗೆ ಎಷ್ಟರಮಟ್ಟಿಗೆ ಆದ್ಯತೆ ಕೊಡಬೇಕಾಗಿತ್ತೋ ಅಷ್ಟು ಆದ್ಯತೆಯನ್ನು ಕೊಟ್ಟಿಲ್ಲ ಎನ್ನತಕ್ಕಂಥಾದ್ದೇ ನನ್ನ ಅಪಾದನೆ ಅದು ಇವರು ಬಂದ ಮೇಲೆ ಆದ್ಯತೆ ಕೊಟ್ಟಿಲ್ಲ ಎನ್ನತಕ್ಕದು ಅಲ್ಲ. ಈಗ ಸುಮಾರು ೭-೮ ವರ್ಷಗಳಿಂದ ಇದಕ್ಕೆ ಇದ್ದಂತಹ ಮಹತ್ವ ಬಹಳ ಕಡಿಮೆ ಆಗಿದೆ. ದುರ್ದೈವ, ಹಿಂದಿನ ಸರ್ಕಾರದಲ್ಲಿ ಈ ಖಾತೆಗೆ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ, ಅಷ್ಟರ ಮಟ್ಟಿಗೆ ಆದ್ಯತೆ ಕೊಟ್ಟಿಲ್ಲ ಎನ್ನತಕ್ಕದ್ದು ನನ್ನ ಗೋಳು. ಯಾಕೆಂದರೆ, ಈ ಇಲಾಖೆ ಒಂದು ಸಲ ಶ್ರೀ ವಸಂತರಾವ್ ಪಾಟೀಲರ ಕೈಗೆ ಸಿಕ್ಕಿಬಿದ್ದಿತ್ತು. ನಾನು ಅವರ ಬಗ್ಗೆ ವೈಯಕ್ತಿಕವಾಗಿ ಆಪಾದನೆ ಮಾಡುತ್ತಿಲ್ಲ. ಆದರೆ ಹೆಚ್ಚಿನ ಆಸಕ್ತಿ ವಹಿಸಿ ಈ ಖಾತೆಯಲ್ಲಿ ಏನು ಕೆಲಸ ಮಾಡಬೇಕಾಗಿತ್ತು, ಅದು ಆಗಲಿಲ್ಲ. ಅವರು ಹೋದ ಮೇಲೆ ಕೆಲವು ದಿವಸ ಮಾನ್ಯ ಬೊಮ್ಮಾಯಿಯವರು ಈ ಇಲಾಖೆಯನ್ನು ನೋಡಿಕೊಂಡರು. ಆದರೆ ಅವರ ಜಗಳದಲ್ಲಿ ಅಂದರೆ, ಜನತಾ ದಳ, ಜನತಾ ಪಕ್ಷದ ಜಗಳದಲ್ಲಿ ಇವರು ಕೂಡ ಅಷ್ಟು ಲಕ್ಷ್ಯ ಕೊಡಲಿಕ್ಕೆ ಆಗಲಿಲ್ಲ. ತದನಂತರ ಮಾನ್ಯ ಜೆ. ಹೆಚ್. ಪಟೇಲರು ಬಂದರು. ಅವರೂ ಕೂಡ ಈ ಜಗಳದಲ್ಲಿಯೇ ಕಾಲ ಕಳೆದರು. ಹಾಗಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಏನು ಒಂದು ವಿಶೇಷವಾದ ಮಹತ್ವ ಹಿಂದಿನ ಸರ್ಕಾರದಲ್ಲಿ ಇತ್ತೋ ಅದನ್ನು ಕಳೆದುಕೊಂಡು ಹೋಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ, ಒಬ್ಬ ಡೆಪ್ಯುಟಿ ಕಮೀಷನರ್ ಅಂದರೆ, ಜಿಲ್ಲೆಯಲ್ಲಿರತಕ್ಕ ಒಬ್ಬ ಮುಖಂಡ ಅಂದರೆ, ಒಬ್ಬ ಕ್ಯಾಪ್ಟನ್ ಎಂದು ನಾವು ಅವರನ್ನು ಟ್ರೀಟ್ ಮಾಡುತ್ತೇವೆ. ಯಾವುದೇ ವಿಷಯ ಬಂದರೂ, ಅದು ಅಡ್ಮಿನಿಸ್ಟ್ರೇಟೀವ್ ಮ್ಯಾಟರ್ ಇರಲಿ, ಲಾ ಅಂಡ್ ಆರ್ಡರ್ ಇರಲಿ, ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು ಇರಲಿ ಅಥವಾ ಯಾವುದೇ ಇಲಾಖೆಗೆ ಸಂಬಂಧಪಟ್ಟದ್ದು ಇದ್ದರೂ ಕೂಡ ನೇರವಾಗಿ ಅವರಿಗೆ ಹೇಳತಕ್ಕಂಥಾದ್ದು, ಕೊಡತಕ್ಕಂಥಾದ್ದು, ಅವರ ಮುಖಾಂತರ ಕೆಲಸ ಮಾಡಿಕೊಳ್ಳತಕ್ಕಂಥ ಪದ್ಧತಿ ಮೊದಲಿನಿಂದಲೂ ಬಂದಿದೆ. ಆದರೆ ಇತ್ತೀಚೆಗೆ ಏನಾಗಿದೆಯೆಂದರೆ. ಬೇರೆ ಎಲ್ಲ ಡಿಪಾರ್ಟ್‌ಮೆಂಟ್‌ಗಳು ತಮ್ಮಷ್ಟಕ್ಕೆ ಪವರ್‌ಫುಲ್ ಆಗಿವೆ. ಆದರೆ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಆಡಳಿತ ಮಾತ್ರ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಅನೇಕ ಸಲ ಕೆಲವು ಮಾಹಿತಿಗಳನ್ನು ಡೆಪ್ಯುಟಿ ಕಮಿಷನರಿಗೆ ನಾವು ಕೊಡಬೇಕಾಗುತ್ತದೆ : ಏಕೆಂದರೆ, ಅದು ಅವರಿಗೇ ಗೊತ್ತಿರುವುದಿಲ್ಲ ಇವತ್ತು ಮುಖ್ಯವಾಗಿ ಜಿಲ್ಲೆಯಲ್ಲಿ ಏನು ನಡೆಯುತ್ತದೆ, ಏನು ಮಾಡಬೇಕು ಎನ್ನುವುದು ಮತ್ತು ಅದು ಡೆವಲಪ್‌ಮೆಂಟ್ ವರ್ಕ್ ಇರಬಹುದು, ರೆವಿನ್ಯೂ ಮ್ಯಾಟರ್ ಇರಬಹುದು ಅಥವಾ ಬೇರೆ ಕೆಲಸ ಇರಬಹುದು, ಇವೆಲ್ಲವನ್ನೂ ಸಮಗ್ರವಾಗಿ ನೋಡಿಕೊಂಡು ಹೋಗತಕ್ಕಂಥ ಒಂದು ಸಂಪೂರ್ಣ ಜವಾಬ್ದಾರಿ ಅವರ ಮೇಲೆ ಇರುತ್ತದೆ. ಇವತ್ತು ಫ್ಯಾಮಿನ್ ಇರಬಹುದು, ಫ್ಲಡ್ ಇರಬಹುದು ಅಥವಾ ಯಾವುದೇ ಇರಬಹುದು, ಇವೆಲ್ಲಕ್ಕೂ ಕೂಡ ಅವರ ಮುಖಾಂತರವೇ ಬರತಕ್ಕದ್ದು. ಆದರೆ ಇವತ್ತು ಜಿಲ್ಲಾ ಪರಿಷತ್ತು ಒಂದು ಕಡೆ ಇದೆ, ರೆವಿನ್ಯು ಡಿಪಾರ್ಟ್‌ಮೆಂಟ್ ಒಂದು ಕಡೆ ಇದೆ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಒಂದು ಕಡೆ ಇದೆ. ಹೀಗಾಗಿ ಜಿಲ್ಲಾ ಮಟ್ಟದಲ್ಲಾಗಲಿ, ಡಿವಿಜನ್ ಮಟ್ಟದಲ್ಲಾಗಲಿ, ಸಬ್ ಡಿವಿಷನ್ ಮಟ್ಟದಲ್ಲಾಗಲಿ ಅಥವಾ ತಾಲ್ಲೂಕು ಮಟ್ಟದಲ್ಲಾಗಲಿ ಕೇಳತಕ್ಕವರು ಇವತ್ತು ಇಲ್ಲ. ಹಿಂದೆ ಏನಾಗುತ್ತಿತ್ತು ಅಂದರೆ, ಒಂದು ತಾಲ್ಲೂಕಾದಲ್ಲಿ ತಹಶೀಲ್ದಾರ್ ಎಲ್ಲ ಆಫೀಸರುಗಳನ್ನು ಕರೆದು ಕೋಆರ್ಡಿನೇಟ್ ಮಾಡುತ್ತಾ ಇದ್ದರು. ತಾಲ್ಲೂಕಾದಲ್ಲಿ ಡೆವಲಪ್‌ಮೆಂಟ್ ವರ್ಕ್ ಇರಬಹುದು, ಪಿಡಬ್ಲ್ಯುಡಿ ವರ್ಕ್ ಇರಬಹುದು ಅಥವಾ ಬೇರೆ ಕೆಲಸಕಾರ್ಯಗಳು ಇರಬಹುದು ; ಇವುಗಳ ಬಗ್ಗೆ ಎಲ್ಲ ಆಫೀಸರ್ಸ್‌ನ್ನು ಕರೆಸಿ ಪ್ರತಿ ತಿಂಗಳೂ ರಿವ್ಯೂ ಮಾಡತಕ್ಕ ಕೆಲಸ ನಡೆಯುತ್ತಿತ್ತು. ಸಬ್‌ಡಿವಿಜನ್

ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್ ಕರೆಸಿ ಅವರು ರಿವ್ಯೂ ಮಾಡುತ್ತಾ ಇದ್ದರು. ೨೦ ಅಂಶಗಳ ಕಾರ್ಯಕ್ರಮವಾಗಲಿ, ಡೆವಲಪ್‌ಮೆಂಟಲ್ ಆಕ್ಟಿವಿಟೀಸಾಗಲಿ ಅವುಗಳನ್ನು ಜಿಲ್ಲಾಮಟ್ಟದಲ್ಲಿ ಡೆಪ್ಯುಟಿ ಕಮೀಷನರ್ ರಿವ್ಯೂ ಮಾಡುತ್ತಿದ್ದರು, ಇವತ್ತು ಇದೆಲ್ಲಾ ಎಲ್ಲಿ ನಡೆಯುತ್ತಿದೆ? ಎಷ್ಟು ಸಲ ಡೆಪ್ಯುಟಿ ಕಮಿಷನರ್ ಕರೆಸಿ ರಿವ್ಯೂ ಮಾಡಿದ್ದಾರೆ? ಮಾನ್ಯ ಪುಟ್ಟಸ್ವಾಮಿಗೌಡರು ಬಂದಿದ್ದರು. ನನಗೆ ಒಂದು ಆಶ್ಚರ್ಯ ಏನೆಂದರೆ, ಆ ಡೆಪ್ಯುಟಿ ಕಮಿಷನರಿಗೆ ಎಲ್ಲೆಲ್ಲಿ ಏನೇನು ಆಗಿದೆ ಎಂದು ಗೊತ್ತಿಲ್ಲ. ಏಕೆಂದರೆ, ಅವರಿಗೆ ಬೇರೆಯವರು ತಿಳಿಸಿದರೆ ತಾನೇ ಗೊತ್ತಾಗುವುದು. ಲೋಕಲ್‌ನಲ್ಲಿರತಕ್ಕಂಥ ತಹಶೀಲ್ದಾರರುಗಳಿಗೆ ಎಲ್ಲಿ ಟ್ಯಾಂಕ್ ಬ್ರೀಚಾಗಿದೆ, ಎಲ್ಲಿ ರೋಡ್ ಹೋಗಿದೆ, ಎಲ್ಲಿ ಫ್ಯಾಮಿನ್ ಬಿದ್ದಿದೆ, ಎಲ್ಲಿ ಫ್ಲಡ್‌ನಿಂದ ರಸ್ತೆ ಕೊಚ್ಚಿಕೊಂಡು ಹೋಗಿದೆ ಎನ್ನತಕ್ಕ ಮಾಹಿತಿ ಕೂಡ ಇರುವುದಿಲ್ಲ. ಅವರಿಗೆ ಅಸಿಸ್ಟೆಂಟ್ ಇಂಜನಿಯರಾಗಲಿ, ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರಾಗಲಿ ತಿಳಿಸುವುದಿಲ್ಲ. ಹೀಗಾಗಿ ತಾಲ್ಲೂಕು ಮಟ್ಟದಲ್ಲಿ, ಡಿವಿಜನ್ ಮಟ್ಟದಲ್ಲಿ ಮತ್ತು ಡಿಸ್ಟ್ರಿಕ್ಟ್ ಮಟ್ಟದಲ್ಲಿ ಲ್ಯಾಕ್ ಆಫ್ ಕೊಆರ್ಡಿನೇಷನ್ ಇದೆ. ತಾವು ಇದನ್ನು ಭದ್ರಪಡಿಸಬೇಕು. ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ನಿಮ್ಮ ಕಂಟ್ರೋಲಿನಲ್ಲಿ ಇಲ್ಲದೇ ಹೋದರೆ, ತಾಲ್ಲೂಕು ಅಡ್ಮಿನಿಸ್ಟ್ರೇಷನ್ ನಿಮ್ಮ ಕಂಟ್ರೋಲಿನಲ್ಲಿ ಇಲ್ಲದೇ ಹೋದರೆ ನೀವು ಯಾವ ಕೆಲಸವನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ, ನಿಮಗೆ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಸರ್ಕಾರದ ವತಿಯಿಂದ ಕಾರ್ಯಕ್ರಮ ಕೊಡುತ್ತೀರಿ, ಕೊಟ್ಟಮೇಲೆ ಅದನ್ನು ಇಂಪ್ಲಿಮೆಂಟ್ ಮಾಡುವವರು ಯಾರು, ವೇರಿಯಸ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ. ಅದನ್ನು ಮಾಡಿದ್ದಾರೋ ಇಲ್ಲವೋ ಎಂದು ನೋಡುವವರು ಯಾರು. ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿಯ ಅಧ್ಯಕ್ಷರು ನೋಡುತ್ತಾರೆ, ರಿವ್ಯೂ ಮಾಡುತ್ತಾರೆ. ಛೇರ್ಮನ್ ಜಿಲ್ಲಾಪರಿಷತ್ತಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಾರೆಯೇ ಹೊರತು ಅದನ್ನು ಪ್ರಶ್ನೆ ಮಾಡತಕ್ಕ ಅಧಿಕಾರ ಅವರಿಗೆ ಇಲ್ಲ. ಅವರು ಅದನ್ನು ಕೇಳಿಕೊಂಡು, ರಿವ್ಯೂ ಮಾಡಿಕೊಂಡು ಕನ್ಸಲ್‌ಟೇಟೀವ್ ಕಮಿಟಿ ಇದ್ದ ಹಾಗೆ ವಿಚಾರ ಮಾಡಿಕೊಂಡು ಮನೆಗೆ ಬರುತ್ತಾರೆ. ಆದರೆ ಇದನ್ನು ಪರ್ಸ್ಯೂಮಾಡಿ ಡೆಪ್ಯುಟಿ ಕಮಿಷನರಿಗಾಗಲಿ, ಸರ್ಕಾರಕ್ಕಾಗಲಿ ತಿಳಿಸತಕ್ಕ ಕೆಲಸ ಯಾರು ಮಾಡುತ್ತಾರೆ. ಇವತ್ತು ಆ ಕೆಲಸ ನಡೆದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಕಡೆ ಲಕ್ಷ್ಯಕೊಟ್ಟು ಪ್ರತಿಯೊಂದು ತಾಲ್ಲೂಕಾದಲ್ಲಿ ಅದು ಡೆಟ್ ರಿಲೀಫ್ ಆಕ್ಟ್ ಇರಬಹುದು, ಹೌಸ್ ಸೈಟ್ ಸ್ಕೀಂ ಇರಬಹುದು ಅಥವಾ ಯಾವುದೇ ಡೆವಲಪ್‌ಮೆಂಟಲ್ ಸ್ಕೀಮ್‌ಗಳನ್ನು ರಿವ್ಯೂ ಮಾಡತಕ್ಕ ಮತ್ತು ಬೇರೆ ಡಿಪಾರ್ಟ್‌ಮೆಂಟ್‌ನವರನ್ನು ಕೇಳತಕ್ಕ ಅಧಿಕಾರವನ್ನು ತಾಲ್ಲೂಕಾ ಮಟ್ಟದಲ್ಲಿ ಇರತಕ್ಕ ಅಧಿಕಾರಿಗಳಿಗೆ ಕೊಡಬೇಕು. ಜಿಲ್ಲಾಮಟ್ಟದಲ್ಲಿ ಡೆಪ್ಯುಟಿ ಕಮಿಷನರಿಗೆ ಅಧಿಕಾರ ಕೊಡಬೇಕು, ಕೊಡದೇ ಹೋದರೆ ನಿಮಗೆ ಯಾವ ಕೆಲಸವೂ ಕೂಡ ಆಗುವುದಿಲ್ಲ. ಇವತ್ತು ಅನೇಕ ಕಡೆ ಜನ ತೊಂದರೆಗೆ ಈಡಾಗಿದ್ದಾರೆ. ಅಂತಹವರಿಗೆ ಸಹಾಯ ಮಾಡಬೇಕು ಎಂದು ಜಿಲ್ಲಾ ಪರಿಷತ್ತನ್ನು ಕೇಳಿದರೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ನನಗೆ ಸೀಮಿತವಾದಂಥ ಅಧಿಕಾರ ಇದೆ, ನಾನು ಇಷ್ಟು ಮಾತ್ರ ಮಾಡಬಹುದು, ಇದನ್ನೆಲ್ಲ ಮಾಡುವುದಿಲ್ಲ ಎಂದು ಹೇಳಬಹುದು. ಆದ್ದರಿಂದ ಇವೆಲ್ಲನ್ನೂ ಒಂದು ಕಡೆ ಸೇರಿಸಿ, ನೀವು ಡೆವಲಪ್‌ಮೆಂಟ್ ವರ್ಕ್‌ಮಾಡಿ, ನೀವು ಫುಡ್‌ಗ್ರೈನ್ಸ್ ಸಪ್ಲೈಮಾಡಿ, ನೀವು ಕೆರೆ ರಿಪೇರಿಮಾಡಿ ಎಂದು ಜಿಲ್ಲಾಮಟ್ಟದಲ್ಲಿ ಹೇಳತಕ್ಕವರು ಒಬ್ಬರು ಬೇಕಲ್ಲ.

ಅದಕ್ಕೆ ನೀವು ಡೆಪ್ಯೂಟಿ ಕಮೀಷನರ್‌ರವರಿಗೆ ಪವರ್ಸ್ ಕೊಟ್ಟು ಕೆಲಸ ತೆಗೆದುಕೊಳ್ಳಬೇಕು ಏತಕ್ಕೆ ಕೆಲಸ ಮಾಡಿಲ್ಲ ಎಂದು ನಾಳೆ ಕೇಳಬಹುದು. ಹಿಂದೆ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಇದ್ದ ಮಹತ್ವ ಇವತ್ತು ಎಷ್ಟು ಕಡಿಮೆಯಾಗಿದೆ ಅಂದರೆ ಇವತ್ತು ಅಸಿಸ್ಟೆಂಟ್ ಕಮೀಷನರ್ ಪೋಸ್ಟ್ ಮಾಡಿದರೂ ಬಹುಶಃ ಮಂತ್ರಿಗಳನ್ನು ಕೇಳುತ್ತಾರೋ ಇಲ್ಲವೋ ಗೊತ್ತಿಲ್ಲ. ಇವರು ಹಿರಿಯರು ಇದ್ದಾರೆ ಬಹುಶಃ ಇವರನ್ನು ಕೇಳುತ್ತಿರಬಹುದು ಎಂದು ನಾನು ಭಾವಿಸಿದ್ದೇನೆ. ಮುಖ್ಯವಾಗಿ ಆಡಳಿತದಲ್ಲಿ ತಾಲ್ಲೂಕು, ಸಬ್ ಡಿವಿಜನ್ ಹಾಗೂ ಜಿಲ್ಲೆ ಇವೆ. ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುವಾಗ ಕಂದಾಯ ಮಂತ್ರಿಗಳನ್ನು ಕನ್‌ಸಲ್ಟ್ ಮಾಡಿ ನೇಮಕ ಮಾಡಬೇಕೆನ್ನುವುದು ನನ್ನ ವಾದ. ಏಕೆಂದರೆ ಡೆಪ್ಯೂಟಿ ಕಮೀಷನರಿಗೆ ರೆವಿನ್ಯೂ ಮ್ಯಾಟರ್ಸನ್ನು ಎಂಟರೆಸ್ಟ್ ಮಾಡಿದ್ದೀರಿ. ಹಿಂದೆ ಸ್ಪೆಷಲ್ ಡಿ. ಸಿ. ಇರುತ್ತಿದ್ದರು. ಅವರು ರೆವಿನ್ಯೂ ಮ್ಯಾಟರ್ಸ್ ನೋಡುತ್ತಿದ್ದರು. ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುವಾಗ ನಿಮ್ಮನ್ನು ಕನ್‌ಸಲ್ಟ್ ಮಾಡದೇ ಇದ್ದರೂ ಕನಿಷ್ಟ ಪಕ್ಷ ಸ್ಪೆಷಲ್ ಡಿ. ಸಿ. ಯವರನ್ನು ಕನ್‌ಸಲ್ಟ್ ಮಾಡಿ ಹಾಕಿದ್ದರೆ ಅವರಿಂದ ಕೆಲಸ ತೆಗೆದುಕೊಳ್ಳತಕ್ಕಂಥ ಅವಕಾಶ ಸಿಗುತ್ತಿತ್ತು. ಜಿಲ್ಲಾಧಿಕಾರಿಗಳ ಗುಪ್ತ ವರದಿ ಕೂಡ ನಮ್ಮ ರೆವಿನ್ಯೂ ಮಂತ್ರಿಗಳ ಮುಖಾಂತರ ಹೋಗುವುದು ಅವಶ್ಯವೆಂದು ನಾನು ಭಾವಿಸಿದ್ದೇನೆ. ಇದನ್ನು ನೀವು ಮಾಡದೇ ಹೋದರೆ ಅವರ ಮೇಲೆ ಕಂಟ್ರೋಲ್ ಇರುವುದಿಲ್ಲ. ಯಾವ ಡಿ. ಸಿ. ಗಳು ಕೆಲಸ ಮಾಡುತ್ತಾರೆ, ಬಿಡುತ್ತಾರೆ ಎನ್ನುವುದನ್ನು ನೋಡಿಕೊಂಡು

ನಮ್ಮನ್ನು ಮುಖ್ಯಮಂತ್ರಿಗಳು ಪ್ರೋಸ್ಟ್ ಮಾಡುತ್ತಾರೆ. ನಾವು ಕೆಲಸ ಮಾಡಿದರೂ ಸರಿ, ಮಾಡದಿದ್ದರೂ ಸರಿ ಎನ್ನುವ ನಿರ್ಲಕ್ಷ್ಯ ಮನೋಭಾವ ಅವರಲ್ಲಿ ಬರುತ್ತದೆ. ಅದಕ್ಕಾಗಿ ಗುಪ್ತ ವರದಿಯನ್ನು ತರಿಸಿಕೊಂಡು ಜಿಲ್ಲಾಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವುದನ್ನು ಸಮೀಕ್ಷೆ ಮಾಡತಕ್ಕಂಥದ್ದು ಅದರಲ್ಲಿ ಬರೆಯತಕ್ಕದ್ದು ಅವಶ್ಯಕವೆಂದು ಹೇಳುತ್ತೇನೆ. ಈ ರೀತಿ ಮಾಡಿದರೆ ಖಂಡಿತವಾಗಿ ಹಿಡಿತ ಬರುತ್ತದೆ. ಅದರಿಂದ ಆಡಳಿತದಲ್ಲಿ ಸುಧಾರಣೆ ಬರುತ್ತದೆ. ತಮಗೆ ಪವರ್ ಹೆಚ್ಚಿಗೆ ಸಿಗಬೇಕೆಂದು ನಾನು ಹೇಳುವುದಿಲ್ಲ. ಆಡಳಿತದಲ್ಲಿ ಸುಧಾರಣೆಯಾಗಬೇಕಾದರೆ, ಅವರ ಮೂಗುದಾಣಿ ನಿಮ್ಮ ಕೈಯಲ್ಲಿದ್ದರೆ ಆಗ ನಿಮ್ಮ ಮಾತನ್ನು ಅವರು ಕೇಳುತ್ತಾರೆ. ಎಲ್ಲ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗಳನ್ನು ಜಿಲ್ಲಾ ಪರಿಷತ್ ತೆಗೆದುಕೊಂಡಮೇಲೆ ಇವರಿಗೆ ರೆವಿನ್ಯೂ ಮತ್ತು ಲಾ ಅಂಡ್ ಆರ್ಡರ್ ಬಿಟ್ಟರೆ ಬೇರೆ ಕೆಲಸ ಇಲ್ಲ. ಅದಕ್ಕೋಸ್ಕರ ಈ ಕೆಲಸವನ್ನಾದರೂ ಅವರಿಂದ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಾವು ಇದ್ದಾಗ ಹಿಂದೆ ಒಂದು ಯೋಜನೆಯನ್ನು ಹಾಕಿದ್ದೆವು. ಡೆಪ್ಯೂಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಆಫೀಸರ್ಸ್ ಏನು ಇರುತ್ತಾರೆ ಅವರಿಗೆ ಕನಿಷ್ಟ ಪಕ್ಷ ಕೂಡತಕ್ಕ ವ್ಯವಸ್ಥೆ ಚೆನ್ನಾಗಿರಬೇಕು. ಅವರ ಆಫೀಸುಗಳಿಗೆ ಯಾರೇ ಹೋಗಲಿ. ಮೀಟಿಂಗ್‌ಗಳು ಆಗಲಿ ಅಥವಾ ಬೇರೆ ಯಾವುದೇ ಕಾರ್ಯಕ್ರಮಗಳಾಗಲಿ ಸರಿಯಾದ ರೀತಿಯಿಂದ ಎಫಿಷಿಯೆಂಟಾಗಿ ಅವರು ನಡೆಸಬೇಕು ಅಂದರೆ ಆಫೀಸುಗಳು ಸರಿಯಾದ ರೀತಿಯಲ್ಲಿ ಇರಬೇಕು. ಏಕೆಂದರೆ ಹಿಂದೆ ಕಟ್ಟಿಸಿದಂತಹ ಆಫೀಸುಗಳು ಕೆಲವು ಕಡೆ ಬಿದ್ದು ಹೋಗಿವೆ, ಕೆಲವು ಕಡೆ ಸೋರುತ್ತಿವೆ. ಕೆಲವು ಕಡೆ ಆಫೀಸುಗಳಲ್ಲಿ ಕುಳಿತುಕೊಳ್ಳುವುದಕ್ಕೆ ಕುರ್ಚಿಗಳೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಡೆಪ್ಯೂಟಿ ಕಮೀಷನರ್ ಆಫೀಸ್ ತಹಶೀಲ್ದಾರ್ ಆಫೀಸ್ ಮತ್ತು ಅಸಿಸ್ಟೆಂಟ್ ಕಮೀಷನರ್‌ಗಳ ಆಫೀಸುಗಳಿವೆ. ಅದಕ್ಕೋಸ್ಕರವಾಗಿ ನಾವು ಹಿಂದೆ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಮಿನಿ ವಿಧಾನ ಸೌಧದ ಟೈಪ್ ಕಟ್ಟಡಗಳನ್ನು ಕಟ್ಟಬೇಕೆಂದು ಸಲಹೆ ಮಾಡಿದ್ದೆವು ಅದರಂತೆ ಶಿವಮೊಗ್ಗ, ಮಂಗಳೂರು, ಬೆಂಗಳೂರು, ಗುಲ್ಬರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಾರಂಭ ಮಾಡಿದೆವು. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ರಾಮಕೃಷ್ಣ ಹೆಗಡೆಯವರು ಬಂದು ಫೌಂಡೇಷನ್ ಹಾಕಿ ಹೋದರು. ಸ್ಟೀಫನ್‌ರವರ ಚುನಾವಣೆ ಸಂದರ್ಭದಲ್ಲಿ ಹಾಕಿದರು. ಫೌಂಡೇಷನ್ ಸ್ಟೋನ್ ಹಾಕಿದಮೇಲೆ ಸುಮಾರು ೨೦-೩೦ ಲಕ್ಷ ಖರ್ಚುಮಾಡಿ ಅದನ್ನು ಅಲ್ಲಿಗೆ ಬಿಟ್ಟರು. ಇಲ್ಲಿಯವರೆಗೆ ಅದು ಮೇಲಕ್ಕೆ ಏಳಲಿಲ್ಲ. ಇವತ್ತು ಅಲ್ಲಿ ಡಿ. ಸಿ. ಆಫೀಸ್ ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ನೋಡಬೇಕು. ಅದರೊಳಗೆ ಲ್ಯಾಂಡ್ ರೆಕಾರ್ಡ್ಸ್ ಆಫೀಸ್ ಇದೆ. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫೀಸ್ ಇದೆ. ಸಮಾಜ ಕಲ್ಯಾಣ ಇಲಾಖೆ ಇದೆ. ಹೀಗೆ ಅನೇಕ ಆಫೀಸುಗಳು ಅಲ್ಲಿರುವುದರಿಂದ ಅಲ್ಲಿ ಕೂಡುವುದಕ್ಕೆ ಜಾಗ ಇಲ್ಲ ಅಂತಹ ಪರಿಸ್ಥಿತಿ ಇದೆ. ಅದಕ್ಕೋಸ್ಕರ ತಾವು ೨೦ ಜಿಲ್ಲೆಗಳಲ್ಲಿ ಕೂಡ ಹಂತ ಹಂತವಾಗಿ ಪ್ರತಿ ವರ್ಷ ೪-೫ ಜಿಲ್ಲೆಗಳಲ್ಲಿ ಮಿನಿ ವಿಧಾನ ಸೌಧಗಳನ್ನು ಕಟ್ಟಿ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕು. ಮುಖ್ಯಮಂತ್ರಿಗಳ ಕ್ಷೇತ್ರವಾದ ಚಿಂಚೋಳಿ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಫೀಸಿಗೆ ತಾವು ಒಮ್ಮೆ ವಿಸಿಟ್ ಮಾಡಿ. ಅಲ್ಲಿ ಕೂಡುವುದಕ್ಕೆ ಜಾಗ ಇಲ್ಲ, ಕುರ್ಚಿಗಳು ಇಲ್ಲ. ಇಂಥ ಒಂದು ಪರಿಸ್ಥಿತಿ ಇದ್ದರೆ ಅಲ್ಲಿ ಯಾವ ಮಟ್ಟದಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ. ಜನಕ್ಕೆ ಅನುಕೂಲ ಯಾವ ರೀತಿ ಆಗುತ್ತದೆ. ಜನರು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿ, ಅವರನ್ನು ಹೊರಗಡೆ ಕರೆದುಕೊಂಡು ಬಂದು ಗಿಡಗಳ ಕೆಳಗೆ ನಿಂತು ವ್ಯವಹಾರಗಳನ್ನು ಮಾಡಿಕೊಂಡು ಬರುತ್ತಾರೆ. ಇಂತಹ ಪರಿಸ್ಥಿತಿ ಇದ್ದಾಗ ೧೭೫ ತಹಶೀಲ್ದಾರ್ ಆಫೀಸುಗಳ ಪೈಕಿ ಕನಿಷ್ಟಪಕ್ಷ ಈ ವರ್ಷ ಎಷ್ಟು ತೆಗೆದುಕೊಳ್ಳುತ್ತೀರಿ ಅದಕ್ಕೆ ಎಷ್ಟು ದುಡ್ಡು ಒದಗಿಸುತ್ತೀರಿ ಎನ್ನುವುದನ್ನು ಹೇಳಬೇಕು. ನಾನು ಬಡ್ಜೆಟ್‌ನಲ್ಲಿ ನೋಡಿದೆ. ಮೂರು ನಾಲ್ಕು ಕಡೆ ಇನ್‌ಕಂಪ್ಲೀಟ್ ಆಗಿದ್ದುದನ್ನು ಕಂಪ್ಲೀಟ್ ಮಾಡಲಿಕ್ಕೆ ಮಾತ್ರ ಪ್ರೊವಿಜನ್ ಮಾಡಿದ್ದಾರೆ, ಇವೊತ್ತು ತಹಶೀಲ್ದಾರ್ ಆಫೀಸ್ ಬಹಳ ಮುಖ್ಯವಾದಂಥ ಆಫೀಸ್. ಎಲ್ಲ ರೈತರಿಗೂ ಅದರಿಂದ ಸಹಾಯವಾಗುತ್ತದೆ. ಎಲ್ಲ ರೈತರಿಗೆ ನೇರವಾಗಿ ಸಂಪರ್ಕವಿರತಕ್ಕಂಥ ಆಫೀಸ್ ಅಂದರೆ ತಹಶೀಲ್ದಾರ್ ಆಫೀಸ್. ಅಲ್ಲಿ ಕುಳಿತುಕೊಳ್ಳುವುದಕ್ಕೆ ನಿಂತುಕೊಳ್ಳುವುದಕ್ಕೆ ಜಾಗ ಇಲ್ಲ ಅಂದರೆ, ನಿಜವಾಗಲೂ ನಾವೆಲ್ಲರೂ ತಲೆ ತಗ್ಗಿಸಬೇಕಾಗುತ್ತದೆ.

(ಶ್ರೀ ಜಿ. ಎಸ್. ಆಚಾರ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಹಿಂದೆ ಒಂದು ೨೦-೨೫ ಮಾಡಬೇಕೆಂದು ಪ್ರಾವಿಜನ್ ಮಾಡಿದ್ದರು. ಮುಂದೆ ೧೯೮೩ ಆದಮೇಲೆ ಯಾರೂ ಕೇಳಲಿಲ್ಲ. ಅದನ್ನು ಅಲ್ಲಿಗೆ ನಿಲ್ಲಿಸಿದರು. ಯಾವುದನ್ನು ಕೇಳಿದರೂ ಹಣ ಇಲ್ಲವೆಂದು ಹೇಳುತ್ತಿದ್ದರು. ಇವೊತ್ತು ಸಬ್‌ರಿಜಿಸ್ಟ್ರಾರ್ ಆಫೀಸ್‌ಗಳಿವೆ. ಅವುಗಳಿಂದ ನಿಮಗೆ ಬರತಕ್ಕ ಆದಾಯ ಸುಮಾರು ೧೧೨ ಕೋಟಿ ರೂಪಾಯಿ ಜ್ಯುಡಿಷಿಯಲ್ ಸ್ಟ್ಯಾಂಪ್ ನಾನ್

ಜುಡಿಷಿಯಲ್ ಸ್ಟ್ಯಾಂಪ್ ರಿಜಿಸ್ಟ್ರೇಷನ್ ಫೀಸ್ ಇವೆಲ್ಲವುಗಳಿಂದ ಸುಮಾರು ೧೧೨ರಿಂದ ೧೨೦ ಕೋಟಿ ರೂಪಾಯಿ ಬರುತ್ತದೆ. ಅದರಲ್ಲಿ ಕನಿಷ್ಟಪಕ್ಷ ಸುಮಾರು ಐದು ಪರ್ಸೆಂಟ್ ಆದರೂ ಡೆವಲಪ್‌ಮೆಂಟ್‌ಗೆ ಖರ್ಚು ಮಾಡಬೇಕಲ್ಲ. ನಾನು ನೂರು ಪರ್ಸೆಂಟ್ ಇದಕ್ಕೆ ಕೊಡಬೇಕೆಂದು ಹೇಳುವುದಿಲ್ಲ. ಮಿನಿಮಮ್ ಐದಾರು ಕೋಟಿ ರೂಪಾಯಿಗಳನ್ನಾದರೂ ಇದಕ್ಕೆ ಇಡಿ. ಏಕೆಂದರೆ ಅಲ್ಲಿ ರೆಕಾರ್ಡ್ಸ್ ಇಡಲಿಕ್ಕೆ ವ್ಯವಸ್ಥೆ ಬೇಕಾಗುತ್ತದೆ ಅಲ್ಲಿ ನೂರಾರು ವರ್ಷಗಳ ರೆಕಾರ್ಡ್ ಇರುತ್ತದೆ. ನಾಳೆಯ ದಿವಸ ರೈತರು ನಮಗೆ ಪಹಣಿ ಪತ್ರ ಬೇಕು ಎಂದು ಬರುವಂಥಾದು ಇರುತ್ತದೆ. ಅದೇ ರೀತಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಸೇಲ್‌ಡೀಡ್ ಮಾರ್ಟ್‌ಗೇಜ್‌ಡೀಡ್ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾದರೆ ರೆಕಾರ್ಡ್‌ಗಳನ್ನೆಲ್ಲಾ ಅಲ್ಲಿ ಸಿಸ್ಟಮ್ಯಾಟಿಕ್ ಆಗಿ ಇಟ್ಟಿದ್ದರೆ ಮಾತ್ರ ಅವುಗಳನ್ನು ತೆಗೆದುಕೊಳ್ಳಬಹುದು. ಇಲ್ಲದೇ ಹೋದರೆ ತಿಂಗಳಾನುಗಟ್ಟಲೆ ರೈತರನ್ನು ತಿರುಗಾಡಿಸುತ್ತಾರೆ. ಈಗ ಅಲ್ಲಿ ಏನಾಗಿದೆ ಅಂದರೆ ರೆಕಾರ್ಡ್ಸ್ ಇಡಲಿಕ್ಕೆ ಜಾಗ ಇರುವುದಿಲ್ಲ. ಎಲ್ಲಿಯೋ ಬಿಸಾಕಿರುತ್ತಾರೆ. ರೆಕಾರ್ಡ್ಸ್‌ನ್ನು ಹುಡುಕಿಕೊಡಬೇಕಾದರೆ, ಹುಡುಕಿ ಕೊಡತಕ್ಕಂಥ ಕ್ಲರ್ಕ್ ಬೆನ್ನು ಹತ್ತಬೇಕಾದರೆ ಸುಮಾರು ಎಂಟು ದಿವಸ ಆಗುತ್ತದೆ. ಅವನಿಗೆ ಏನಾದರೂ ಕೊಟ್ಟು ಅವನ ಕೈಕಾಲುಗಳಿಗೆ ಬಿದ್ದು ಅನೇಕ ಜನರು ಡಾಕ್ಯುಮೆಂಟ್ಸ್ ತರುತ್ತಾರೆ. ಈ ಪರಿಸ್ಥಿತಿ ಇದೆ. ಆದ್ದರಿಂದ ಈ ಕಡೆ ತಾವು ಸ್ವಲ್ಪ ಲಕ್ಷ್ಯ ಕೊಡಬೇಕು. ಆ ಆದಾಯದಲ್ಲಿ ಮಿನಿಮಮ್ ಐದು ಪರ್‌ಸೆಂಟ್ ಅದಕ್ಕೆ ಇಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನನ್ನ ಇನ್ನೊಂದು ಸಲಹೆ ಏನೆಂದರೆ ಸ್ವಾಮಿ, ಮೂರು ನಾಲ್ಕು ಕಮಿಟಿಗಳು ಆಯಿತು. ಡಿಸ್ಟ್ರಿಕ್ಟ್ ರಿ ಆರ್ಗನೈಸ್ ಮಾಡಬೇಕೆಂದು ನಮ್ಮ ರಾಜ್ಯದಲ್ಲಿ ಸುಮಾರು ಮೂರು ಸಮಿತಿಗಳು ಇಲ್ಲಿಯವರೆಗೆ ತಮ್ಮ ವರದಿಗಳನ್ನು ಸಲ್ಲಿಸಿವೆ. ಮೊದಲನೆಯದು ವಾಸುದೇವ್ ರಾವ್ ಕಮಿಟಿ, ಎರಡನೆಯದು ಹುಂಡೇಕರ್ ಕಮಿಟಿ, ಮೂರನೆಯದು ಗದ್ದೀಗೌಡ್ರ ಕಮಿಟಿ ಈ ಮೂರು ಕಮಿಟಿಗಳು ರಿಪೋರ್ಟ್‌ಗಳನ್ನು ಸಲ್ಲಿಸಿವೆ. ಅದರ ಮೇಲೆ ಏನು ನಿರ್ಣಯ ತೆಗೆದುಕೊಂಡಿದ್ದೀರಿ ಹಿಂದೆ ಒಂದೆರಡು ಸಬ್‌ಡಿವಿಜನ್ ಮಾಡಬೇಕು. ತಾಲ್ಲೂಕು ಮಾಡಬೇಕು ಎಂದು ಬಂದಿತ್ತು. ಆಗ ಬಸವಕಲ್ಯಾಣ ತಾಲ್ಲೂಕು ಸಬ್ ಡಿವಿಜನ್ ಒಂದು ಮಾತ್ರ ಕ್ರಿಯೇಟ್ ಆಯಿತು. ಮುಂದೆ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ನಾವು ಕೇಳಿದಾಗ ಏಕಾನಮಿ ಆರ್ಡರ್ ಇತ್ತು. ಈಗ ನೀವು ಡಿಸ್ಟ್ರಿಕ್ಟ್ ರೀ ಆರ್ಗನೈಷನ್ ಮಾಡದೇ ಹೋದರೆ ನಿಮಗೆ ಪ್ಲಾನಿಂಗ್ ಕಮಿಷನ್‌ನಿಂದ ಬರತಕ್ಕ ಹಣ ಕೂಡ ಸರಿಯಾದ ರೀತಿಯಲ್ಲಿ ಬರುವುದಿಲ್ಲ. ಅನೇಕ ಸಾರಿ ಪ್ಲಾನಿಂಗ್ ಕಮೀಷನ್‌ನವರು, ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆ ಅಂದರೆ ಒಂದು ಸಾರಿ Taluk as a unit ಎಂದು ತೆಗೆದುಕೊಳ್ಳುತ್ತಾರೆ ಒಂದು ಸಾರಿ District as a unit ಎಂದು ತೆಗೆದುಕೊಳ್ಳುತ್ತಾರೆ. ನೀವು ಗ್ರಾಂಟ್ ಕೊಡುವಾಗ ತಾಲ್ಲೂಕು ಅಥವಾ ಜಿಲ್ಲಾ ಲೆಕ್ಕದ ಮೇಲೆ ಹಣ ಡಿಸ್ಟ್ರಿಬ್ಯೂಟ್ ಮಾಡುತ್ತೀರಿ. ತಮಗೆ ಗೊತ್ತಿರುವ ಹಾಗೆ, ನಮ್ಮ ವಿಜಾಪುರ ಜಿಲ್ಲೆ ಜಿಯಾಗ್ರಫಿಕಲಿ ನಮ್ಮ ರಾಜ್ಯದಲ್ಲಿ ದೊಡ್ಡ ಜಿಲ್ಲೆ. ನೆಕ್ಸ್ಟ್ ಗುಲ್ಬರ್ಗ ನೆಕ್ಸ್ಟ್ ಧಾರವಾಡ. ಅದೇ ರೀತಿ ಮೈಸೂರು ಜಿಲ್ಲೆ ಇದೆ. ಈ ನಾಲ್ಕು ಜಿಲ್ಲೆಗಳನ್ನು ವಿಂಗಡಿಸಬೇಕೆಂದು ಒಂದು ರೆಕಮಂಡೇಷನ್ ಇದೆ. ತದನಂತರ ಉಡುಪಿ ಮಂಗಳೂರು ಎರಡು ಜಿಲ್ಲೆ ಮಾಡಬೇಕೆಂದು ಇದೆ. ಇದಕ್ಕೆ ಸ್ವಲ್ಪ ಖರ್ಚಾಗಬಹುದು. ಆದರೆ ಅಡ್ಮಿನಿಸ್ಟ್ರೇಟಿವ್ ಕನ್‌ವೀನಿಯನ್ಸ್ ಮತ್ತು ಜಿಯಾಗ್ರಫಿಕಲ್ ಕಂಡೀಷನ್ ಜನರ ಅನುಕೂಲ. ಇದು ಎಕನಾಮಿಕಲ್ ಆಗುತ್ತದೆಯೇ ಎನ್ನುವುದನ್ನು ನೋಡಿಕೊಂಡು ಏತಕ್ಕೆ ಮಾಡಬಾರದು. ನಮ್ಮಲ್ಲಿ ಚಿಂಚೋಳಿಯಿಂದ ನಾರಾಯಣಪುರ ಡ್ಯಾಮ್ ಏನಿದೆ, ಅದು ನಮ್ಮ ಬಾರ್ಡರ್. ಅಲ್ಲಿಗೆ ನೀವು ಲೆಕ್ಕ ಹಾಕಿಕೊಂಡರೆ ಸುಮಾರು ೩೦೦ ಕಿಲೋಮೀಟರ್ ಆಗುತ್ತದೆ ಅದೇ ರೀತಿ ಯಾದಗಿರಿಯಿಂದ ಚಿಂಚೋಳಿಗೆ ಸುಮಾರು ೨೬೦ ಕಿಲೋಮೀಟರ್ ಆಗುತ್ತದೆ. ಈ ತರಹ ಆದರೆ, ಡೆಪ್ಯುಟಿ ಕಮಿಷನರ್ ಆಗಲಿ, ತಹಶೀಲ್ದಾರ್‌ರವರು ಆಗಲಿ ಆ ತಾಲ್ಲೂಕುಗಳಲ್ಲಿ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿದೆಯೇ ?

ತಾವು ರೀ ಆರ್ಗನೈಸೇಷನ್ ಬಗ್ಗೆ ತಮ್ಮ ಫರ್ಮ್ ಆದಂತಹ ಒಪಿನಿಯನ್ ಹೇಳಬೇಕು. ತಾವು ಹೊಸದಾಗಿ ಜಿಲ್ಲೆಗಳನ್ನು ಮಾಡಬೇಕು. ಮೈಸೂರಿನಲ್ಲಿ ಚಾಮರಾಜನಗರವನ್ನೂ ಕೂಡ ಪ್ರಪೋಸ್ ಮಾಡಿದ್ದಾರೆ. ಅದೇ ರೀತಿ ಉಡುಪಿ ಗುಲ್ಬರ್ಗದಲ್ಲಿ ಯಾದಗಿರಿ ಧಾರವಾಡದಲ್ಲಿ ಗದಗ್ ಮಾಡಬೇಕೆಂದು ಹೀಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಆಳವಾಗಿ ಅಭ್ಯಾಸ ಮಾಡಿ, ಇಷ್ಟೆಲ್ಲಾ ಸವಿಸ್ತಾರವಾಗಿ ಅಭ್ಯಾಸಮಾಡಿ ಸಲಹೆ ಕೊಟ್ಟಿದ್ದಾರೆ. ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳದೇ ಹೋದರೆ ಖಂಡಿತವಾಗಿ ಜನರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ. ಪ್ಲಾನಿಂಗ್ ಕಮಿಷನ್‌ನಿಂದ ಹೆಚ್ಚಿಗೆ ಹಣ ಬರುತ್ತದೆ, ಜನರಿಗೆ ನ್ಯಾಯ ಸಿಗುತ್ತದೆ ಮತ್ತು ಲಾ ಅಂಡ್ ಆರ್ಡರ್ ಅನ್ನು ಕೂಡ ಮೈನ್‌ಟೇನ್ ಮಾಡುವುದಕ್ಕೆ ಕಾಂಪ್ಯಾಕ್ಟ್ ಡಿಸ್ಟ್ರಿಕ್ಟ್ ಇದ್ದರೆ ಸಹಾಯವಾಗುತ್ತದೆ ಹಾಗೂ ಅಲ್ಲಿ

ಅಟ್ರಾಸಿಟೀಸ್ ಕಡಿಮೆಯಾಗುತ್ತದೆ. ಜನರ ಗೋಳು ಕೂಡ ಕಡಿಮೆಯಾಗುತ್ತದೆ ಅದಕ್ಕಾಗಿ ತಾವು ದಯಮಾಡಿ ಈ ಕಡೆ ಗಮನಹರಿಸಬೇಕು. ಇವತ್ತು ತಾವು ಉತ್ತರವನ್ನು ಕೊಡುವಾಗ ಇದನ್ನು ಮಾಡುತ್ತೇವೆಂದು ಹೇಳಬೇಕು. ತಾವು ಹೇಳಿದ್ದನ್ನು ಮಾಡಿ ತೋರಿಸುವಂತಹ ಧೈರ್ಯಸ್ಥರು, ಮಾಡಿ ತೋರಿಸಿ. ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳ ಮನವೊಲಿಸಿಕೊಂಡು ಇದನ್ನು ಮಾಡಬೇಕಾಗುತ್ತದೆ, ಇದರಿಂದ ಮೈಸೂರಿಗೆ ಕೂಡ ಅನುಕೂಲವಾಗುತ್ತದೆ. ಅದೂ ಒಂದು ದೊಡ್ಡ ಜಿಲ್ಲೆ. ಇದನ್ನೆಲ್ಲಾ ತಾವು ಗಮನಿಸಿ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಫ್ಯಾಮಿನ್ ನ್ಯಾಚುರಲ್ ಕಲಾಮಿಟೀಸ್, ಫ್ಲಡ್‌ಗೆ ನಮ್ಮಲ್ಲಿ ಒಂದು ಕಾನೂನು ಇಲ್ಲ. ಎಲ್ಲಿಯಾದರೂ ಪ್ರವಾಹ ಬಂದರೆ ಮಂತ್ರಿಗಳು ಅಲ್ಲಿಗೆ ಭೇಟಿ ಮಾಡಿ ಇಷ್ಟು ದನಗಳು ಸತ್ತಿವೆ ಇಷ್ಟು ಜನರು ಸತ್ತಿದ್ದಾರೆ ಅವರಿಗೆ ನೂರು ರೂಪಾಯಿ ಗ್ರ್ಯಾಂಟ್ ಮಾಡಿ ಅಲ್ಲಿ ಜೋಪಡಿ ಸುಟ್ಟಿದೆ ತಹಶೀಲ್ದಾರ್‌ಗೆ ಪವರ್ ಇದ್ದಷ್ಟು ಕೊಡಿ ಎಂದು ಹೇಳುವುದು. ಒಂದು ಜಿ. ಓ. ಇಷ್ಯೂ ಮಾಡಿ ಅದರ ಪ್ರಕಾರ ಅವರಿಗೆ ಪವರ್ಸ್ ಕೊಡುವುದು. ಆದರೆ ಇದರ ಬಗ್ಗೆ ಸರಿಯಾದಂತಹ ಒಂದು ಕೋಡ್ ಇಲ್ಲ. ಅದರ ಬಗ್ಗೆ ಕಾನೂನು ಇಲ್ಲ. ಹಿಂದೆ ನಾವು ಕಾನೂನು ಇಲಾಖೆಗೆ ಕಳಿಸಿ ಇದರ ಬಗ್ಗೆ ಒಂದು ಕಾನೂನು ತಯಾರು ಮಾಡಬೇಕೆಂದು ಹೇಳಿದ್ದೆವು. ಅವರು ಸ್ವಲ್ಪ ಮಟ್ಟಿಗೆ ಎಕ್ಸಾಮಿನ್ ಮಾಡಿ ಇಟ್ಟಿದ್ದರು. ಅದರಲ್ಲಿ ನ್ಯಾಚುರಲ್ ಕಲಾಮಿಟೀಸ್ ಮತ್ತು ಫ್ಲಡ್. ಫ್ಯಾಮಿನ್ ಮೂರರ ಬಗ್ಗೆ ಯಾವ ರೀತಿ ರಿಲೀಫ್ ಕೊಡಬೇಕು ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕು ಪ್ರಾಪರ್ಟಿ ಹಾನಿಯಾದರೆ ಯಾವರೀತಿ ಕಾಂಪನ್‌ಸೇಷನ್ ಕೊಡಬೇಕು ಎಂಬ ಬಗ್ಗೆ ಸರಿಯಾಗಿ ವಿಚಾರ ಮಾಡಿ ಒಂದು ಸೂಕ್ತವಾದ ಕಾನೂನು ತಂದರೆ ತಕ್ಷಣ ಸ್ಥಳೀಯ ಅಧಿಕಾರಿಗಳೇ ಅವರಿಗೆ ಸಹಾಯ ಮಾಡುವುದಕ್ಕೆ ಅವಕಾಶ ಆಗುತ್ತದೆ. ಇಲ್ಲದಿದ್ದರೆ ಮಂತ್ರಿಗಳು ಹೋಗಿ ವರದಿಯನ್ನು ತರಿಸಿಕೊಂಡು ಅವರು ಒಪ್ಪಿದರೆ, ಹಣ ಇದ್ದರೆ ಕೊಡತಕ್ಕಂಥಾದ್ದು ಮತ್ತು ಹಣ ಇಲ್ಲದಿದ್ದರೆ ಇಲ್ಲ, ಇಂತಹ ಸ್ಥಿತಿಯಾಗಿದೆ. ಆದುದರಿಂದ ಇದಕ್ಕೆ ಒಂದು ಸರಿಯಾದಂತಹ ಕಾನೂನು ಇದ್ದರೆ ಅದರಲ್ಲಿ ಯಾರಿಗೆ ಪವರ್ ಕೊಟ್ಟಿರುತ್ತದೆ ಅವರು ತಕ್ಷಣ ಅಟೆಂಡ್ ಮಾಡಿ ರಿಲೀಫ್ ಕೊಡುತ್ತಾರೆ. ನಮ್ಮಲ್ಲಿ ಮೇ ೨೨ನೇ ತಾರೀಖಿನಲ್ಲಿ ಕೆರೆ ಒಡೆದರೆ, ತಕ್ಷಣ ಕ್ರಮ ತೆಗೆದುಕೊಂಡಿಲ್ಲ. ಮಂತ್ರಿಗಳು ಹೋದಾಗ ಡೆಪ್ಯುಟಿ ಕಮಿಷನರ್‌ರಿಗೆ ಹೇಳಿ ಕೊಡತಕ್ಕಂಥಾದ್ದು ಆಯಿತು. ಇಲ್ಲದಿದ್ದರೆ ಇಲ್ಲ. ಆದುದರಿಂದ ಈ ಒಂದು ಕೋಡ್ ಅನ್ನು ತಯಾರು ಮಾಡುವುದು ಅತ್ಯಂತ ಅವಶ್ಯ ಇದೆ. ಅದರಲ್ಲಿ ಫ್ಯಾಮಿನ್, ಫ್ಲಡ್ ನ್ಯಾಚುರಲ್ ಕಲಾಮಿಟೀಸ್. ಈ ಮೂರನ್ನೂ ಸೇರಿಸಿ ತಾವು ಒಂದು ಕಾನೂನನ್ನು ತರಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮೂರನೇ ಸಲಹೆ ಏನೆಂದರೆ, ಇದರ ಬಗ್ಗೆ ಅನೇಕ ಸದಸ್ಯರು ಕೂಡ ಹೇಳಿದ್ದಾರೆ, ಇದು ಎಂಡೋಮೆಂಟ್ ಆಕ್ಟ್ ಇದು ಒಂದೊಂದು ಭಾಗಕ್ಕೆ ಒಂದೊಂದು ಇದೆ. ಹೈದರಾಬಾದ್ ಕರ್ನಾಟಕಕ್ಕೆ ಬೇರೆ, ಹಳೇ ಮೈಸೂರಿಗೆ ಬೇರೆ, ಬಾಂಬೆ-ಕರ್ನಾಟಕಕ್ಕೆ ಬೇರೆ ತಮ್ಮ ಜಿಲ್ಲೆ ಮತ್ತು ಬಳ್ಳಾರಿಗೆ ಬೇರೆ ಇದೆ. ಹೀಗಿರುವಾಗ ಇದರ ಬಗ್ಗೆ ಕೂಡ ಒಂದು ಸಮಗ್ರವಾದ ಕಾನೂನನ್ನು ಬೇಗನೆ ತರಬೇಕು. ಒಂದೇ ಕಾನೂನು ಇದ್ದರೆ ಎಲ್ಲಾ ಕಡೆ ಸರಿಸಮನಾಗಿ ನೋಗುವುದಕ್ಕೆ ಅವಕಾಶವಾಗುತ್ತದೆ. ಮತ್ತು ಸಹಾಯ ಮಾಡುವುದಕ್ಕೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ನಾನು ಕೇವಲ ಸಲಹೆಗಳನ್ನು ಕೊಡುತ್ತಿದ್ದೇನೆ. ನಾನೇನೂ ಉದ್ದುದ್ದ ಭಾಷಣವನ್ನು ಮಾಡುತ್ತಿಲ್ಲ. ಹಿಂದೆ ನಮ್ಮ ಸರ್ಕಾರ ಇದ್ದಾಗ ತೋಟಿತಳವಾರರಿಗೆ ಪೆನ್‌ಷನ್‌ನನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೆವು. ಅದೇ ರೀತಿ ಪಟೇಲರಿಗೂ ಮಾಡಿದ್ದೆವು. ಯಾರು ೧೯೬೨ ರಿಂದ ಕೆಲಸ ಮಾಡುತ್ತಿದ್ದಾರೆ ಅಂಥವರಿಗೆ ತಿಂಗಳಿಗೆ ೭೫ ರೂಪಾಯಿ ಕೊಡಬೇಕೆಂದು ಮಾಡಿದ್ದೆವು ಆದರೆ, ಅನೇಕ ಜಿಲ್ಲೆಗಳಲ್ಲಿ ನಾನು ಕೇಳಿದ್ದೇನೆ ಮತ್ತು ಅನೇಕ ಜನರು ಕಂಪ್ಲೇಂಟ್ ಕೊಟ್ಟಿದ್ದಾರೆ. ಏನೆಂದರೆ ಆ ಹೆಡ್‌ನಲ್ಲಿ ಅವರಿಗೆ ಪೆನ್‌ಷನ್ ಕೊಡಲಿಕ್ಕೆ ಹಣವೇ ಬಿಡುಗಡೆ ಆಗಿಲ್ಲ. ಹೀಗಾಗಿ ಸುಮಾರು ೬ ತಿಂಗಳಿಂದ ೮ ತಿಂಗಳಿಂದ ಅವರಿಗೆ ಪೆನ್‌ಷನ್ ಬಂದಿಲ್ಲ. ಇವರಿಗೆ ಕೊಡುವುದೇ ಕೇವಲ ೭೫ ರೂಪಾಯಿ. ಈ ಸ್ಕೀಮನ್ನು ನಾವು ಏತಕ್ಕೆ ತಂದೆವು ಎಂದರೆ, ತೋಟಿತಳವಾರರು ನಿರ್ಗತಿಕರಾಗಿ ಮನೆಯಲ್ಲಿ ಕುಳಿತಿದ್ದಾರೆ. ಪಟೇಲ ಪಟ್ವಾರಿಗಳಿಗೆ ಮಾಡಿದ್ದೀರಿ, ಅದೇರೀತಿ ಇವರಿಗೂ ಮಾಡಿಕೊಡಬೇಕೆಂದು ಕೇಳಿಕೊಂಡಾಗ ನಾವು ಇವರಿಗೂ ಕೂಡ ೭೫ ರೂಪಾಯಿ ಕೊಡಬೇಕೆಂದು ಮಾಡಿದ್ದೇವೆ. ಆದರೆ ಇವತ್ತು ಅದು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುತ್ತಿಲ್ಲ ಮತ್ತು ಯಾವ ಮಂತ್ರಿಗಳೂ ಇದನ್ನು ರಿವ್ಯೂ ಮಾಡುತ್ತಿಲ್ಲ, ಇದು ದುರ್ದೈವ.

ಮಾನ್ಯ ಅಧ್ಯಕ್ಷರೆ, ಡೆಟ್ ರಿಲೀಫ್ ಆ್ಯಕ್ಟ್ ಬಗ್ಗೆ ಹೇಳುವುದಾದರೆ, ನಾನು ಕಳೆದಸಾರಿ ಮಾನ್ಯ ಸಿಂಧ್ಯರವರು ಈ ಕಡೆ ಕುಳಿತಿದ್ದಾಗ ಕೇಳಿದೆ. ಎಷ್ಟು ಕನ್‌ಫ್ಯೂಸ್ ಅಂದರೆ, ಈ ಡೆಟ್ ರಿಲೀಫ್ ಆ್ಯಕ್ಟ್

ಯಾವ ಮಂತ್ರಿಗೆ ಸಂಬಂಧಪಡುತ್ತದೆ, ಯಾವ ಇಲಾಖೆಗೆ ಬರುತ್ತದೆ ಎಂದು ಕೇಳಿದರೆ ಇದು ಯಾರಿಗೂ ಕೂಡ ಗೊತ್ತೇ ಇಲ್ಲ. ಅಂದರೆ ನಮ್ಮ ಕರ್ನಾಟಕದಲ್ಲಿರತಕ್ಕ ಬಡ ರೈತರಿಗೆ ಡೆಟ್ ರಿಲೀಫ್ ಕೊಡಬೇಕಾದರೆ ಯಾವರೀತಿ ಸಾಧ್ಯವಾಗುತ್ತದೆಂಬುದನ್ನು ನೀವೇ ಯೋಚನೆ ಮಾಡಿ. ನಾನು ಕೇವಲ ಒಂದು ವರ್ಷ ಇವರನ್ನು ಕೇಳಲಿಲ್ಲ, ಸತತವಾಗಿ ೩ ವರ್ಷಗಳಿಂದ ಕೇಳಿದರೂ ಕೂಡ ಸರ್ಕಾರದಿಂದ ಅದೇ ಉತ್ತರ ಬಂದಿದೆ. ಇದು ನನ್ನ ದುರ್ದೈವ. ಇಲ್ಲಿಯವರೆಗೂ ಕೂಡ ಯಾವಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಡೆಟ್ ರಿಲೀಫ್ ಕೊಟ್ಟಿದ್ದಾರೆ, ಎಷ್ಟು ಕೇಸುಗಳನ್ನು ಅಸಿಸ್ಟೆಂಟ್ ಕಮೀಷನರ್‌ರವರು ಡಿಸ್‌ಪೋಸ್ ಮಾಡಿದ್ದಾರೆ ಅಥವಾ ಯಾವ ಮಂತ್ರಿ ಯಾವ ಜಿಲ್ಲೆಗೆ ಹೋಗಿ ಈ ಆ್ಯಕ್ಟ್ ಪ್ರಕಾರ ರಿವ್ಯೂ ಮಾಡಿದ್ದಾರೆ ಎಂದು ಕೇಳಿದರೆ ಏನೇನೂ ಇಲ್ಲ. ಹಿಂದೆ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಏನು ಮಾಡಿದ್ದಾರೆ ಅಥವಾ ನಾವು ಏನು ಮಾಡಿದ್ದೇವೆ ಅದನ್ನು ಬಿಟ್ಟರೆ ಒಬ್ಬ ಮಂತ್ರಿಯೂ ಕೂಡ ಇದರ ಕಡೆ ಲಕ್ಷ್ಯ ಕೊಟ್ಟಿಲ್ಲ. ಏಕೆಂದರೆ, ಇದು ಬಡವರ ಕಾನೂನು, ಬಹುಶಃ ಬಡವರಿಗೆ ಅನುಕೂಲವಾಗುತ್ತದೆಂದು ಇವರು ತಮ್ಮ ಗಮನವನ್ನು ಕೊಟ್ಟಿಲ್ಲವೇನೋ ಎಂದು ಅನಿಸುತ್ತದೆ. ಆದ್ದರಿಂದ ಈಗ ತಾವಾದರೂ ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಡೈರಕ್ಷನ್ ಕೊಟ್ಟು ಹಿಂದೆ ನಾವು ಅಗ್ರಿಕಲ್ಚರಲ್ ಡೆಟ್ ರಿಲೀಫ್ ಆ್ಯಕ್ಟ್ ಕೆಳಗೆ ಏನೊಂದು ಡ್ರೈವ್‌ನ್ನು ತೆಗೆದುಕೊಂಡಿದ್ದೆವೋ ಅದೇರೀತಿಯಾಗಿ ಡ್ರೈವ್ ತೆಗೆದುಕೊಳ್ಳುವಂತೆ ಮಾಡಬೇಕು. ಮತ್ತು ಪ್ರತಿ ತಿಂಗಳು ಅವರಿಂದ ಸ್ಟೇಟ್‌ಮೆಂಟ್ ತರಿಸಿಕೊಳ್ಳಬೇಕು. ಪ್ರತಿ ತಿಂಗಳೂ ಎಷ್ಟು ಕೇಸುಗಳು ಬಂದವು ಎಷ್ಟು ಡಿಸ್‌ಪೋಸ್ ಆದವು, ಎಷ್ಟು ಪೆಂಡಿಂಗ್ ಇವೆ, ಎಷ್ಟು ಜನರಿಗೆ ರಿಲೀಫ್ ಸಿಕ್ಕಿದೆ ಎಂಬುದನ್ನು ಪರಿಶೀಲಿಸುತ್ತಾ ಹೋದರೆ ಮಾತ್ರ ಈ ಬಡವರಿಗೆ ಅನುಕೂಲವಾಗುತ್ತದೆ ಅಷ್ಟೇ ಅಲ್ಲ, ಈ ಮನಿ ಲೆಂಡರ್ಸ್ ಕೂಡ ಸ್ವಲ್ಪಮಟ್ಟಿಗೆ ಹೆದರುತ್ತಾರೆ. ಇಲ್ಲದಿದ್ದರೆ ದೇವರಾಜ ಅರಸ್‌ರವರು ಹೋದರು, ಇಂದಿರಾಗಾಂಧಿಯವರು ಹೋದರು ಈ ಕಾನೂನು ಬೇಕಾಗಿಲ್ಲ ಈಗ ಯಾರು ಕೇಳುತ್ತಾರೆ ಎನ್ನತಕ್ಕಂಥ ವಾದವನ್ನು ಹಳ್ಳಿಯಲ್ಲಿರತಕ್ಕ ಮನಿ ಲೆಂಡರ್ಸ್ ಮಾಡುತ್ತಾರೆ. ಆದ್ದರಿಂದ ಸರ್ಕಾರ ಇನ್ನೂ ಜೀವಂತ ಇದೆ, ಕೇಳುತ್ತದೆ ಎನ್ನತಕ್ಕಂಥ ಭಾವನೆ ಅವರಿಗೆ ಬಂದರೆ ಖಂಡಿತವಾಗಿ ಈ ಸಮಸ್ಯೆ ಬಗೆಹರಿಯುತ್ತದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಲ್ಯಾಂಡ್ ರಿಫಾರ್ಮ್ ಬಗ್ಗೆ ಹೇಳುವುದಾದರೆ, ಇದು ಬಹಳ ಮಹತ್ವದ್ದು. ಕಳೆದ ವರ್ಷಗಳಿಂದ ಈ ರೆವಿನ್ಯೂ ಇಲಾಖೆ ಸಂಪೂರ್ಣವಾಗಿ ಮಲಗಿತ್ತು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಮಾನ್ಯ ಸಿಂಧ್ಯರವರಿಗೂ ಗೊತ್ತಿದೆ. ದುರ್ದೈವದಿಂದ ಈ ಇಲಾಖೆಯನ್ನು ಇದೇರೀತಿ ನಡೆಸಿಕೊಂಡು ಹೋಗುತ್ತಿದ್ದಾರೆ. ಕೆಲವು ದಿವಸ ಮಾನ್ಯ ವಿ. ಎಲ್. ಪಾಟೀಲರಿಗೆ ಕೊಟ್ಟರು ಅವರಿಗೆ ಆಸಕ್ತಿ ಇರಲಿಲ್ಲವೆಂದು ನನಗನ್ನಿಸುತ್ತದೆ. ಅನಂತರ ಮಾನ್ಯ ಬೊಮ್ಮಾಯಿಯವರಿಗೆ ಕೊಟ್ಟರು, ಅವರ ಜಗಳದಲ್ಲೇ ಕಾಲ ಹೋಯಿತು, ಅನಂತರ ಜೆ. ಹೆಚ್. ಪಟೇಲರು ಬಂದರು, ಆಗಲೂ ಕೂಡ ಅವರ ಜಗಳದಲ್ಲೇ ಕಾಲ ಹೋಯಿತು. ಇದು ಟೆನೆನ್ಸಿ ಮ್ಯಾಟರ್. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದಹಾಗೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ೮ ಲಕ್ಷ ೧೩ ಸಾವಿರ ಜನರು ಅರ್ಜಿಗಳನ್ನು ಹಾಕಿದರು. ಇದರಲ್ಲಿ ಕೆಲವು ಡೂಪ್ಲಿಕೇಷನ್ಸ್ ಆಗಿರಬಹುದು, ಕೆಲವರು ಟೆನೆಂಟ್ ಅಲ್ಲದಿರುವವರೂ ಅರ್ಜಿಗಳನ್ನು ಹಾಕಿರಬಹುದು. ಒಂದೇ ಮನೆಯಲ್ಲಿ ಅಣ್ಣತಮ್ಮಂದಿರಿದ್ದು ಅವರಲ್ಲೇ ಯಾರೋ ಒಬ್ಬರೂ ಅರ್ಜಿಯನ್ನು ಹಾಕಿರಬಹುದು........

ಶ್ರೀ ಪಿ.ಜಿ.ಆರ್. ಸಿಂಧ್ಯ.—ಇದರಲ್ಲಿ ಎಸ್.ಸಿ.ಗಳು ಎಷ್ಟು ಜನರಿದ್ದಾರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ. ಆಮೇಲೆ ನೋಡೋಣ. ೮-೧೩,೨೬೮ ಟೆನೆನ್ಸಿ ಕೇಸಿನಲ್ಲಿ ಡಿಸ್‌ಪೋಸ್ ಆಗಿರತಕ್ಕದ್ದು ೮,೧೧,೭೩೪ ಕೇಸುಗಳು. ಇದು ೧೯೮೩-೮೪ರಲ್ಲಿ ತೀರ್ಮಾನವಾಗಿರತಕ್ಕದ್ದು. ಅಂದರೆ ನಾವು ಯಾವಾಗ ಸರ್ಕಾರವನ್ನು ಬಿಟ್ಟೆವು ಆಗ ೮ ಲಕ್ಷ ೧೩ ಸಾವಿರ ಅರ್ಜಿಗಳಲ್ಲಿ ೮ ಲಕ್ಷ ೧೧ ಸಾವಿರ ಅರ್ಜಿಗಳನ್ನು ಡಿಸ್‌ಪೋಸ್ ಆಫ್ ಮಾಡಿಸಿದ್ದೇವೆ. ಈ ಅಂಕಿಅಂಶಗಳನ್ನು ನಾನು ಹೇಳುತ್ತಿಲ್ಲ. ನೀವು ಕೊಟ್ಟಿರತಕ್ಕ ರಿಪೋರ್ಟ್‌ನಲ್ಲೇ ಇದೆ. ನೀವು ಅಧಿಕಾರಕ್ಕೆ ಬಂದಮೇಲೆ ೮ ವರ್ಷದಲ್ಲಿ ಕೇವಲ ೨ ಸಾವಿರ ಅಪ್ಲಿಕೇಷನ್ಸನ್ನು ಡಿಸ್‌ಪೋಸ್ ಮಾಡಿದ್ದೀರಿ. ಇದರಲ್ಲಿ ಇನ್ನೂ ೬೦೦ ಕೇಸ್‌ಗಳು ಹಾಗೆಯೇ ಉಳಿದಿವೆ. ಅಂದರೆ ೨ ಸಾವಿರ ಅಪ್ಲಿಕೇಷನ್‌ಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ನಿಮಗೆ ೮ ವರ್ಷಕಾಲ ಬೇಕಾಯಿತೆ? ಮೊನ್ನೆ ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರು ಕೇಳುತ್ತಿದ್ದರು, ಈ ಕಾನೂನು ಬಂದು ೧೩ ವರ್ಷವಾಯಿತು. ಈ ಸರ್ಕಾರದವರು ಇನ್ನೂ ಈ ಟೆನೆನ್ಸಿ ಮ್ಯಾಟರ್ಸನ್ನು ಸಾಲ್ವ್ ಮಾಡುವುದಕ್ಕಾಗಿಲ್ಲ, ಸರ್‌ಪ್ಲಸ್ ಲ್ಯಾಂಡ್ಸ್‌ನ ಡಿಕ್ಲರೇಷನ್‌ನ್ನು ಸರಿಯಾಗಿ ನೋಡಿಲ್ಲ, ಎಂದು ಇನ್ನೂ ಅನೇಕ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದರು.

೧೨–೩೦ ಪಿ.ಎಂ.

ಈ ೭ ವರ್ಷಗಳ ಅವಧಿಯಲ್ಲಿ ನೀವು ಬರೀ ೨ ಸಾವಿರ ಅರ್ಜಿಗಳನ್ನು ಡಿಸ್ಪೋಸ್ ಮಾಡಿದ್ದೀರಿ. ೧೯೮೩–೮೪ರ ನಿಮ್ಮ ಅನ್ಯುಯಲ್ ರಿಪೋರ್ಟ್ ಪ್ರಕಾರ, ನೀವು ಬಂದಕೂಡಲೇ ಸಬ್ಮಿಟ್ ಮಾಡಿದ ರಿಪೋರ್ಟ್ ಪ್ರಕಾರ ೫,೧೧,೭೩೪ ಕೇಸುಗಳು ಡಿಸ್‌ಪೋಸ್ ಆಗಿವೆ ಎಂದು ವರದಿ ಕೊಟ್ಟಿದ್ದೀರಿ. ನೀವು ಮಾಡಿರುವುದು ೧೩ ಸಾವಿರದಲ್ಲಿ ೧೧ ಸಾವಿರ ಕಳೆದರೆ ಇನ್ನೂ ಎರಡು ಸಾವಿರ ಉಳಿದವು. ಆ ಎರಡು ಸಾವಿರ ಡಿಸ್‌ಪೋಸ್ ಆಫ್ ಮಾಡಿಕೊಂಡು ಬಂದು ಇವತ್ತು ಪುನಃ ೬೦೦ ಕೇಸುಗಳು ಉಳಿದಿವೆ. ಅಂದರೆ ಎಷ್ಟು ಎಫಿಷಿಯನ್ಸಿ ನಿಮ್ಮ ಸರ್ಕಾರದಲ್ಲಿತ್ತು ಎಂಬುದನ್ನು ನೋಡಿ.

ಒಬ್ಬರು ಮಾನ್ಯ ಸದಸ್ಯರು.—ಕೆಲವು ಹೈಕೋರ್ಟಿನಿಂದ ವಾಪಸ್ಸು ಬಂದಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದರು ಅಪಿಲೆಟ್ ಟ್ರಿಬ್ಯುನಲ್ ಅನ್ನು ತೆಗೆದು ಹಾಕಿದ್ದು ತಪ್ಪು ಅಂದರು. ೮ ಲಕ್ಷ ೧೩ ಸಾವಿರ ಕೇಸುಗಳಲ್ಲಿ ಹೈಕೋರ್ಟಿಗೆ ಎಷ್ಟು ಹೋಗಿವೆ ಅಂದರೆ ೫೨ ಸಾವಿರ ಕೇಸುಗಳು ಹೋಗಿವೆ. ೫೨ ಸಾವಿರದಲ್ಲಿ ಅವರು ೧೨ ಸಾವಿರ ಡಿಸ್‌ಪೋಸ್ ಆಫ್ ಮಾಡಿ ೪೦ ಸಾವಿರ ಪೆಂಡಿಂಗ್ ಇತ್ತು. ಅದು ಯಾವಾಗ ಅಂದರೆ ಅಪೆಲೆಟ್ ಟ್ರಿಬ್ಯುನಲ್ ಅನ್ನು ಖಾಯಂ ಮಾಡಿ ವಾಪಸ್ಸು ಕಳುಹಿಸಿದಾಗ ೮ ಲಕ್ಷದಲ್ಲಿ ೪೦ ಸಾವಿರ ಅಂದರೆ ಜಾಸ್ತಿ ಏನಲ್ಲ. ಹೆಚ್ಚೂ ಕಡಿಮೆ ೧೦ ಪರ್ಸೆಂಟ್ ಆಯಿತು ಅಷ್ಟೇ. ಏಕೆ ಈ ಮಾತು ಹೇಳುತ್ತಿದ್ದೇನೆಂದರೆ. ಕೆಲವು ವೆಸ್ಟೆಡ್ ಇಂಟರೆಸ್ಟ್ಸ್ ಹೈಕೋರ್ಟ್‌ನಿಂದ ಪುನಃ ಟ್ರಿಬ್ಯುನಲ್‌ಗೆ ಬರಬೇಕಲ್ಲ ಎಂದು ಏನೆಲ್ಲ ನಡೆಯಿತು. ಇದು ಮಾತ್ರ ನಿಜ. ಟ್ರಿಬ್ಯುನಲ್‌ನಲ್ಲಿ ಕಮಿಟೆಡ್ ಸದಸ್ಯರು ಇಲ್ಲದಿದ್ದರೆ ಟೆನೆಂಟಿಗೆ ಖಂಡಿತವಾಗಿ ಅನ್ಯಾಯವಾಗುತ್ತದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟಮೇಲೆ ನ್ಯಾಚುರಲ್ ಆಗಿ ನಾವು ಸದಸ್ಯರ ಮೇಲೆ ವಿಶ್ವಾಸ ಇಡಬೇಕು. ಯಾರಾದರೂ ತಪ್ಪು ಮಾಡಿದ್ದರೆ ಡಿ.ಸಿ.ಯವರು ರೆವ್ಯೂ ಮಾಡಬೇಕು ಎಂದು ಹಿಂದೆ ಆದೇಶ ಇತ್ತು. ಅಂಥ ಫೈಲುಗಳನ್ನು ತರಿಸಿ ರೆವ್ಯೂ ಮಾಡಿದ ಮೇಲೆ ಸರ್ಕಾರ ಸ್ವತಃ ತನ್ನ ಖರ್ಚಿನ ಮೇಲೆ ಹೈಕೋರ್ಟಿಗೆ ಹೋಗಬೇಕೆಂದು ಇತ್ತು. ಆದರೆ ನೀವು ೪೦ ಸಾವಿರ ಕೇಸುಗಳನ್ನು ವಾಪಸ್ಸು ತೆಗೆದುಕೊಂಡು ಅಪೆಲೆಟ್ ಟ್ರಿಬ್ಯುನಲ್‌ಗೆ ಹಾಕಿದಿರಿ. ಅಪೆಲೆಟ್ ಟ್ರಿಬ್ಯುನಲ್‌ನಲ್ಲಿ ೫೩ ಸಾವಿರ ಕೇಸುಗಳಲ್ಲಿ ೧೨ ಸಾವಿರ ಕೇಸುಗಳು ಡಿಸ್‌ಪೋಸ್ ಆದವು. ಇನ್ನೂ ೧೨ ಸಾವಿರ ಕೇಸುಗಳು ಪೆಂಡಿಂಗ್ ಇವೆ. ಅಂದರೆ ೫೦ ಪರ್ಸೆಂಟ್ ಡಿಸ್‌ಪೋಸ್ ಆದವು. ನಿಮ್ಮ ಅವಧಿಯಲ್ಲಿ ಕೂಡ ೫೦ ಪರ್ಸೆಂಟ್ ಅದೇ ಹೈಕೋರ್ಟ್ ಮಾಡುವುದನ್ನು ಇವರು ಮಾಡಿದರು. ಆಗ ಅನ್ಯಾಯವಾದರೆ ಡಿ.ಸಿ.ಯವರು ರೆವ್ಯೂ ಮಾಡತಕ್ಕ ಅಧಿಕಾರ ಇತ್ತು. ಸರ್ಕಾರದವರೇ ಹೈಕೋರ್ಟಿಗೆ ಹೋಗುತ್ತಿದ್ದರು. ಈಗ ಎಲ್ಲಿಗೆ ಹೋಗುತ್ತಾರೆ. ನೀವು ಈ ಪ್ರೊವಿಜನ್ ಮಾಡಿದ ಮೇಲೆ ಸರ್ಕಾರ ಕೇಳುವ ಹಾಗೆ ಇಲ್ಲ. ಡಿ.ಸಿ.ಯವರು ಕೇಳುವ ಹಾಗೆ ಇಲ್ಲ. ಟೆನೆಂಟ್‌ಗೆ ಅನ್ಯಾಯವಾದರೆ ಅದು ಖಾಯಂ ಆದ ಅನ್ಯಾಯ

ಈ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಅಪೆಲೆಟ್ ಟ್ರಿಬ್ಯುನಲ್ ಅನ್ನು ಅಬಾಲಿಷ್ ಮಾಡಿದ್ದು ಇದರಲ್ಲಿ ಪಾರ್ಟಿ ಪ್ರಿಸ್ಟೀಜ್ ಇಲ್ಲ. ನಾವು ಆ ಕಡೆ ಇದ್ದಾಗ ಬಹಳ ಮಂದಿ ವಿರೋಧಿಸಿದೆವು. ಅಬಾಲಿಷ್ ಮಾಡಬೇಡಿ, ಅನ್ಯಾಯವಾಗುತ್ತದೆ ಎಂದೆವು ಈಗ ೪೨ ಸಾವಿರ ಕೇಸುಗಳು ಪೆಂಡಿಂಗ್ ಇವೆ, ಅದರಲ್ಲಿ ಎರಡು ವರ್ಷದ ಅವಧಿಯಲ್ಲಿ ಹೈಕೋರ್ಟ್‌ನವರು ೧೨ ಸಾವಿರ ಕೇಸುಗಳನ್ನು ಡಿಸ್‌ಪೋಸ್ ಮಾಡಿದ್ದಾರೆ, ಅದೇ ರೀತಿಯಾಗಿ ೨–೩ ವರ್ಷಗಳಲ್ಲಿ ಎಲ್ಲವನ್ನು ಡಿಸ್‌ಪೋಸ್ ಮಾಡುತ್ತಾರೆಂದರೂ ಕೇಳಲಿಲ್ಲ. ಇನ್ನೊಂದು ಅಪೆಲೆಟ್ ಟ್ರಿಬ್ಯುನಲ್ ಅನ್ನು ಕ್ರಿಯೇಟ್ ಮಾಡಿ ಜಿಲ್ಲಾ ಮಟ್ಟದಲ್ಲಿ ವಕೀಲರಿಗೆ ಲಾಭವಾಯಿತು. ಆದರೆ ನ್ಯಾಯ ಏನು ಸಿಕ್ಕಿತು ? ಲ್ಯಾಂಡ್‌ಲಾರ್ಡ್ಸ್ ಯಾರು ಪವರ್‌ಫುಲ್ ಇದ್ದರು ಅವರು ಒಳ್ಳೆಯ ವಕೀಲರನ್ನು ಹಿಡಿದು ಹೆಚ್ಚು ಕಡಿಮೆ ಮಾಡಿ ಇವತ್ತು ಅವರೇ ಭೂಮಿಯ ಒಡೆತನವನ್ನು ಹೊಂದಿದ್ದಾರೆ. ಹಿಂದೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿದ ರೆಕಾರ್ಡ್‌ಗಳು ಇರುವುದಿಲ್ಲ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ನಿಮ್ಮ ಸರ್ಕಾರ ಇದ್ದಾಗ ನಿಮ್ಮ ಸರ್ಕಾರದ ಸದಸ್ಯರು ಇರಬಹುದು. ನಮ್ಮ ಸರ್ಕಾರ ಇದ್ದಾಗ ನಮ್ಮ ಸರ್ಕಾರದ ಸದಸ್ಯರು ಇರಬಹುದು. ಆದರೆ ಆ ಸದಸ್ಯರು ಹೋಗಿ ರೆಕಾರ್ಡ್ ಇಲ್ಲದಿದ್ದರೂ ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಅವರಿಗೆ ಖಾಯಂ ಮಾಡಬೇಕೆಂದು ಇತ್ತು. ಅದು ಈಗ ಇಲ್ಲ. ಬಹಳ ಜನರಿಗೆ ತಪ್ಪು ತಿಳುವಳಿಕೆ ಏನಾಗಿದೆ ಎಂದರೆ ೧೫ ವರ್ಷವಾಯಿತು ಕಾನೂನು ಬಂದು. ಹಿಂದಿನ ಸರ್ಕಾರವೂ ಮಾಡಿಲ್ಲ, ಇವರೂ ಮಾಡಿಲ್ಲವೆಂಬ ಭಾವನೆ ಬರುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಲಾಖೆಯನ್ನು ಸರಿಯಾದ ರೀತಿಯಿಂದ ನಡೆಸಿಕೊಂಡು ಹೋಗದಿದ್ದರೆ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದಕ್ಕೆ ಹೇಳಿದೆ. ಅವರಲ್ಲಿ ಏನು ಭಾವನೆ ಬಂದಿದೆ ಎಂದರೆ ಏನು ಲ್ಯಾಂಡ್‌ರಿಫಾರ್ಮ್ಸ್ ಎಂಬ

ಭಾವನೆ ಬಂದಿದೆ. ಆಮೇಲೆ ಒಂದು ಕಡೆ ಟೆನೆಂಟ್ಸ್‌ದು ಡಿಕ್ಲರೇಷನ್ಸ್ ಆಗಲೇ ಸೆಟಲ್ ಆಗಿತ್ತು. ಕೇವಲ ಎರಡು ಸಾವಿರ ಅರ್ಜಿಗಳನ್ನು ಡಿಸ್‌ಪೋಸ್ ಮಾಡಲು ನೀವು ೭ ವರ್ಷಗಳನ್ನು ತೆಗೆದುಕೊಂಡಿರಿ ಅದೇ ರೀತಿಯಾಗಿ ಡಿಕ್ಲರೇಷನ್ಸ್. ಈ ಡಿಕ್ಲರೇಷನ್ಸ್ ಕೂಡ......

ಛೇರ್ಮನ್.—ಇನ್ನೂ ಐದಾರು ಜನ ಮಾತನಾಡಲಿಕ್ಕೆ ಇದ್ದಾರೆ. ದಯವಿಟ್ಟು ಮುಗಿಸಿ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಮುಗಿಸು ಅಂದರೆ ಮುಗಿಸುತ್ತೇನೆ.

ಶ್ರೀಮತಿ ಮೋಟಮ್ಮ.—ನಮ್ಮೆಲ್ಲರ ಕಾಲವನ್ನು ಅವರಿಗೇ ಕೊಡಿ.

ಶ್ರೀ ಎಂ. ನಾರಾಯಣಸ್ವಾಮಿ.—ಅವರು ಈ ಸರ್ಕಾರದ ಗುಣಗಾನ ಮಾಡುತ್ತಿದ್ದಾರೆ, ಸಬ್ಜೆಕ್ಟ್‌ಗೆ ಬರಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗುಣಗಾನ ಅಲ್ಲ. ನೀವು ಸರಿಯಾದ ರೀತಿಯಿಂದ ನಿರ್ವಹಿಸದ ಕಾರಣ ಈ ಪರಿಸ್ಥಿತಿಯಾಗಿದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಚಂದ್ರೇಗೌಡರು ಏನು ಹೇಳಿದರು ? ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಏನೂ ಆಗಿಲ್ಲ ಎಂದು ಹೇಳಿದರಲ್ಲ ಅದನ್ನೇ ನಾನು ಹೇಳುತ್ತಿದ್ದೇನೆ. ಗುಣಗಾನ ಅಲ್ಲ. ಜನರಿಗೆ ಗೊತ್ತು, ಫ್ಯಾಕ್ಟ್ಸ್ ಎಲ್ಲಾ ಇದೆ. ನಾನೇನೂ ಹೊಸದಾಗಿ ಹೇಳಬೇಕಾಗಿಲ್ಲ. ಹೇಳಿದರೆ ಶಹಭಾಸ್‌ಗಿರಿ ಕೊಡುತ್ತಾರೆ ಎಂದಲ್ಲ. ಆದರೆ ಸದನಕ್ಕೂ ಗೊತ್ತಾಗಬೇಕಲ್ಲ. ಯಾವ ಕಾಲದಲ್ಲಿ ಎಷ್ಟು ಕೆಲಸ ಆಯಿತು, ಇವತ್ತು ಎಷ್ಟು ಕೇಸಸ್ ಪೆಂಡಿಂಗ್ ಇದೆ, ಯಾವರೀತಿ ಅನ್ಯಾಯವಾಗುತ್ತಿದೆ ಎಂಬುದು. ಸರಿಯಾಗಿ ಎಗ್ಸಿಕ್ಯೂಟ್ ಮಾಡದೇಹೋದರೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಷ್ಟೇ ಹೊರತಾಗಿ ಗುಣಗಾನವೇನೂ ಮಾಡುತ್ತಿಲ್ಲ.

ಶ್ರೀ ಬಿ.ಹೆಚ್. ಬನ್ನೀ ಕೋಡ್.—ಮುಂದೆ ಏನು ಮಾಡಬೇಕು ಎಂದು ಸಲಹೆ ಕೊಟ್ಟಿದ್ದೀರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೇಳುತ್ತಿದ್ದೇನೆ. ಅದಕ್ಕೇ ಅಪಿಲೆಟ್ ಟ್ರಿಬ್ಯೂನಲ ತೆಗೆದುಹಾಕಿದ್ದು ಸರಿ ಎಂದು ಹೇಳುತ್ತಾ ಇದ್ದೇನೆ. ಡಿಕ್ಲರೇಷನ್‌ನಲ್ಲಿ ತಾವು ಮಾಡತಕ್ಕ ಕೆಲಸ ಈಗ......

ಶ್ರೀ ಕೆ. ಗಂಗಾಧರ ಗೌಡ.—ಏಳು ವರ್ಷದಲ್ಲಿ ಅಪಿಲೆಟ್ ಟ್ರಿಬ್ಯೂನಲ್ ನಡೆಸಿ ಬಡವರನ್ನು, ಗೇಣೀದಾರರನ್ನು ಮನೆಯಿಂದ ಹೊರಗಡೆ ಹಾಕಿದ್ದಾರಲ್ಲ, ಅವರಿಗೆ ಏನು ವ್ಯವಸ್ಥೆ ಮಾಡುವುದು ? ಅಪಿಲೆಟ್ ಟ್ರಿಬ್ಯುನಲ್‌ನಲ್ಲಿ ಲ್ಯಾಂಡ್‌ಲಾರ್ಡ್ ಗೆದ್ದು ಪೊಸಿಷನ್ ತೆಗೆದುಕೊಂಡು ಬಡವರನ್ನು ಹೊರಗೆ ಹಾಕಿದ್ದಾರೆ. ಅವರನ್ನು ಏನು ಮಾಡುವುದು ?

ಶ್ರೀ ಬಿ. ಹೆಚ್. ಬನ್ನೀ ಕೋಡ್.—ಈ ಸರ್ಕಾರಕ್ಕೆ ಮೆಜಾರಿಟಿ ಇದೆ. ಹಿಂದೆ ಅಪಿಲೆಟ್ ಟ್ರಿಬ್ಯುನಲ್‌ನಲ್ಲಿ ಆದ ತೀರ್ಮಾನಗಳನ್ನೆಲ್ಲಾ ರದ್ದುಪಡಿಸಿ ಮತ್ತೆ ಟ್ರಿಬ್ಯೂನಲ್‌ಗೆ ತಂದು ನಿಮ್ಮ ಅನುಕೂಲ ಪ್ರಕಾರ ನಿರ್ಣಯ ಮಾಡಿಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ವಾದ ಮೊದಲೇ ಇದೆ. ಇವತ್ತು ವಾದ ಮಾಡುತ್ತಿಲ್ಲ.

ಶ್ರೀ ಕೆ. ಶಿವಮೂರ್ತಿ.—ಅಪಲೆಟ್ ಟ್ರಿಬ್ಯೂನಲ್ ಮಾಡಿದ ಉದ್ದೇಶವೇ ಭೂಮಾಲೀಕರಿಗೆ ರಕ್ಷಣೆ ಕೊಡಲಿಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೧,೪೦,೯೪೫ ಡಿಕ್ಲರೇಷನ್ಸ್ ಬಂದಿದ್ದವು. ಅದರಲ್ಲಿ ಆಗ ೧,೩೯,೯೨೯ ಡಿಸ್ಪೋಸ್ ಆದವು. ಹಾರ್ಡ್‌ಲಿ ೧೧೦೧೬ ಡಿಕ್ಲರೇಷನ್ಸ್ ಪೆಂಡಿಂಗ್ ಇವೆ. ಅದೂ ಕೂಡ ಪೂರ್ತಿ ಆಗಲಿಲ್ಲ. ಅದನ್ನು ಮಾಡಿದರೆ ಕನಿಷ್ಠ ಪಕ್ಷ ಈಗಿರತಕ್ಕವರು ಯಾರು ? ದೊಡ್ಡ ಲ್ಯಾಂಡ್‌ಲಾರ್ಡ್‌ಗಳು. ಅದಕ್ಕಾಗಿ ಪೆಂಡಿಂಗ್ ಇಟ್ಟುಕೊಳ್ಳುತ್ತಾರೆ. ನಮ್ಮ ಟ್ರಿಬ್ಯೂನಲ್ ಸದಸ್ಯರಿದ್ದರೆ ನಮ್ಮಲ್ಲಿ ಬಂದು ರಿಕ್ವೆಸ್ಟ್ ಮಾಡುತ್ತಾರೆ. ನಿಮ್ಮವರು ಇದ್ದರೆ ನಿಮ್ಮಲ್ಲಿ ಬಂದು ರಿಕ್ವೆಸ್ಟ್ ಮಾಡುತ್ತಾರೆ. ಎಲ್ಲಿ ಅವರಿಗೆ ಕೆಲಸವಾಗುತ್ತದೋ ಅಲ್ಲಿ ಅವರು ಹೋಗುತ್ತಾರೆ. ಅವರಿಗೆ ಇಂಥ ಸರ್ಕಾರವೇ ಇರಬೇಕೆಂದೇನೂ ಇಲ್ಲ. ಯಾವ ಉದ್ದೇಶಕ್ಕಾಗಿ ಕಾನೂನು ಮಾಡಿದ್ದೇವೆ, ಯಾರಿಗೆ ಸಹಾಯ ಮಾಡಬೇಕೆಂದಿದ್ದೇವೆ, ಸರ್‌ಪ್ಲಸ್ ಲ್ಯಾಂಡನ್ನು ತೆಗೆದುಕೊಂಡು ಬಡವರಿಗೆ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂಬ ನಮ್ಮ ವಾದ ಏನಿದೆ ಅದರ ಬಗ್ಗೆ ಕಾಳಜಿ ವಹಿಸಬೇಕು. ನಾನು ಕೇಳುತ್ತೇನೆ. ೧೧೦೧೬ ಕೇಸ್‌ಗಳನ್ನು ಏತಕ್ಕೆ ಡಿಸ್‌ಪೋಸ್ ಮಾಡಲಿಲ್ಲ ? ಕ್ರಮ ತೆಗೆದುಕೊಂಡರೆ ಕನಿಷ್ಟ ಪಕ್ಷ ಒಂದು ಲಕ್ಷಕ್ಕಿಂತಲೂ ಹೆಚ್ಚು ಜಮೀನು ಸಿಗುತ್ತದೆ. ಮಾನ್ಯ ಮಂತ್ರಿಗಳು ರೆವ್ಯೂ

ಮಾಡಬೇಕು. ಪುನಃ ಡೆಪ್ಯುಟಿ ಕಮಿಷನರ್ ಆದೇಶ ಕೊಡಿ. ಇಂಥ ಕೇಸ್‌ಗಳು ಯಾವುವಿವೆ ಮಾಅನ್ನ ಪುನಃ ಪರಿಶೀಲನೆ ಮಾಡಬೇಕು, ಮತ್ತು ಡಿಕ್ಲರೇಷನ್ ವೆರಿಫೈ ಮಾಡಿ ಸರ್‌ಪ್ಲಸ್ ಜಮೀನನ್ನು ಪೊಸಿಷನ್‌ಗೆ ತೆಗೆದುಕೊಂಡು ಬಡವರಿಗೆ ಡಿಸ್ಟ್ರಿಬ್ಯೂಟ್ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ದೊಡ್ಡ ಅನ್ಯಾಯವಾಗುತ್ತದೆ. ಹಿಂದೆ ೧ ಲಕ್ಷ ೫೦ ಸಾವಿರ ಎಕರೆಯಲ್ಲಿ ೧ ಲಕ್ಷ ೯ ಸಾವಿರ ಎಕರೆ ಏನು ಡಿಸ್ಟ್ರಿಬ್ಯೂಟ್ ಮಾಡಿದರು ಅದರ ಮೇಲೆ ೨ ವರ್ಷದಲ್ಲಿ ೧೦ ಸಾವಿರ ಎಕರೆ ಬಿಟ್ಟರೆ ಅದಕ್ಕಿಂತ ಹೆಚ್ಚು ಡಿಸ್ಟ್ರಿಬ್ಯೂಟ್ ಮಾಡಿಲ್ಲ. ಇದರಿಂದ ಎಷ್ಟು ಆಸಕ್ತಿ ವಹಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ರೀತಿಯಾದರೆ ಯಾವ ಭೂಸುಧಾರಣೆ ಕಾಯಿದೆ ಇಂಪ್ಲಿಮೆಂಟ್ ಆಗುತ್ತದೆ? ಕಾನೂನು ಎಷ್ಟೇ ಒಳ್ಳೆಯದಿದ್ದರೂ ಕೂಡ ಕಾನೂನು ಜಾರಿ ಮಾಡುವವರಿಗೆ ಆಸಕ್ತಿ ಇಲ್ಲದೇ ಹೋದರೆ ಪ್ರಯೋಜನವಿಲ್ಲ. ತಾವು ಕಮಿಟ್‌ಮೆಂಟ್ ಇಟ್ಟುಕೊಂಡು ಈ ಕೆಲಸ ಮಾಡಿದರೆ ಇನ್ನೂ ೧ ಲಕ್ಷ ೧೫ ಸಾವಿರ ಎಕರೆ ಜಮೀನು ಸಿಗುತ್ತದೆ, ಅದರಿಂದ ಪ್ರಯೋಜನವಾಗುತ್ತದೆ. ತಾವು ದಯವಿಟ್ಟು ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅನ್ ಆಥರೈಸ್ಡ್ ಕಲ್ಟಿವೇಷನ್ ಬಗ್ಗೆ ಪ್ರೊ. ನಂಜುಂಡಸ್ವಾಮಿಯವರು ಒತ್ತಾಯ ಮಾಡುತ್ತಿದ್ದಾರೆ. ನಮ್ಮ ಕಡೆ ಸದಸ್ಯರೂ ಕೂಡ ಒತ್ತಾಯ ಮಾಡುತ್ತಿದ್ದಾರೆ ನಿಜವಾಗಿಯೂ ಇದು ಆಗಬೇಕು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅನ್ ಆಥರೈಸ್ಡ್ ಸಾಗುವಳಿ ಮಾಡಿದರೆ ವೀಕರ್ ಸೆಕ್ಷನ್ ಒಂದು ವರ್ಷ ಕಲ್ಟಿವೇಟ್ ಮಾಡಿದರೆ ಪಹಣಿಯಲ್ಲಿ ಅವರ ಹೆಸರು ಬರದಿದ್ದರೂ ಕೂಡ ರೆಗ್ಯುಲರೈಸ್ ಮಾಡಿ ಎಂದು ೧-೧-೧೯೮೧ರಲ್ಲಿ ನಾನು ಒಂದು ಆದೇಶ ಕೊಟ್ಟೆ.

ಆಗ ಎಲ್ಲಾ ಕಡೆ ಸಾವಿರಾರು ಎಕರೆ ಜಮೀನು ರೆಗ್ಯೂಲರೈಸ್ ಆಯಿತು. ಅದೇ ರೀತಿ ೧೯೭೦ರಲ್ಲಿ ಸರ್ಕಾರ ಹೊರಡಿಸಿದ ಜಿ. ಓ. ಪ್ರಕಾರ ರೆಗ್ಯುಲರೈಜೇಷನ್ ಸಹ ಮಾಡಿದೆವು. ಹೀಗೆ ಸುಮಾರು ಸರ್‌ಪ್ಲಸ್ ಜಮೀನನ್ನು ಮತ್ತು ಏನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದರು. ಅಂತಹವರಿಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ೩ ಲಕ್ಷಕ್ಕಿಂತ ಹೆಚ್ಚು ಜಮೀನನ್ನು ೨-೩ ವರ್ಷಗಳಲ್ಲೇ ನಾವು ಕೊಟ್ಟಿದ್ದೇವೆ. ಅವತ್ತೇ ಆಸಕ್ತಿ ವಹಿಸಿ ಕೆಲಸ ಮಾಡಿದ್ದರೆ ೬ ಲಕ್ಷ ೨೫ ಸಾವಿರ ಎಕರೆ ಅನಧಿಕೃತವಾಗಿ ಏನು ಎನ್‌ಕ್ರೋಚ್ ಮಾಡಿದ್ದರು ಅದು ರೆಗ್ಯುಲರೈಸ್ ಆಗಿ ಹೋಗುತ್ತಿತ್ತು. ಮತ್ತು ನಾವು ಆದೇಶವನ್ನು ಕೊಟ್ಟಿದ್ದೇವೆ. ೧-೭-೧೯೮೮ರಲ್ಲಿ ಎಂದು ಕಾಣುತ್ತೆ. ಆದರ ನಂತರ ಯಾರ್ಯಾರು ಒತ್ತುವರಿ ಮಾಡಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಹೋಗಬೇಡಿ ಎಂದು ಆದೇಶ ನೀಡಿದ್ದೆ. ಏಕೆಂದರೆ, ಇದೇ ಸಮಯವನ್ನು ಉಪಯೋಗ ಮಾಡಿಕೊಂಡು ಕಾಫಿ ಪ್ಲಾಂಟರ್ಸ್ ಏನು ಇದ್ದಾರೆ, ಅವರೂ ಕೂಡ ವಿಲೇಜ್ ಅಕೌಂಟೆಂಟ್‌ನ್ನು ಹಿಡಿದುಕೊಂಡು ಮೂರು ವರ್ಷದ ಪಹಣಿಯನ್ನು ಬರೆಸಿಕೊಂಡಿರುತ್ತಾರೆ. ಆದ್ದರಿಂದ ಅವರಿಗೆಲ್ಲಾ ರೆಗ್ಯುಲರೈಸ್ ಮಾಡುವುದಕ್ಕೆ ಹೋಗಬೇಡಿ, ಇವತ್ತು ನಿಮ್ಮ ಮುಂದೆ ಎಷ್ಟು ಟಾರ್‌ಗೆಟ್ ಇದೆ, ಅದನ್ನು ಸಂಪೂರ್ಣ ಮಾಡಬೇಕೆಂದು ನಾನೇ ಆದೇಶ ನೀಡಿದ್ದೆ. ಇದು ಆದಮೇಲೆ ಪುನಃ ೬ ಲಕ್ಷದ ೨೫ ಸಾವಿರ ಎಕರೆ ಎನ್‌ಕ್ರೋಚ್‌ಮೆಂಟ್ ಆಗಿದೆ. ಇದನ್ನು ಲ್ಯಾಂಡ್ ಗ್ರ್ಯಾಂಟ್ಸ್ ರೂಲ್ಸ್ ಪ್ರಕಾರ ಕೊಟ್ಟಿದ್ದರೆ ೩ ಲಕ್ಷದ ೧೨ ಸಾವಿರ ಎಕರೆ ಎಸ್‌ಸಿ/ಎಸ್.ಟಿ. ಜನರಿಗೆ ಬರುತ್ತಿತ್ತು. ೧೯೮೮ರಲ್ಲಿ ತೀರ್ಮಾನ ಮಾಡಿದ ಪ್ರಕಾರ ೬ ಲಕ್ಷ ೨೫ ಸಾವಿರ ಎಕರೆಯಲ್ಲಿ ೧,೨೨,೧೦೦ ಎಕರೆ ಮಾತ್ರ ಈ ಎಸ್.ಸಿ./ಎಸ್.ಟಿ. ಜನರು ಎನ್‌ಕ್ರೋಚ್ ಮಾಡಿದ್ದಾರೆ. ಇವರ ಪಾಲಿಗೆ ಬರಬೇಕಾಗಿದ್ದ ೧,೭೮,೦೦೦ ಸಾವಿರ ಎಕರೆ ಜಮೀನು ಬೇರೆಯವರಿಗೆ ಹೋಯಿತು. ರೆಗ್ಯುಲರೈಸ್ ಮಾಡಬೇಕು, ಮಾಡಬಾರದು ಅಂತ ನಾನು ಹೇಳುತ್ತಿಲ್ಲ. ನಿಮ್ಮ ನಿರಾಸಕ್ತಿಯಿಂದ ಇದರ ಬಗ್ಗೆ ಹಿಂದಿನ ಸರ್ಕಾರ ಆಸಕ್ತಿ ವಹಿಸಿದ ಕಾರಣ ಇವತ್ತಿನ ದಿವಸ ೨ ಲಕ್ಷ ಎಕರೆ ಭೂಮಿಯನ್ನು ಈ ಬಡವರು ಕಳೆದುಕೊಳ್ಳಬೇಕಾಯಿತು. ಅದಕ್ಕೆ ನಾನು ಕೊನೆಯ ಪಕ್ಷ ನಮ್ಮ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಇಂತಹದ್ದನ್ನು ರೆಗ್ಯುಲರೈಸ್ ಮಾಡುವಾಗ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವೀಕರ್ ಸೆಕ್ಷನ್‌ಗೆ ಅನ್ಯಾಯವಾಗದ ಹಾಗೆ ಮಾಡಬೇಕು. ಕೆಲವರು ೧೦೦ ಎಕರೆ ಸಾಗುವಳಿ ಮಾಡಿದ್ದಾರೆ, ಇನ್ನು ಕೆಲವರು ೩೦೦ ಎಕರೆ ಸಾಗುವಳಿ ಮಾಡಿದ್ದಾರೆ. ಆದರೂ ಸರ್‌ಪ್ಲಸ್ ೬,೨೫,೦೦೦ ಎಕರೆ ಏನು ಇದೆ, ಅದನ್ನು ಎಕ್ಸ್‌ಕ್ಲೂಸೀವ್ ಆಗಿ ಇಟ್ಟು ಲ್ಯಾಂಡ್‌ಗ್ರ್ಯಾಂಟ್ ರೂಲ್ಸ್ ಪ್ರಕಾರ ಕೊಟ್ಟರೆ ಸ್ವಲ್ಪ ಮಟ್ಟಿಗೆ ಈ ಟಾರ್‌ಗೆಟ್ ಮುಟ್ಟಬಹುದು. ಈ ರೀತಿ ಮಾಡಿದರೆ ಮಾತ್ರ ಅವರಿಗೆ ನೀವು ನ್ಯಾಯವನ್ನು ದೊರಕಿಸಿಕೊಟ್ಟ ಹಾಗೆ ಆಗುತ್ತದೆ. ಇಲ್ಲದೆ ಹೋದರೆ ಅವರಿಗೆ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ೫೦ ಪರ್ಸೆಂಟ್ ಅವರಿಗೆ ಕೊಡಬೇಕೆಂದು ನಾವೇ ಕಾನೂನು ಮಾಡುವುದು. ಆಮೇಲೆ ನಾವೇ ಕಾನೂನು ಉಲ್ಲಂಘನೆ ಮಾಡುವುದು. ಮತ್ತು ಬೇರೆಯವರಿಗೆ ಅನ್ಯಾಯವಾಗುತ್ತದೆ ರೆಗ್ಯುಲರೈಸ್ ಮಾಡಿ ಎಂದು ಹೇಳುವುದು. ಈಗ ದಿನಗೂಲಿ ನೌಕರರ ಬಗ್ಗೆ ಎಲ್ಲರಿಗೂ ಸಿಂಪತಿ ಇದೆ. ನನಗೂ ಇದೆ. ಏಕೆಂದರೆ ನಾನು ಏನೂ ಮಾತನಾಡುವ ಹಾಗೆ ಇಲ್ಲ.

ಬಡವರು ಅಂದರೆ ಎಲ್ಲರೂ ಬಡವರೇ. ದುಡ್ಡೇನಿಗಳು ೫೫ ಸಾವಿರ ದಿನಗೂಲಿ ನೌಕರರು ಏನು ಇದ್ದಾರೆ, ಅದರಲ್ಲಿ ಕೇವಲ ೨,೫೦೦–೩,೦೦೦ ಜನರು ಮಾತ್ರ ಎಸ್.ಸಿ.ಗೆ ಸೇರಿದವರು ಇದ್ದಾರೆ. ೧೮ ಪರ್ಸೆಂಟ್ ಪ್ರಕಾರ ಅವರಿಗೆ ಕೊನೆಯ ಪಕ್ಷ ೧೦ ಸಾವಿರ ಬರಬೇಕು, ಬಂತೆ ಎಂದು ಕೇಳಿದರೆ, ಇವನು ಜಾತಿವಾದಿ ಬರೀ ಎಸ್.ಸಿ. ಬಗ್ಗೆಯೇ ಮಾತನಾಡುತ್ತಾನೆಂಬ ಗೂಬೆಯನ್ನು ನಮ್ಮ ಮೇಲೆ ಕೂರಿಸುತ್ತಾರೆ. ಎಲ್ಲ ವಿಚಾರಮಾಡಿ ನ್ಯಾಯವಾಗಿ ಕೊಟ್ಟರೆ ಬಹುಶಃ ಯಾರೂ ಕಂಪ್ಲೈಂಟ್ ಮಾಡುವುದಿಲ್ಲ. ಅದಕ್ಕಾಗಿ ಈ ಕಡೆ ತಾವು ಲಕ್ಷ್ಯ ಕೊಟ್ಟು ೬೦ ಸಾವಿರ ಎಕರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಏನು ಅವೇಲಬಲ್ ಇದೆ ಅದನ್ನು ಇವರಿಗೆ ಎಕ್ಸ್‌ಕ್ಲೂಸೀವ್ ಆಗಿ ಇಟ್ಟು, ರೆಗ್ಯುಲರೈಸ್ ಮಾಡುವ ಕಡೆ ಗಮನ ಕೊಡಬೇಕು. ಇದನ್ನೂ ಬೇಗನೇ ಮಾಡಬೇಕು. ಶ್ರೀಮತಿ ಮೋಟಮ್ಮನವರು ಹೇಳಿದ ಹಾಗೆ ೬ ಲಕ್ಷ ೨೫ ಸಾವಿರ ಎಕರೆ ಮತ್ತು ೬೬ ಸಾವಿರ ಎಕರೆ ಏನು ಅವೇಲಬಲ್ ಇದೆ ಇದು ಹೆಚ್ಚು ಕಡಿಮೆ ಏಳು ಲಕ್ಷ ಎಕರೆ ಆಗುತ್ತದೆ. ಇದನ್ನು ಡಾ|| ಅಂಬೇಡ್ಕರ್‌ರವರ ಸೆಂಟಿನರಿ ವರ್ಷವೆಂದು ಡಿಕ್ಲೇರ್ ಮಾಡಿ ಎಲ್ಲ ಕಡೆ ಅವರಿಗೆ ಉಚಿತವಾಗಿ ಪಟ್ಟಾ ಕೊಡತಕ್ಕಂತಹ ಕೆಲಸ ಆಗಬೇಕು ; ಹೇಗೂ ೧೦ ಎಕರೆಗಿಂತ ಕಡಿಮೆ ಇರುವ ರೈತನಿಗೆ ಭೂ ಕಂದಾಯವನ್ನು ರದ್ದು ಮಾಡಿದ್ದೀರಿ. ಅನೇಕರಿಗೆ ನೀರು ಕಂದಾಯವನ್ನು ಮನ್ನಾ ಮಾಡಿದ್ದೀರಿ ; ಈ ರೀತಿ ಅನೇಕ ರೀತಿಯಾಗಿ ರಿಲ್ಯಾಕ್ಸೇಷನ್ ಕೊಡುತ್ತಿದ್ದೀರಿ. ೧೦ ಸಾವಿರದವರೆಗೆ ಯಾವ್ಯಾವ ರೈತರು ಸಾಲ ಮಾಡಿದ್ದಾರೆ, ಅದನ್ನು ಮನ್ನಾ ಮಾಡುವವರಿದ್ದೀರಿ. ಜಮೀನಿಗೆ ಅಷ್ಟು ಆಗುವುದಿಲ್ಲ. ದಯವಿಟ್ಟು ತಾವು ಫ್ರೀ ಆಗಿ ಪಟ್ಟಾ ಕೊಟ್ಟು ಎಲ್ಲ ಕಡೆ ಜನರಿಗೆ ಸಹಾಯ ಮಾಡಬೇಕು.

(ಸನ್ಮಾನ್ಯ ಉಪಾಧ್ಯಕ್ಷಿಣಿಯವರು ಪೀಠವನ್ನು ಅಲಂಕರಿಸಿದರು)

ತಾವು ೩-೪ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಡಿಸ್ಟ್ರಿಕ್ ರಿಆರ್ಗನೈಸೇಷನ್, ಫ್ಲಡ್ ರಿಲೀಫ್ ಬಗ್ಗೆ ಹೊಸ ಕಾನೂನು ಮತ್ತು ಅನೇಕ ಕಡೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಬಿಲ್ಡಿಂಗ್ಸ್ ಇಲ್ಲ, ಅವನ್ನು ಕಟ್ಟಿಕೊಡತಕ್ಕ ವ್ಯವಸ್ಥೆ ಮಾಡಬೇಕು. ಮತ್ತು ಈ ಜಮೀನಿನ ಬಗ್ಗೆ ವಿಚಾರ ಮಾಡಿ ಹರಿಜನ ಗಿರಿಜನರಿಗೆ ಮುಫತ್ ಆಗಿ ಪಟ್ಟಾ ಕೊಡಲು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಸ್ವಲ್ಪ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—೧ ಗಂಟೆಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕಾಗಿದೆ. ಈಗ ಮಾತನಾಡತಕ್ಕವರು ೫ ನಿಮಿಷದಲ್ಲಿ ಮುಗಿಸಬೇಕು. ಈಗ ಶ್ರೀ ವೆಂಕಟೇಶ್‌ರವರು ಮಾತನಾಡಬೇಕು.

ಶ್ರೀ ವಾಟಾಳ್‌ನಾಗರಾಜ್.—ನನ್ನದು ಒಂದು ಖಾಸಗಿ ನಿರ್ಣಯ ಇದೆ.

ಉಪಾಧ್ಯಕ್ಷರು.—ಉತ್ತರ ಆದಮೇಲೆ ಕ್ಲಾರಿಫಿಕೇಷನ್ ಇದೆ. ಅದಾದ ಮೇಲೆ ಖಾಸಗಿ ನಿರ್ಣಯ ಬರುತ್ತದೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಏನು ಬೇಡಿಕೆ ಇಟ್ಟಿದ್ದಾರೆ ಇದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಸುಮಾರು ೧೦ ಸಾವಿರ ಎಕರೆ ಜಮೀನನ್ನು ೩೦–೪೦ ವರ್ಷಗಳಿಂದ ರೈತರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಆ ಸ್ಥಳವನ್ನು ಪರಿಶೀಲನೆ ಮಾಡದೆ ಆ ೧೦ ಸಾವಿರ ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಇಲ್ಲಿಯವರೆಗೆ ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಗಳ ಗೊಂದಲದಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇನ್ನು ವಿಲೇಜ್ ಅಕೌಂಟೆಂಟ್ ಬಗ್ಗೆ ಒಂದು ಸಲಹೆಯನ್ನು ಕೊಡಲು ಇಚ್ಛಿಸುತ್ತೇನೆ. ವಿಲೇಜ್ ಅಕೌಂಟೆಂಟ್ ಯಾರಿದ್ದಾರೆ, ಇವರೇ ಪಹಣಿಯನ್ನು ಬರೆಯುವವರು ಇದರಿಂದ ಕೋರ್ಟಿಗೆ ಹೋಗಿ ಗಲಾಟೆಯಾಗಿ ಬಹಳಷ್ಟು ಘರ್ಷಣೆಗಳು ಆಗುತ್ತಿವೆ. ತಾಲ್ಲೂಕು ಪಂಚಾಯಿತಿ ಸಮಿತಿಯು ಶಾಸಕರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮತ್ತು ತಹಶೀಲ್ದಾರ್‌ರವರನ್ನು ಸೇರಿಸಿ ಒಂದು ಸಮಿತಿ ಮಾಡಿ ಅದಕ್ಕೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ತಹಶೀಲ್ದಾರ್‌ರನ್ನು ಕಾರ್ಯದರ್ಶಿಯನ್ನಾಗಿ ಮಾಡಿ. ವಿಲೇಜ್ ಅಕೌಂಟೆಂಟ್ ಅನ್ನು ಆ ಸಭೆಗೆ ಬರುವಂತೆ ಮಾಡಿ ಆ ಸಮಿತಿಯಲ್ಲಿ ಶಿರಸ್ತೇದಾರರು ಹಾಗೂ ರೆವಿನ್ಯೂ ಇನ್ಸ್‌ಪೆಕ್ಟರ್‌ರವರನ್ನು ಸದಸ್ಯರನ್ನಾಗಿ ಮಾಡಿ ಪ್ರತಿ ೨ ತಿಂಗಳಿಗೆ ಒಂದು ಸಾರಿ ಈ ಸಭೆಯನ್ನು ಕರೆದು ಅಲ್ಲಿ ಚರ್ಚೆ ಮಾಡಿದರೆ ಇದರಿಂದ ಒಳ್ಳೆಯದಾಗುತ್ತದೆ. ಆಗ ವಿಲೇಜ್ ಅಕೌಂಟೆಂಟ್‌ಗೆ ಹೆದರಿಕೆ ಬರುತ್ತದೆ. ನಮ್ಮ ಪಹಣಿ ಪುಸ್ತಕವನ್ನು ರಿವ್ಯೂ ಮಾಡುತ್ತಾರೆ ರೈತರು ತೊಂದರೆಯಾಗಿದೆ ಎಂದು ಅರ್ಜಿ ಕೊಟ್ಟರೆ ವಿಚಾರಣೆ ಮಾಡುತ್ತಾರೆಂದು ಮನವರಿಕೆಯಾಗಿ ವಿಲೇಜ್

ಅಕೌಂಟೆಂಟ್ ಹಾಗೂ ಇತರರು ಸರಿಯಾಗಿ ಕೆಲಸ ಮಾಡುತ್ತಾರೆ. ಇದರಿಂದ ಸರಿಯಾಗಿ ಪಹಣಿ ಯನ್ನು ಬರೆಯಲು ಅನುಕೂಲವಾಗುತ್ತದೆ. ಈ ಕಂದಾಯ ಇಲಾಖೆಯಲ್ಲಿ, ಸರ್ವೆ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಸರ್ವೆ ಸೆಟಲ್‌ಮೆಂಟ್ಸ್ ಅಂಡ್ ಲ್ಯಾಂಡ್ ರೆಕಾರ್ಡ್ಸ್ ಇರುತ್ತಾರೆ, ಹಾಗೆಯೇ ಡೆಪ್ಯೂಟಿ ಡೈರೆಕ್ಟರು ಇರುತ್ತಾರೆ. ಇವರಿಗೆ ಒಂದು ಜೀಪ್ ಇಲ್ಲ. ಒಂದು ಸಬ್ ಡಿವಿಜನ್‌ನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಹೋಗಿ ಸರ್ವೇಯರ್ ಅಳತೆ ಮಾಡಿದಂತಹ ಜಮೀನನ್ನು ಇನ್ಸ್‌ಪೆಕ್ಷನ್ ಮಾಡಲು ಬಹಳ ಕಷ್ಟವಾಗಿದೆ. ಅವರು ಬಸ್‌ನಲ್ಲಿ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಕೊಂಡು ಬರಬೇಕಾಗಿದೆ. ಇಲ್ಲದಿದ್ದರೆ ಅವರು ಕಛೇರಿಯಲ್ಲಿ ಕುಳಿತುಕೊಂಡು ಯಾವ ಏರಿಯಾಕ್ಕೂ ಹೋಗದೆ ಸುಮ್ಮನೆ ನೋಡಿಕೊಂಡು ಬಂದಿದ್ದೇನೆಂದು ಅಸಿಸ್ಟೆಂಟ್ ಡೈರೆಕ್ಟರ್ ಸಹಿ ಮಾಡುತ್ತಾರೆ. ಈ ಸರ್ವೆ ಇಲಾಖೆಯಲ್ಲಿ ಸರ್ವೇಯರ್ಸ್ ಇಲ್ಲ. ಒಬ್ಬ ತಹಶೀಲ್ದಾರ್‌ಗೆ ಒಬ್ಬ ಸರ್ವೆಯರ್ ಅನ್ನು ಕೊಟ್ಟಿ ದ್ದಾರೆ. ಎಂಟೈರ್ ತಾಲ್ಲೂಕಿನಲ್ಲಿ ಸರ್ವೆ ಮಾಡಲು ಹೋದಾಗ ಒಬ್ಬ ಸರ್ವೆಯರಿಗೆ ೨–೩ ದಿವಸ ಬೇಕಾ ಗುತ್ತದೆ. ಆದರೂ ಕೆಲಸ ಪೂರ್ತಿಯಾಗುವುದಿಲ್ಲ. ಕನಿಷ್ಠ ಪಕ್ಷ ಒಂದು ತಹಶೀಲ್ದಾರ್ ಆಫೀಸಿಗೆ ೨ ಸರ್ವೆ ಯರ್‌ಅನ್ನು ಹಾಕಿದರೆ ಸರ್ವೆ ಮಾಡಲು ಅನುಕೂಲವಾಗುತ್ತದೆ. ಈ ಸರ್ವೆ ಇಲಾಖೆಯಲ್ಲಿ ಅನೇಕ ಹುದ್ದೆ ಗಳು ಇನ್ನೂ ಭರ್ತಿಯಾಗಿಲ್ಲ, ಜಮೀನು ಸರ್ವೆ ಮಾಡಲು ೫೦೦ ರೂಪಾಯಿ ಫೀಸ್ ಕಟ್ಟಿ ಅರ್ಜಿ ಕೊಟ್ಟರೆ ೫ ತಿಂಗಳು, ೬ ತಿಂಗಳು ಆಗುತ್ತದೆ. ಸೀನಿಯಾರಿಟಿ ಮೇಲೆ ತೆಗೆದುಕೊಳ್ಳುತ್ತಾರೆ. ಶಾಸಕರು ಹಾಗೂ ಇತರ ಪ್ರಭಾವಿಗಳು ಇನ್‌ಫ್ಲೂಯೆನ್ಸ್ ಮಾಡಿದರೆ ಸರ್ವೆ ಮಾಡಿಕೊಡಲು ಕನಿಷ್ಠ ೫ ತಿಂಗಳು ತೆಗೆದುಕೊಳ್ಳುತ್ತಾರೆ. ಈ ಸರ್ವೆ ಇಲಾಖೆಯಲ್ಲಿ ಸ್ಕೆಚ್ ಒಂದನ್ನು ಪೇಪರ್‌ನಲ್ಲಿ ಕೊಡುತ್ತಾರೆ. ಆ ಸ್ಕೆಚ್ ಕೊಡಿ ಎಂದರೆ ಎರಡು ತಿಂಗಳು ಬೇಕು ಅನ್ನುತ್ತಾರೆ. ಅವರು ನಕಾಶೆ ಕಾಪಿ ಕೊಟ್ಟಿದ್ದು ೨–೩ ದಿವಸ ಇರುವುದಿಲ್ಲ. ಒಂದು ಸಲ ಮಡಚಿದರೆ ಹರಿದುಹೋಗುತ್ತದೆ. ನಾವು ಕೇಳಿದರೆ ಸರ್ಕಾರದಿಂದ ಬರತಕ್ಕ ಪೇಪರ್ ಸರಿಯಾಗಿಲ್ಲ ನೀವು ಬೇರೆ ಒಳ್ಳೆಯ ಪೇಪರ್ ತೆಗೆದುಕೊಂಡು ಬಂದು ಕೊಡಿ ಎಂದು ಹೇಳುತ್ತಾರೆ. ಈ ರೀತಿ ಗ್ರಾಮಗಳ ನಕಾಶೆಗಳು ಒಂದೂ ಇಲ್ಲ. ಈಗ ನಮ್ಮ ಗ್ರಾಮ ನಕಾಶೆ ಬೇಕು ಎಂದರೆ ಪ್ರಿಂಟ್ ಇಲ್ಲವೆಂದು ಹೇಳುತ್ತಾರೆ. ಸಬ್‌ಡಿವಿಜನ್‌ನಲ್ಲಿ ಕೇಳಿದರೆ ಮೈಸೂರಿನಲ್ಲಿ ಕೇಳಿ ಎಂದು ಹೇಳುತ್ತಾರೆ. ಮೈಸೂರಿನಲ್ಲಿ ಕೇಳಿದರೆ, ಬೆಂಗಳೂರಿನಲ್ಲಿ ಕೇಳಿ ಅನ್ನುತ್ತಾರೆ. ಬೆಂಗಳೂರಿನಲ್ಲಿ ಕೇಳಿದರೆ ಇನ್ನೂ ಪ್ರಿಂಟ್ ಆಗಿಲ್ಲವೆಂದು ಹೇಳುತ್ತಾರೆ. ನಮ್ಮ ಹತ್ತಿರ ಮಿಷನ್ ಕೊಟ್ಟಿದೆ, ಸಿಬ್ಬಂದಿ ಇಲ್ಲ ಮಾಡು ವುದಕ್ಕಾಗುತ್ತಿಲ್ಲ, ಹಣ ಇಲ್ಲ ಎನ್ನುವಂತಹ ಹಲವಾರು ತೊಂದರೆಗಳನ್ನು ಹೇಳುತ್ತಾರೆ ಇವತ್ತು ಗ್ರಾಮಗಳ ನಕಾಶೆಗಳು ಗ್ರಾಮೀಣ ಜನರಿಗೆ ಸಿಗುತ್ತಾ ಇಲ್ಲ. ಇದರಿಂದ ರೈತರಿಗೆ ಬಹಳ ತೊಂದರೆ ಯಾಗುತ್ತಿದೆ. ಪರಿಶಿಷ್ಟ ಜಾತಿಯವರಿಗೆ ಸರ್ವೆ ಇಲಾಖೆಯಲ್ಲಿ ಹೆಚ್ಚಿನ ಪ್ರಮೋಷನನ್ನು ಇದು ವರೆವಿಗೂ ಕೊಟ್ಟಿಲ್ಲ. ಕಂದಾಯ ಇಲಾಖೆಯಲ್ಲಿರುವ ಪರಿಶಿಷ್ಟ ಜಾತಿಯ ಶೀಘ್ರಲಿಪಿಗಾರರಿಗೆ ಇದು ವರೆಗೆ ಒಬ್ಬರಿಗೂ ಪ್ರಮೋಷನ್ ಕೊಟ್ಟಿಲ್ಲ. ಈ ರೀತಿಯಲ್ಲಿ ಸರ್ವೇ ಇಲಾಖೆಯಲ್ಲಿ ತೊಂದರೆಗಳು ಆಗುತ್ತಾ ಇವೆ. ಇನ್ನು ಸರ್ವೆ ಇಲಾಖೆಯಲ್ಲಿ ಇನ್–ಛಾರ್ಜ್ ಅಧಿಕಾರಿಗಳು ಜಾಸ್ತಿ ಇದ್ದಾರೆ. ಇದರಿಂದಾಗಿ ಅಲ್ಲಿ ಫೈಲ್ ಮೂವ್‌ಮೆಂಟ್ ಆಗುವುದೇ ಕಷ್ಟವಾಗಿದ್ದು ಒಂದೊಂದು ಜಾಗದಲ್ಲೂ ಸಾವಿರಾರು ಫೈಲುಗಳು ರಾಶಿರಾಶಿಯಾಗಿ ಬಿದ್ದಿವೆ. ಇವತ್ತು ಪರ್ಮನೆಂಟ್ ಅಧಿಕಾರಿಗಳು ಅಲ್ಲಿ ಇಲ್ಲದೆ ಇರುವುದರಿಂದ ಎಷ್ಟೋ ದಾಖಲಾತಿಗಳು ಇನ್ನೂ ಸೈನ್ ಆಗದೇ ಹಾಗೇ ಬಿದ್ದಿವೆ. ಹೇಳುವುದಕ್ಕೆ ಇನ್ನೂ ವಿಷಯಗಳಿದ್ದರೂ ಸಮಯ ಕಡಿಮೆ ಇರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಬಹಳ ಜನ ಹಿರಿಯ ಸದಸ್ಯರು ಅನೇಕ ವಿಚಾರಗಳ ಮೇಲೆ ಮಾತನಾಡಿದ್ದಾರೆ. ನಾನು ನನ್ನ ಚಿಕ್ಕಮಗಳೂರು ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಕೆಲವು ವಿಚಾರಗಳನ್ನು ಮಾತ್ರ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ, ನಮ್ಮ ಚಿಕ್ಕಮಗಳೂರು ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಭದ್ರಾ ರಿಸರ್ವ್ ಫಾರೆಸ್ಟ್ ಇದ್ದು ಅಲ್ಲಿ ರೆವಿನ್ಯೂ ಜಾಗ ಇದೆ ಹಾಗೂ ಅಲ್ಲಿ ಸಾಕಷ್ಟು ಗ್ರಾಮಗಳು ಇವೆ. ಈ ಗ್ರಾಮಗಳನ್ನು ರಿಸರ್ವ್ ಫಾರೆಸ್ಟ್‌ನಿಂದ ವರ್ಗ ಮಾಡಬೇಕು ಅಥವಾ ಈ ಹಳ್ಳಿಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡಬೇಕೆಂದು ಒಂದು ತೀರ್ಮಾನವನ್ನು ಸರ್ಕಾರ ಬಹಳ ಹಿಂದೆಯೇ ತೆಗೆದು ಕೊಂಡಿದೆ. ಬಹುಶ: ಈ ತೀರ್ಮಾನವನ್ನು ಸರ್ಕಾರ 10 ರಿಂದ 15 ವರ್ಷಗಳ ಹಿಂದೆಯೇ ತೆಗೆದು ಕೊಂಡಿದೆ. ಆದರೆ ಇವತ್ತಿನವರೆಗೆ ಅಲ್ಲಿ ವಾಸವಾಗಿರುವ ಗ್ರಾಮಸ್ಥರ ಬಗ್ಗೆ ಯಾವುದೇ ರೀತಿಯ ತೀರ್ಮಾನವನ್ನು ಸರ್ಕಾರ ಇದುವರೆವಿಗೂ ಕೊಟ್ಟಿಲ್ಲ. ಮುಖ್ಯವಾದ ವಿಚಾರ ಏನೆಂದರೆ, ಅಲ್ಲಿ ಮುತ್ತೋಡಿ ರಿಸರ್ವ್ ಫಾರೆಸ್ಟ್‌ನಲ್ಲಿ ಸೇರುವಂಥ ಗ್ರಾಮಗಳು ೨೧ ಇವೆ. ಈ ೨೧ ಹಳ್ಳಿಗಳಲ್ಲಿ ಸುಮಾರು ೮ ರಿಂದ ೧೦ ಸಾವಿರ ಜನಸಂಖ್ಯೆ ಇರುತ್ತದೆ. ಅದರಲ್ಲಿ ೫ ಸಾವಿರ ಎಕರೆ ಕಾಫಿತೋಟ.

ತರಿ ಜಮೀನು ೨ ಸಾವಿರ ಎಕರೆ ಬರುತ್ತದೆ. ಹಾಗೂ ಮೂರು ಸಾವಿರ ಎಕರೆಯಷ್ಟು ಅಡಿಕೆ ಮತ್ತು ಖುಷ್ಕಿ ಜಮೀನು ಬರುತ್ತದೆ. ಆದರೆ ೧೫ ವರ್ಷಗಳ ಹಿಂದೆ ಈ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೂ ಇಲ್ಲಿಯವರೆಗೆ ಅಲ್ಲಿ ವಾಸವಾಗಿರುವ ಜನರಿಗೆ ಯಾವುದೇ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿರುವುದಿಲ್ಲ. ಹಾಗೂ ಇವತ್ತು ಅವರ ಸ್ಥಿತಿ ಹೇಗಿದೆ ಎಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾಗಿದ್ದರೂ ಕೂಡಾ. ಇದುವರೆವಿಗೂ ಈ ಹಳ್ಳಿಗಾಡಿನ ಜನರಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲ. ಅನೇಕ ಸಾರಿ ಈ ರೈತರು ತಮ್ಮ ಬೇಡಿಕೆಗಳನ್ನು ತಹಶೀಲ್ದಾರರ ಮುಂದೆ, ಜಿಲ್ಲಾಧಿಕಾರಿಗಳ ಮುಂದೆ ಹಾಗೂ ಸರ್ಕಾರದ ಮಟ್ಟದಲ್ಲಿ ಇಟ್ಟರೂ ಕೂಡಾ ಇವತ್ತಿನವರೆಗೆ ಅವರ ಯಾವುದೇ ಬೇಡಿಕೆಗಳನ್ನು ಯಾರೂ ಕೂಡಾ ಈಡೇರಿಸುವುದಕ್ಕೆ ಸಾಧ್ಯವಾಗಿಲ್ಲ, ಅದರಲ್ಲೂ ಮುಖ್ಯವಾಗಿ ಇವತ್ತು ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಜೀವನ ಮಾಡಬೇಕಾದರೆ ಅವನಿಗೆ ಅಗತ್ಯ ಇರುವ ಸೌಕರ್ಯಗಳನ್ನು, ವಸ್ತುಗಳನ್ನು ಒದಗಿಸಿಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಆದರೆ ಅವರ ಬೇಡಿಕೆಗಳನ್ನು ಸರ್ಕಾರವಾಗಲಿ, ಅಧಿಕಾರ ವರ್ಗದವರಾಗಲಿ ಈಡೇರಿಸುವುದಕ್ಕೆ ಸಾಧ್ಯವಾಗಿಲ್ಲ. ಅವರ ಕಷ್ಟಗಳನ್ನು ಹೇಳುವುದಾದರೆ, ಬಹುಶಃ ನನಗೆ ತಾವು ಏನು ೫ ನಿಮಿಷ ಕಾಲವನ್ನು ನಿಗಧಿ ಮಾಡಿದ್ದೀರಿ ಇದು ಸಾಲದು. ಈ ಬಗ್ಗೆ ಒಂದು ಗಂಟೆ ಕಾಲ ಮಾತನಾಡುವಷ್ಟು ವಿಷಯ ಇರುವುದರಿಂದ ತಾವು ಇನ್ನೂ ಐದು ನಿಮಿಷಗಳು ಹೆಚ್ಚು ಕಾಲಾವಕಾಶವನ್ನು ನನಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಎರಡು ಗಂಟೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಆದ್ದರಿಂದ ತಾವು ಬೇಗ ಮುಗಿಸಿ.

ಶ್ರೀ ಸಿ. ಆರ್. ಸಗೀರ್ ಅಹಮದ್.—ಇದು ನನ್ನ ಕ್ಷೇತ್ರದ ಮುಖ್ಯವಾದ ವಿಷಯವಾಗಿರುವುದರಿಂದ ದಯವಿಟ್ಟು ನನಗೆ ೫ ನಿಮಿಷ ಹೆಚ್ಚಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಕೂಡ ಇವತ್ತಿನವರೆಗೆ ಈ ೨೧ ಹಳ್ಳಿಗಳಿಗೆ ನಾಗರೀಕ ಸೌಲಭ್ಯಗಳನ್ನು ಒದಗಿಸಿಲ್ಲ. ಅದರಲ್ಲೂ ಮುತ್ತೋಡಿ ಗ್ರಾಮಕ್ಕೆ ಪೋಸ್ಟ್ ಆಫೀಸಿನ ಸೌಲಭ್ಯವಿಲ್ಲ, ವಿದ್ಯುಚ್ಛಕ್ತಿ ಸೌಲಭ್ಯವಿಲ್ಲ, ರಸ್ತೆ ಸೌಲಭ್ಯವಿಲ್ಲ, ಆಸ್ಪತ್ರೆ ಸೌಲಭ್ಯವಿಲ್ಲ. ಯಾವುದೇ ಸೌಲಭ್ಯಗಳು ಇಷ್ಟು ವರ್ಷಗಳಾದರೂ ಸಹ ಆ ಹಳ್ಳಿಯ ಜನರಿಗೆ ಒದಗಿಸಿ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಈ ಸದನದ ಮುಖಾಂತರ ಮತ್ತು ತಮ್ಮ ಮುಖಾಂತರ ಈ ಹಳ್ಳಿಗಳು ರೆವಿನ್ಯೂ ಇಲಾಖೆಗೆ ಬರುವುದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸರ್ಕಾರ ಪರಿಹಾರವನ್ನು ಒದಗಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಮುತ್ತೋಡಿ ರಿಸರ್ವ್ ಫಾರೆಸ್ಟ್‌ನಲ್ಲಿರತಕ್ಕವರನ್ನು ಬೇರೆ ಕಡೆ ವರ್ಗಾಯಿಸಲಿಕ್ಕೆ ಸರ್ಕಾರ ನಿರ್ಣಯ ಮಾಡಿದೆ. ಆ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಆ ೨೧ ಹಳ್ಳಿಗಳ ಜನರಿಗೆ ಬೇರೆ ಕಡೆ ಜಾಗವನ್ನು ನಿಗದಿಪಡಿಸಿದ್ದಾರೆ. ಆ ಜಾಗಕ್ಕೆ ಅವರು ಹೋಗಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಬಹಳಷ್ಟು ಜನ ರೈತರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಪರಿಹಾರವನ್ನು ದೊರಕಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ರೆವಿನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ತಮಗೆ ಗೊತ್ತಿರುವಹಾಗೆ ಬಹುಶಃ ಈ ವಿಚಾರ ಸರ್ಕಾರದ ಗಮನಕ್ಕೂ ಬಂದಿದೆ. ಸಾಮಾನ್ಯವಾಗಿ ಇಡೀ ಕರ್ನಾಟಕ ರಾಜ್ಯದಲ್ಲೇ ಇಡೀ ದೇಶದಲ್ಲಿಯೇ ಎರಡು ತರಹ ಸಾಗುವಳಿ ಚೀಟಿ ಕೊಡುವಂತಹ ಒಂದು ಅವಕಾಶ ಸರ್ಕಾರದ ನಿಯಮಾವಳಿಯಲ್ಲಿದೆ. ಒಂದು ಟೆಂಪರರಿ ಸಾಗುವಳಿ ಚೀಟಿ ಕೊಡುವುದು ಮತ್ತೊಂದು ಪರ್ಮನೆಂಟ್ ಸಾಗುವಳಿ ಚೀಟಿಯನ್ನು ಕೊಡುವುದು. ನನ್ನ ಕ್ಷೇತ್ರವಾದ ಚಿಕ್ಕಮಗಳೂರು ಕ್ಷೇತ್ರದಲ್ಲಿ ೮–೧೦ ವರ್ಷಗಳ ಹಿಂದೆ ಖೋಟಾ ಸಾಗುವಳಿ ಚೀಟಿ ಪ್ರಕರಣ ನಡೆದಿದೆ ಅದರಲ್ಲಿ ಸಾಕಷ್ಟು ಪ್ರಕರಣಗಳನ್ನು ಪತ್ತೆಹಚ್ಚಿ ಹಿರಿಯ ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದರು ಕೆಲವು ಪ್ರಕರಣಗಳಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ನ್ಯಾಯಾಲಯಕ್ಕೆ ಹೋದಾಗ ಅದು ಸುಳ್ಳೆಂದು ನ್ಯಾಯಾಲಯದ ತೀರ್ಪು ಬಂದಿದೆ. ಈ ಬಗ್ಗೆ ಅಧಿಕಾರಿಗಳ ಗ್ಯಾಲರಿಯಲ್ಲಿ ಕುಳಿತುಕೊಂಡಿರುವವರಿಗೆ ನನಗಿಂತ ಒಳ್ಳೆಯ ಅನುಭವವಿದೆ, ಖೋಟಾ ಸಾಗುವಳಿ ಚೀಟಿಯ ಪ್ರಕರಣಗಳು ಅವರಿಗೆ ಬಹಳ ಚೆನ್ನಾಗಿ ಅರ್ಥವಾಗಿದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದರು ಬಹಳಷ್ಟು ಜನ ಶ್ರೀಮಂತರಿಗೆ ಖೋಟಾ ಸಾಗುವಳಿ ಚೀಟಿಯನ್ನು ಕೊಟ್ಟಿದ್ದರು. ಆ ರೀತಿ ಖೋಟಾ ಸಾಗುವಳಿ ಚೀಟಿಯನ್ನು ಪಡೆದುಕೊಂಡ ಶ್ರೀಮಂತರು ಸರ್ಕಾರದಿಂದ ಅನುಮತಿಯನ್ನು ಪಡೆದುಕೊಂಡು ಸಿಆರ್‌ಸಿ ವಗೈರೆ ಪಡೆದುಕೊಳ್ಳುವುದು ಮತ್ತು ಇನ್ನೊಬ್ಬರಿಗೆ ಮಾರಾಟ ಮಾಡುವ ಅಪ್ಪಣೆಯನ್ನು ಸರ್ಕಾರದವರು, ಅಧಿಕಾರಿಗಳು ಕೊಟ್ಟಿದ್ದರು ಅವರ ಜೊತೆಯಲ್ಲಿಯೇ ಖೋಟಾ ಸಾಗುವಳಿ ಚೀಟಿಯನ್ನು ಪಡೆದುಕೊಂಡ ಅನೇಕ ಬಡ ಜನರು ರೈತರು ಏನು ಖೋಟಾ ಸಾಗುವಳಿ ಚೀಟಿಯನ್ನು ತೆಗೆದುಕೊಂಡಿದ್ದಾರೆ ಅವರಿಗೆ ಯಾವುದೇ ಮಾನ್ಯತೆಯಿಲ್ಲದೆ ನೂರಾರು ಜನ ರೈತರು ಖೋಟಾ ಸಾಗುವಳಿ

ಚೀಟಿಯನ್ನು ತೆಗೆದುಕೊಂಡು ಜಿಲ್ಲಾಧಿಕಾರಿಗಳ ಕಛೇರಿಯಿಂದ ತಹಶೀಲ್ದಾರ್‌ರವರ ಕಛೇರಿ, ತಹಶೀಲ್ದಾರ್‌ರವರ ಕಛೇರಿಯಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ತಿರುಗಾಡುತ್ತಿದ್ದಾರೆ. ಆದಕಾರಣ ಮಾನ್ಯ ಕಂದಾಯ ಮಂತ್ರಿಗಳು ಬಡ ಜನರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ. ಅನೇಕ ಜನ ಹಿರಿಯ ಸದಸ್ಯರು ಕಛೇರಿ ಕಟ್ಟಡಗಳ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುವುದಾದರೆ. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ತಹಶೀಲ್ದಾರ್‌ರವರ ಕಛೇರಿ ವಿಚಾರವನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಸಮಯಗಳಲ್ಲಿ ನಾನು ಈ ಕಛೇರಿಗಳಿಗೆ ಭೇಟಿ ಕೊಟ್ಟಾಗ ಖುದ್ದಾಗಿ ನೋಡಿರುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮುಗಿಸಿ, ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಸಿ. ಆರ್. ಸಗೀರ್ ಅಹ್ಮದ್.—ತಹಶೀಲ್ದಾರ್‌ರವರ ಕಛೇರಿಗಳ ವ್ಯವಸ್ಥೆ ಹೇಗೆ ಇದೆ ಎಂಬುದನ್ನು ಸದನದ ಗಮನಕ್ಕೆ ಮತ್ತು ತಮ್ಮ ಮೂಲಕ ಕಂದಾಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ತಹಶೀಲ್ದಾರ್‌ರವರ ಕಛೇರಿ ಯಾವರೀತಿ ಇದೆ ಅಂದರೆ ಮಳೆ ಬಂದರೆ ಸೋರುತ್ತದೆ. ಮಳೆ ಬಂದಾಗ ಸೋರಿದರೆ ಟೇಬಲ್ ಕುರ್ಚಿಗಳನ್ನು ಬೇರೆ ಕಡೆ ಹಾಕಿಕೊಂಡು ಕೆಲಸ ಮಾಡುತ್ತಾರೆ. ಸೋರುವ ಜಾಗಗಳನ್ನು ಖಾಲಿ ಬಿಡುವಂಥ ವ್ಯವಸ್ಥೆ ಅನೇಕ ಕಡೆ ಇರುವುದರಿಂದ ದಯವಿಟ್ಟು ವರ್ಷಕ್ಕೊಮ್ಮೆ ರಿಪೇರಿಗಾಗಿ ಸರ್ಕಾರದ ವತಿಯಿಂದ ಹಣವನ್ನು ಏನು ರಿಸರ್ವಾಗಿ ಇಟ್ಟಿರುತ್ತಾರೋ. ಅದೇ ರೀತಿಯಲ್ಲಿ ನಮ್ಮ ರೆವಿನ್ಯೂ ಇಲಾಖೆಯ ಅನೇಕ ಕಟ್ಟಡಗಳಿಗೂ ವಾರ್ಷಿಕ ರಿಪೇರಿಗಾಗಿ ಹಣವನ್ನು ನಿಗದಿಪಡಿಸಬೇಕೆಂದು ತಮ್ಮ ಮೂಲಕ ಮಾನ್ಯ ರೆವಿನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುತ್ತಾ ನನಗೆ ಎರಡು ಮಾತುಗಳನ್ನು ಆಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೧-೦೦ ಪಿ. ಎಂ.

ಉಪಾಧ್ಯಕ್ಷರು.—ಶ್ರೀ ಬನ್ನಿಕೋಡ್‌ರವರೇ, ನಿಮಗೆ ಕೇವಲ ಮೂರು ನಾಲ್ಕು ನಿಮಿಷ ಇದೆ. ಬೇಗ ಮುಗಿಸಬೇಕು.

† ಶ್ರೀ ಬಿ.ಹೆಚ್. ಬನ್ನಿಕೋಡ್.—ಮಾನ್ಯ ಅಧ್ಯಕ್ಷಣಿಯವರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಯಾವುದೇ ವಿಷಯದ ಮೇಲೆ ಚರ್ಚೆ ಇದ್ದಾಗ ಬೇಡಿಕೆಗಳ ಮೇಲೆ ಬಂದಾಗ ಮಾತನಾಡಿ ಎಂದು ಹೇಳುತ್ತೀರಿ. ಬೇಡಿಕೆಗಳು ಬಂದಾಗ ಈಗ ಒಂದೆರಡು ನಿಮಿಷ ಮಾತನಾಡಿ ಅಂತ ಹೇಳಿದರೆ ಹೇಗೆ ? ದಯವಿಟ್ಟು ಪ್ರತಿಯೊಬ್ಬರಿಗೂ ಸಾಕಷ್ಟು ಅವಕಾಶ ಕೊಡಬೇಕು. ಹಿಂದಿನ ಚರ್ಚೆಯಲ್ಲೂ ಇದೇರೀತಿ ಹೇಳಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು.—ಕ್ಲಾರಿಫಿಕೇಶನ್ ಹೇಳಬೇಕಾದರೆ ಕೇಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿರತಕ್ಕಂಥ ಸಮಸ್ಯೆಗಳ ಬಗ್ಗೆ ನಮಗೆ ತಿಳಿದಂಥ ವಿಷಯಗಳನ್ನು ಹೇಳಬೇಕಾಗುತ್ತದೆ. ದಯವಿಟ್ಟು ಸಾಕಷ್ಟು ಸಮಯ ಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ನೀವು ಹೇಳುವಷ್ಟು ಸಮಯ ಕೊಡುವುದಕ್ಕೆ ಆಗುವುದಿಲ್ಲ. ಐದು ನಿಮಿಷಗಳಲ್ಲಿ ಮುಗಿಸುವುದಾದರೆ ಕೊಡುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಕೆಲವು ಸೂಚನೆಗಳನ್ನಾದರೂ ಕೊಡುವುದಕ್ಕೆ ತಾವು ಸಮಯ ಕೊಡಬೇಕು. ತಾವು ಈ ಸದನದಲ್ಲಿ ನಿರ್ದಿಷ್ಟ ಕಾಲಮಿತಿ ಗೊತ್ತುಮಾಡಬೇಕು ಆ ಕಡೆಯ ಕೆಲವರಿಗೆ ಒಂದು ತಾಸು ಸಮಯ ಕೊಡುತ್ತೀರಿ. ಕೆಲವರಿಗೆ ಎರಡು ತಾಸು ಸಮಯ ಕೊಡುತ್ತೀರಿ. ಈ ತಾರತಮ್ಯ ಸರಿಯಲ್ಲ. ಪ್ರತಿಯೊಬ್ಬರಿಗೂ ಸಾಕಷ್ಟು ಅವಕಾಶ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು.—ನೀವು ಮಾತನಾಡುತ್ತೀರೋ, ಇಲ್ಲ ಬೇರೆಯವರನ್ನೂ ಕರೆಯಬೇಕೋ ? ಮಾತನಾಡುವುದಿದ್ದರೆ ಮಾತನಾಡಿ, ಇಲ್ಲದಿದ್ದರೆ ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಟೈಮ್ ಅಲಾಟ್ ಮಾಡುವುದು ಅಧ್ಯಕ್ಷರು. ಆಯಾಯ ಪಕ್ಷದವರಿಗೆ ಇಷ್ಟು ಸಮಯ ಎಂದು ಅಲಾಟ್ ಮಾಡಿರುತ್ತಾರೆ. ನಿಮ್ಮ ಮೊದಲಿಂದ ಮಾತನಾಡಿ ನೀವು ಸಮಯ ಹಂಚಿಕೊಳ್ಳಬೇಕಾಗುತ್ತದೆ. ನಿಮಗೆ ಶುರು ಮಾಡಿ ಎಂದು ಮಾನ್ಯ ಉಪಾಧ್ಯಕ್ಷರು ಮೊದಲಿಂದ ಮೇಲೆ ಹೇಳುತ್ತಿದ್ದಾರೆ.....

ಉಪಾಧ್ಯಕ್ಷರು.—ಇದರಲ್ಲೇ ಐದು ನಿಮಿಷ ಕಳೆದುಬಿಟ್ಟಿರಿ ಶುರುಮಾಡಿ.

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು).—ಈಗಾಗಲೇ ಅನೇಕ ಹಿರಿಯರು ಇದರ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳಿದತಕ್ಕಂಥ ವಿಚಾರಗಳನ್ನು ಪುನಃ ಹೇಳುವುದಕ್ಕೆ ಹೋಗದೆ ನಾನು ನೇರವಾಗಿ ಕೆಲವೊಂದು ಸಲಹೆ, ಸೂಚನೆಗಳನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಈ ಇಲಾಖೆಯ ಮಂತ್ರಿಗಳು ಆಗಿರುವುದರಿಂದ ಬಹುತೇಕ ಜನರು ಇವರು ಕ್ರಿಯಾಶೀಲ ಮಂತ್ರಿಗಳು ಎಂದು ಹೇಳಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಅದೇ ರೀತಿ ನಾನು ಸಹ ಕೆಲವೊಂದು ವಿಚಾರಗಳನ್ನು ಅವರ ಮುಂದಿಡಲು ಬಯಸುತ್ತೇನೆ. ಇವತ್ತಿನ ದಿವಸ ಗ್ರಾಮಗಳಲ್ಲಿ ಏನಾಗಿದೆ ಎಂದರೆ ತಲಾಟಿಗಳು ಮಾಡಿದ ಗಲಾಟೆಯಲ್ಲಿ ಅಂದರೆ ಅವರು ರೆಕಾರ್ಡುಗಳಲ್ಲಿ ಮಾಡತಕ್ಕಂಥ ತಪ್ಪುಗಳು ಮತ್ತು ಮನಸ್ಸಿಗೆ ಬಂದಂತೆ ಮಾಡತಕ್ಕಂಥ ಸ್ವೇಚ್ಛಾಚಾರಗಳಿಂದಾಗಿ ಈ ಇಲಾಖೆಯಲ್ಲಿ ಅವರನ್ನು ಹದ್ದುಬಸ್ತಿನಲ್ಲಿಡುವಂಥ ಕೆಲಸ ಇವತ್ತಿನವರೆಗೂ ನಡೆದಿಲ್ಲ. ತಲಾಟಿಗಳು ತಮ್ಮ ಮನಸ್ಸಿಗೆ ಬಂದಹಾಗೆ ದಾಖಲೆಗಳನ್ನು ಮಾಡುತ್ತಿದ್ದಾರೆ. ಈ ರೀತಿ ಕಾನೂನು ಬಾಹಿರವಾಗಿ ಕೆಲಸ ಮಾಡಿದವರ ಮೇಲೆ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಅದಕ್ಕಾಗಿ ಇಂತಹ ಕೆಲಸ ನಡೆಯುತ್ತಿದೆ. ಮಾನ್ಯ ಸಚಿವರು ಯಾರು ಕಾನೂನು ಬಾಹಿರವಾದಂಥ ದಾಖಲೆಗಳನ್ನು, ಮ್ಯುಟೇಶನ್‌ಗಳನ್ನು ಮಾಡುತ್ತಿದ್ದಾರೆ. ಅಂತಹವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಅವರಿಗೆ ಅಂಜಿಕೆ ಬರುವ ರೀತಿಯಲ್ಲಿ ಮಾಡಿದರೆ ಈ ಒಂದು ಅವ್ಯವಹಾರ ಅಥವಾ ಹೊಟ್ಟೆ ದಾಖಲೆಗಳನ್ನು ಸೃಷ್ಟಿಸುವುದು ಕಡಿಮೆಯಾಗುತ್ತದೆ. ಇನ್ನು ಭೂಕಂದಾಯ ಕಾಯಿದೆಯ ಕಲಮು ೧೪೯ (೪) ರ ಪ್ರಕಾರ ದಾಖಲೆಗಳನ್ನು ಮಾಡುವಾಗ ಸಬ್‌ರಿಜಿಸ್ಟ್ರಾರ್‌ರವರು ನೋಂದಾಯಿಸಿದಂಥ ಕಾಗದಗಳ ಬಗ್ಗೆ ಯಾವುದೂ ವರದಿ ಕೊಡಬೇಕಾಗಿಲ್ಲ. ಸಬ್‌ರಿಜಿಸ್ಟ್ರಾರ್ ಅವರು ಅಲ್ಲಿರತಕ್ಕಂಥ ನೋಂದಣಿ ಕಾಗದಗಳನ್ನು ನೇರವಾಗಿ ತಹಸೀಲ್ದಾರರಿಗೆ ಕಳಿಸಬೇಕು. ತಹಸೀಲ್ದಾರರು ಅವುಗಳನ್ನು ನೋಂದ್ ಮಾಡಿ ಸರ್ಟಿಫೈ ಮಾಡಬೇಕಾಗಿದೆ. ಈ ಕಾರ್ಯಕ್ರಮ ಇವತ್ತು ನಡೆದಿಲ್ಲ. ಸಬ್ ರಿಜಿಸ್ಟ್ರಾರ್‌ರವರು ತಮ್ಮಲ್ಲಿ ನೋಂದಾದ ಕಾಗದಗಳನ್ನು ತಹಸೀಲ್ದಾರರಿಗೆ ಕಳಿಸಿಕೊಡುವ ವ್ಯವಸ್ಥೆ ಆಗಿಲ್ಲ ಮತ್ತು ತಹಸೀಲ್ದಾರರು ಆ ಪ್ರಕಾರ ಆದೇಶವನ್ನು ಸಹಿತ ಕೊಡುತ್ತಿಲ್ಲ ಮತ್ತು ದಾಖಲೆಗಳನ್ನು ಮಾಡಿಸುತ್ತಿಲ್ಲ. ಇದು ಬೇಗ ಆಗುತ್ತಿಲ್ಲ. ಈ ಒಂದು ವಿಳಂಬವನ್ನು ತಪ್ಪಿಸಲಿಕ್ಕೆ ಮಾನ್ಯ ಸಚಿವರು ತೀವ್ರವಾಗಿ ಒಂದು ಆದೇಶವನ್ನು ಹೊರಡಿಸಿ ಭೂ ಕಂದಾಯ ಕಾಯಿದೆಯ ಕಲಮು ೧೪೯ (೪) ರ ಪ್ರಕಾರ ಒಂದು ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸ ಆಗುವಂತೆ ಮಾಡಬೇಕು. ಇನ್ನೊಂದು ವಿಷಯವೆಂದರೆ, ಹೈಕೋರ್ಟಿನಲ್ಲಿ ಯಾವುದೇ ಪ್ರತಿ ಕೇಳಿದರೆ ಜೆರಾಕ್ಸ್ ಪ್ರತಿಯನ್ನು ಸರ್ಟಿಫೈ ಮಾಡಿ ಕೊಡುತ್ತಾರೆ. ಆದೇ ರೀತಿ ತಾಲ್ಲೂಕು ಆಫೀಸಿನಲ್ಲಿ ಮತ್ತು ಜಿಲ್ಲಾ ಕಚೇರಿಗಳಲ್ಲಿಯೂ ಸಹ ಜೆರಾಕ್ಸ್ ಪ್ರತಿಗೆ ಸರ್ಟಿಫೈ ಮಾಡುವಂಥ ಅವಕಾಶ ಇರಬೇಕು. ಈ ವ್ಯವಸ್ಥೆ ಮಾಡಲಿಕ್ಕೆ ಇರತಕ್ಕ ಕಾನೂನಿಗೆ ತಿದ್ದುಪಡಿ ತಂದರೆ ಅನುಕೂಲವಾಗುತ್ತದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನಂತರ ಈ ತಲಾಟಿಗಳ ಹುದ್ದೆಗಳು ಸಾಕಷ್ಟು ಖಾಲಿ ಇವೆ. ಇವರು ಇಲ್ಲದೇ ಇರುವುದರಿಂದ ರೈತರಿಗೆ ಅನಾನುಕೂಲವಾಗಿದೆ. ರೈತರಿಗೆ ಯಾವುದೇ ದಾಖಲೆಗಳು ಸಿಗುತ್ತಿಲ್ಲ. ಅವರು ಸಾಲ ತೆಗೆದುಕೊಳ್ಳಬೇಕಾದರೆ ಸಾಕಷ್ಟು ಕಾಗದಪತ್ರಗಳು ಸಿಗದೆ ಅನೇಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಹಾಲಿ ಇರತಕ್ಕ ತಲಾಟಿ ಹುದ್ದೆಗಳನ್ನು ಬೇಗ ತುಂಬಬೇಕೆಂದು ಹೇಳುತ್ತೇನೆ. ಇನ್ನು ಕಂದಾಯವನ್ನು ರದ್ದುಪಡಿಸಬೇಕೆಂದು ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ. ಈ ಕಂದಾಯ ಬ್ರಿಟಿಷರ ಕಾಲಕ್ಕೆ ಇತ್ತು, ಸಾಮ್ರಾಜ್ಯ ಶಾಹಿಗಳ ಕಾಲಕ್ಕೆ ಇತ್ತು. ಅವರಿಗೆ ಆಡಳಿತ ನಿರ್ವಹಣೆಗಾಗಿ ಬೇರೆ ಯಾವುದೇ ಕರಗಳು ಇರಲಿಲ್ಲ. ಅದಕ್ಕಾಗಿ ಈ ಒಂದು ಭೂಕಂದಾಯ ಮೂಲಕ ಬರುವ ಆದಾಯದಿಂದ ಆಡಳಿತ ನಿರ್ವಹಣೆ ಮಾಡುತ್ತಿದ್ದರು, ಸರ್ವಾಧಿಕಾರವನ್ನು ನಡೆಸುತ್ತಿದ್ದರು ರಾಜ್ಯಭಾರ ಮಾಡುತ್ತಿದ್ದರು ಇವತ್ತು ಜೀವನದ ಪ್ರತಿಯೊಂದು ವಸ್ತುಗಳ ಮೇಲೂ ಕರ ಹಾಕಿರುವಾಗ, ನಮಗೆ ಬರತಕ್ಕ ೪ ಕೋಟಿ ಕಂದಾಯಕ್ಕೆ, ೮ ಕೋಟಿ ಹಣ ಖರ್ಚು ಮಾಡಿ ವಸೂಲ್ಮಾಡುವುದು ಅಷ್ಟು ಸಾಧುವಲ್ಲ. ಕಾರಣ ಬೇರೆ ರೀತಿಯಲ್ಲಿ ನಾವು ಕರ ಹಾಕಿರುವುದರಿಂದ ಈ ಭೂ ಕಂದಾಯವನ್ನು ಕೈಬಿಡುವುದು ಸೂಕ್ತವೆಂದು, ಮಾನ್ಯ ಸಚಿವರು ಇದನ್ನು ಪರಿಗಣಿಸುತ್ತಾರೆಂದು ಭಾವಿಸಿದ್ದೇನೆ. ಇನ್ನು ಭೂ ಕಂದಾಯ ಕಾನೂನಿನ ಕಲಂ ೬೪ ರ ಬಗ್ಗೆ, ಈ ಸಾಗುವಳಿ ಚೀಟಿ ಬಗ್ಗೆ ಒಂದು ವಿಚಾರ ಹೇಳುತ್ತೇನೆ, ಇದು ಬಹಳ ದಿವಸಗಳಿಂದ ನೆನಗುದಿಗೆ ಬಿದ್ದಿದೆ. ಮಾನ್ಯ ಮಂತ್ರಿಗಳು

ಕ್ರಿಯಾಶೀಲ ಮಂತ್ರಿಗಳು, ಬಹುತೇಕ ಅವರು ಈ ಇಲಾಖೆಯನ್ನು ಕೇಳದೇ ಇದ್ದರೂ, ಅವರಿಗೆ ಇದನ್ನೇ ಕೊಟ್ಟಿದ್ದಾರೆ. ಇವರು ಈ ಇಲಾಖೆಗೆ ಹೊಸದಾಗಿ ಬಂದಿದ್ದು, ಗ್ರಾಮೀಣ ಜನರು ಇವರಿಂದ ಏನಾದರೂ ಹೊಸತನವನ್ನು ಕಾಣಬಹುದು. ಈ ಇಲಾಖೆಗೆ ಅವರು ಜೀವ ತುಂಬುತ್ತಾರೆ. ಆದ್ದರಿಂದ ಮಾನ್ಯ ಸಚಿವರು ಈ ಸಾಗುವಳಿ ಚೀಟಿ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡಬೇಕು. ಇನ್ನು ಈ ರಾಜ್ಯದ ೭೫ ಸಾವಿರ ಎಕರೆ ಜಮೀನನ್ನು ಬಂಡವಾಳ ಶಾಹಿಗಳಿಗೆ ಕೊಟ್ಟಿದ್ದಾಗಿದೆ. ಕೆ. ಪಿ. ಎಲ್. ಗೆ ಮತ್ತು ಬಿರ್ಲಾ ಕಂಪನಿಗೆ ಕರ್ನಾಟಕ ಸರ್ಕಾರ ರಾಜ್ಯದ ೭೫ ಸಾವಿರ ಎಕರೆ ಜಮೀನನ್ನು ಕೊಟ್ಟಿದೆ. ನಾವು ೪೩ ವರ್ಷಗಳಿಂದ ಸಮಾಜವಾದ ಎಂದು ಹೇಳುತ್ತಿದ್ದೇವೆ. ನಾವು ಮಾಡತಕ್ಕ ಕಾನೂನಿನಿಂದ ಬಂಡವಾಳ ಶಾಹಿಗಳಿಗೆ ಅನುಕೂಲವಾಗುತ್ತದೆಯೇ ಹೊರತು ಬಡವರಿಗೆ ಅನುಕೂಲವಾಗಿ ಇಲ್ಲವೆಂದು ಹೇಳುತ್ತೇನೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ೭೫ ಸಾವಿರ ಎಕರೆಯನ್ನು ಏನು ಕೆ. ಪಿ. ಎಲ್. ಗೆ ಕೊಟ್ಟಿರುತ್ತಾರೆ, ಇದನ್ನು ರದ್ದು ಮಾಡಬೇಕೆಂದು ವಿನಂತಿಸುತ್ತೇನೆ. ನಾನು ಅನಾವಶ್ಯಕವಾಗಿ ರಾಜಕೀಯ ಮಾಡುತ್ತಿಲ್ಲ, ಇರತಕ್ಕ ವಿಷಯವನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಅವರ ಕಾಲದಲ್ಲೇ ಆಗಿರುವುದು..........

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳತಕ್ಕ ವಿಚಾರ, ಅವರು ಟೆನೆಂಟ್ಸ್ ಪರವಾಗಿ ಇರತಕ್ಕ ವಿಚಾರ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನೀವು ನಿಮ್ಮ ಅಭಿಪ್ರಾಯವನ್ನು ಹೇಳಿ. ಅವರು ಹೊಸದಾಗಿ ಬಂದಿದ್ದಾರೆ, ಉತ್ಸಾಹ ಇದೆ. ವಕೀಲರು ಇದ್ದಾರೆ, ವಿಚಾರವನ್ನು ತಿಳಿದುಕೊಂಡಿದ್ದಾರೆ. ಅವರು ಮಾತನಾಡಲಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ನಾನು ಆಪಾದನೆ ಮಾಡಲಿಲ್ಲ. ನಾನು ಈ ೭೫ ಸಾವಿರ ಎಕರೆ ಬಗ್ಗೆ ಹೇಳಿರತಕ್ಕಂಥ ಮಾತು ಯಾವುದೇ ರಾಜಕೀಯ ವಿಚಾರ ಅಲ್ಲ. ಇವತ್ತಿನ ದಿವಸ ಈ ಭೂಮಿಯನ್ನು ಕೆ. ಪಿ. ಎಲ್.ಗೆ ಮತ್ತು ಬಿರ್ಲಾ ಕಂಪನಿಗೆ ಅಂದರೆ ಜಾಯಿಂಟ್ ಸ್ಟಾಕ್ ಕಂಪನಿಗೆ ಕೊಟ್ಟಿದೆ. ಕೇಂದ್ರ ಅರಣ್ಯ ಕಾನೂನಿನ ಕಲಂ ೨ರ ಪ್ರಕಾರ ಯಾವುದೇ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯದೆ ಅರಣ್ಯ ಭೂಮಿಯನ್ನು ಜಾಯಿಂಟ್ ಸ್ಟಾಕ್ ಕಂಪನಿಗೆ ಕೊಡುವುದಕ್ಕೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಕಾನೂನು ಇದೆ. ಒಂದು ವೇಳೆ ಈ ೭೫ ಸಾವಿರ ಎಕರೆ ಭೂಮಿಯನ್ನು ಕರಾರು ಮಾಡಿಕೊಂಡು ಕೊಟ್ಟಿದ್ದರೂ ಸಹ ಇದು ಕಾನೂನು ದೃಷ್ಟಿಯಿಂದ ರದ್ದಾಗಿರುತ್ತದೆ. ಆದ್ದರಿಂದ ಈ ಭೂಮಿಯನ್ನು ಬಡವರಿಗೆ ಹಂಚತಕ್ಕ ವ್ಯವಸ್ಥೆ ಮಾಡಬೇಕು. ಸಾಮಾಜಿಕ ಅರಣ್ಯ ಕಾರ್ಯಕ್ರಮದಲ್ಲಿ ಬಡವರಿಗೆ ಒಂದೊಂದು ಎಕರೆ ಕೊಟ್ಟು ಒಂದು ಎಕರೆಗೆ ೪೦–೫೦ ಗಿಡಗಳನ್ನು ಹಂಚುವಂತಹ ವ್ಯವಸ್ಥೆ ಮಾಡಿ. ಇದರಿಂದ ಅರಣ್ಯ ಏನೂ ನಾಶವಾಗುವುದಿಲ್ಲ, ನಮ್ಮ ಅರಣ್ಯವನ್ನು ಕಾಪಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷಣಿಯವರು.—ಶ್ರೀಯುತ ಬನ್ನಿಕೋಡ್‌ರವರೇ, ನೀವು ಸಹಕಾರ ಕೊಡಬೇಕು. ನೀವೇ ಸಹಕಾರ ಕೊಡಬೇಕು: ಬೇಗ ಮುಗಿಸಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಕೊನೆಯದಾಗಿ ತಮ್ಮ ಇಲಾಖೆಯಲ್ಲಿರುವ ನೌಕರರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮೊದಲೆಲ್ಲಾ ಅಭಿವೃದ್ಧಿ ಕೆಲಸಗಳನ್ನು ತಾಲ್ಲೂಕು ಕಛೇರಿ ಮುಖಾಂತರ ಮಾಡುತ್ತಿದ್ದರು. ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಅಥವಾ ತಾಲ್ಲೂಕು ಪಂಚಾಯತ್ ಸಮಿತಿಗಳು, ಜಿಲ್ಲಾ ಪರಿಷತ್‌ಗಳು ಇರುವುದರಿಂದ ಅಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಸಾಲ ಕೊಡುವಂತಹದು ಮತ್ತು ಸಾಲ ವಸೂಲು ಮಾಡತಕ್ಕದ್ದೂ ನಡೆಯುತ್ತಿಲ್ಲ. ಅಲ್ಲಿರತಕ್ಕಂಥ ಸಿಬ್ಬಂದಿಯನ್ನು ಕಡಿಮೆ ಮಾಡುವುದಕ್ಕೆ ಮತ್ತು ಹಣವನ್ನು ಉಳಿಸುವುದಕ್ಕೆ ತಾವು ಪ್ರಯತ್ನ ಮಾಡಬಹುದು. ಈಚೀಗೆ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಅತಿವೃಷ್ಟಿ ಆಯಿತು. ಅಲ್ಲಿಗೆ ಮಂತ್ರಿಗಳು ಹೋಗಿ ಬಂದರು. ೫ ಕೋಟಿ ರೂಪಾಯಿ ಪರಿಹಾರ ಕೊಡಬೇಕೆಂದು ಹೇಳಿದರು. ಅತಿವೃಷ್ಟಿಯಿಂದ ಪೀಕು ಹಾಳಾದವರಿಗೆ, ಮನೆ ಕಳೆದುಕೊಂಡವರಿಗೆ ಪರಿಹಾರ ಕೊಡುತ್ತೀರಿ. ಆದರೆ ಇವತ್ತು ಈ ರಾಜ್ಯದಲ್ಲಿ ಅನಾವೃಷ್ಟಿಯಿಂದ ಬೆಳೆ ಹಾಳಾದರೆ, ಪೀಕು ಹಾಳಾದರೆ ಅದಕ್ಕೆ ಪರಿಹಾರ ಕೊಡುವ ವ್ಯವಸ್ಥೆ ಇಲ್ಲ. ಇಲ್ಲೂ ಸಹ ಸೃಷ್ಟಿ ವಿಕೋಪದಿಂದ ರೈತರು ಹಾಳಾಗುತ್ತಿದ್ದಾರೆ. ಮಳೆ ಬಾರದೇ ಅನಾವೃಷ್ಟಿಯಿಂದ ಬೆಳೆ ಹಾಳಾದರೆ ರೈತರಿಗೆ ಪರಿಹಾರ ಕೊಡುವ ಕಾನೂನನ್ನು ಜಾರಿಗೆ ತಂದು ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಹೇಳುವುದಾದರೆ, ರೈತರು ಇವತ್ತು ಸಾಲಗಾರರಾಗಿದ್ದಾರೆ. ರೈತರ ಸಾಲ ಸೂಟು ಮಾಡ

ಬೇಕೆಂದಿದ್ದೇವೆ. ಕೆಲವು ಪೇಟೆಗೆ ಸಾಲ ಸೂಟು ಮಾಡುತ್ತೇವೆಂದು ಸರಕಾರ ಹೇಳಿದೆ. ನಾನು ಹೇಳುವುದು ಏನೆಂದರೆ, ಕರಾರುರಹಿತವಾಗಿ ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಬೇಕು. ಇದಕ್ಕೆ ವ್ಯತಿರಿಕ್ತವಾಗಿ ಯಾವ ರೈತ ಸಾಲ ಕೇಳುವುದಕ್ಕೆ ಹೋಗುತ್ತಿದ್ದಾನೆ, ಅವನು ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ತನ್ನ ದಸ್ತಾವೇಜುಗಳನ್ನು ಮಾಡಿಸುವುದಕ್ಕೆ ಹೋದರೆ ಸ್ಟ್ಯಾಂಪ್‌ಡ್ಯೂಟಿ ಕೊಡಬೇಕು. ಇದು ಯಾವ ನ್ಯಾಯ ? ಒಂದು ಕಡೆ ರೈತನಿಗೆ ನ್ಯಾಯವಾದ ಬೆಲೆಯನ್ನು ಕೊಡಲಿಲ್ಲ ಎಂದು ನಾವು ಹೇಳುತ್ತಿದ್ದೇವೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ರೈತನನ್ನು ಗುಲಾಮನನ್ನಾಗಿ ಬಳಸಿಕೊಳ್ಳುತ್ತಿದ್ದೇವೆ ಸಾಲ ಕೇಳುವುದಕ್ಕೆ ಹೋದರೆ ಸ್ಟ್ಯಾಂಪ್ ಡ್ಯೂಟಿ ಕೊಡತಕ್ಕದ್ದು ಅವನಿಗೆ ಭಾರ ಅಲ್ಲವೇ ? ಆವನು ಬೆಳೆದಂಥ ಬೆಳೆಯಿಂದ ಯಾವುದೇ ಅಪ್ರತ್ಯಕ್ಷ ತೆರಿಗೆ ತೆಗೆದುಕೊಳ್ಳಿರಿ. ಆದರೆ ಸಾಲ ಬೇಡತಕ್ಕ ರೈತ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಸ್ಟ್ಯಾಂಪ್‌ಡ್ಯೂಟಿ ಕೊಡತಕ್ಕದ್ದನ್ನು ನಿಲ್ಲಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ,

ಉಪಾಧ್ಯಕ್ಷಿಣಿಯವರು.— ತಾವು ಮುಗಿಸಬೇಕು. ತಮಗೆ ೧೦ ನಿಮಿಷ ಎಂದು ಹೇಳಿತ್ತು ೧೫ ನಿಮಿಷ ತೆಗೆದುಕೊಂಡಿದ್ದೀರಿ. ತಾವು ಕುಳಿತುಕೊಳ್ಳಬೇಕು. ಶ್ರೀಯುತ ಬಿನ್ನಿಕೋಡ್‌ರವರೇ ನೀವು ಮುಂದೆ ಹೋಗಬಾರದು. ನೀವು ಮುಗಿಸುವ ಹಂತದಲ್ಲೂ ಇಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್,— ಭೂಸ್ವಾಧೀನ ಪ್ರಕರಣಗಳಲ್ಲಿ ರೈತರಿಗೆ ಹಣವನ್ನು ಕೊಟ್ಟಿಲ್ಲ. ಇವತ್ತು ಅವರು ನಿರಾಶ್ರಿತರಾಗಿದ್ದಾರೆ. ಆದ್ದರಿಂದ ಅವರಿಗೆ ಕೂಡಲೆ ಹಣ ಕೊಡಬೇಕು. ಕೊಡದೇ ಇರುವುದರಿಂದ ಸರಕಾರಕ್ಕೂ ಬಹಳಷ್ಟು ಭಾರವಾಗಿದೆ. ನೂರಾರು ಕೋಟಿ ರೂಪಾಯಿ ಬಡ್ಡಿ ಕೊಡತಕ್ಕ ಪ್ರಸಂಗ ಬಂದಿದೆ. ಇದರಿಂದ ಸರಕಾರಕ್ಕೆ ಅನ್ಯಾಯವಾಗುತ್ತಿದೆ. ಲಾಸ್ ಆಗುತ್ತಿದೆ. ಆದ್ದರಿಂದ ತೀವ್ರವಾಗಿ ರೈತರಿಗೆ ಹಣವನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ,

ಉಪಾಧ್ಯಕ್ಷಣಿಯವರು.— ತಾವು ದಯವಿಟ್ಟು ಮುಗಿಸಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್.— ಇನ್ನು ಕೊನೆಯದಾಗಿ ಹೇಳುತ್ತೇನೆ. ಇದಕ್ಕಿಂತ ನಾನು ಮುಂದುವರಿಯುವುದಿಲ್ಲ. ನನ್ನ ಸಲಹೆ ಬೇಡ ಎಂದು ಅನ್ನಿಸುತ್ತಿದೆ. ಅಪಿಲೇಟ್ ಅಥಾರಿಟಿ ಬಗೆ ಅನೇಕ ಜನ ಸ್ನೇಹಿತರು ಮಾತನಾಡಿದರು. ಇವತ್ತು ನಾವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದಲ್ಲಿ ವಿಶ್ವಾಸ ಇಟ್ಟು ಪ್ರಜಾಪ್ರಭುತ್ವದಲ್ಲಿ ಕಾಲಿಟ್ಟಿದ್ದೇವೆ. ನಾಯಾಂಗದ ವಿರುದ್ಧ ಸಮರವನ್ನು ಇಲ್ಲಿ ಹೂಡುತ್ತಿದ್ದಾರೆ. ಅಪಲೇಟ್ ಅಥಾರಿಟಿಗಳಲ್ಲಿ ನ್ಯಾಯ ಸಿಗುವುದಿಲ್ಲ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ನಾವು ಅಪಲೇಟ್ ಅಥಾರಿಟಿಯಲ್ಲಿ ವಿಶ್ವಾಸ ಇಡದೇ ಹೋದರೆ ಈ ದೇಶದಲ್ಲಿ ಇರತಕ್ಕ ನ್ಯಾಯಾಂಗದ ಬಗ್ಗೆ ನಿಮಗೆ ಸಂಪೂರ್ಣ ವಿಶ್ವಾಸ ಇಲ್ಲ ಎಂದು ಹೇಳಬೇಕಾಗುತ್ತದೆ. ದಯವಿಟ್ಟು ಅಪಲೇಟ್ ಅಥಾರಿಟಿಯನ್ನು ತೆಗೆದುಹಾಕುವುದು ಬೇಡ. ಇಲ್ಲಿ ಯಾರಾದರೂ ಭ್ರಷ್ಟ ಅಧಿಕಾರಿಗಳು ಇದ್ದರೆ ಅವರನ್ನು ಗುರುತಿಸಿ ತೆಗೆದುಹಾಕಿ. ಆದರೆ ಪುನಃ ರಾಜಕಾರಣಿಗಳ ಕೈಯಲ್ಲಿ ನ್ಯಾಯದಾನ ಕೊಡುವಹಾಗೆ ಮಾಡಿದರೆ ಈ ರಾಜ್ಯದ ರೈತರಿಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆ; ಪಕ್ಷ ರಾಜಕೀಯ ಮಾಡಿದಂತಾಗುತ್ತದೆ. ರೈತರಿಗೆ ದ್ರೋಹ ಮಾಡಿದಂತಾಗುತ್ತದೆ. ಜನರಿಗೆ ನ್ಯಾಯಾಂಗದ ಮೇಲೆ ಇರತಕ್ಕ ವಿಶ್ವಾಸ ಕಳೆದು ಹೋಗುತ್ತದೆ. ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಹಾಕಿದಹಾಗೆ ಆಗುತ್ತದೆ. ಇಷ್ಟು ಹೇಳಿ, ನನಗೆ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಮಾನಾಥ ರೈ.— ಇದುವರೆಗೆ ಅಪ್‌ಲೆಟ್ ನ್ಯಾಯ ಮಂಡಲಿಯಿಂದ ಆದ ಅನ್ಯಾಯ ಇನ್ಯಾವುದರಿಂದ ಆಗಿಲ್ಲ.

ಉಪಾಧ್ಯಕ್ಷಿಣಿಯವರು.— ಶ್ರೀ ನಜೀರ್ ಅಹಮದ್‌ನವರೇ ತಾವು ಈಗ ಮಾತನಾಡಿ.

ಶ್ರೀ ರಮಾನಾಥ ರೈ.— ಇದುವರೆಗೆ ಅಪಿಲೇಟ್ ಟ್ರಿಬ್ಯೂನಲ್‌ನಿಂದ ಯಾವುದೇ ಜನರಿಗೆ ನ್ಯಾಯ ಸಿಕ್ಕಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು.— ನಾನು ಆಗಲೇ ನಜೀರ್ ಅಹಮದ್‌ರವರನ್ನು ಮಾತನಾಡಲು ಕರೆದಾಯಿತು. ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್.— ಈ ದೇಶದಲ್ಲಿ ನೀವೆ ನ್ಯಾಯ ನಿರ್ಣಯ ಕೊಟ್ಟುಬಿಡಿ.

† SRI NAZEER AHAMED (Binnipet).— Madem I would like to draw the attention of the Hon'ble Minister to the Labour Department.

As we are all aware, in our State, we have about five to six lakhs Agarbathi workers and there are about thousand factories situated in our State.

I would like to state that these Agarbathi employees are unorganised lot and they have been all along humiliased and tortured with so many problems. For example, for one thousand stats of Agarbathies which a worker rolls, he gets Rs. 3/— only. I am told that, each worker can roll about 3000 to 4000 Agarbathies a day. When we go to slum areas in Bangalore city, we can find small children, ladies, aged persons, old women engaged in the rolling of Agarbathies and it has become a livelihood for them. I feel that the increase population in the slum areas, is due to this reason only. Today, out of the total production of Agarbathies in India, 80% is being produced in Karnataka state alone. I wish to add that other States like Maharashtra, Andhra, Pradesh, Bihar and Gujarat are getting raw Agarbathies from Karnataka and there it will be marketed. In the year 1966, the Beedi and Cigar Workers Act has come into existence. I request the Hon'ble Minister kindly to look into the matter and bring a legislation for the welfare of the Agarbathi Employees also.

Today, if we have to stop the growing population in slum in our State and more particularly in Bangalore, we have to bring some kind of legislation for the welfare of these employees. I have got some statistics with me. Today, the reputed companies like Aravinda Parimala works, Ranga Rao Cycle Brand Agarbathies, a turn-over of nearly 200 crores annually and they have adopted some system of giving the raw-materials to the sub-contractors thus depriving the benifits to the poor people who are actually involved in this activity. There is no direct access of the employees with the manufacturers. This is the reason why these employees have not been provided any facilities like E.S.I., Provident Fund or any other such facilities which the other employees will get, like the Beedi Workers.

I would now draw the attention of the Hon'ble Minister to page 34 of the Annual Report pertaining to the Labour Department, wherein it is stated that efforts are being made to recruit more and more women apprenties and candidates beloning to weaker sections and minority sections of the society. The break-up is also given here. "Number of training places locted 8009, number of training places filled up 5287. Number of S.C. Apprentices under training 498, Number of S. T. Apprentioces under training 212 and number of Apprentices belonging to minorities 15" On the one hand it is stated, "efforts are boing made to recruit more and more candidates belonging to minorities for this particular scheme".

on the other hand out of 8,000, you have recruited only 15 candidates belonging to the minorities. I do not know what kind of efforts are made. Had sincere efforts been made, I feel the number would have been much more.

I would like to submit that among S.C./S.T. and minorities, the drop-outs are more. They just go up to middle schools and S.S.L.C., and they just cannot compete with the other people and they will discontinue their studies. They work as motor mechanics or go to work in some workshops, and also they engage in engineering activities. Today in Bangalore city, we can see so many un-educated mechanics who have been identified as best Mechanics in Bangalore: They have no basic education, still they are masters in their job.

I just wanted to stress one point here. They have an aptitude towards engineering and mechanical activities. I want the Government to make a sincere effort to provide them more opportunities in training particularly in engineering and mechanical fields. The Hon. Minister would definitely take note of this particular discrepancy. Out of 8900 training places, only 15 minorities are there.

Another point is about the constitution of Selection Committee for Industrial Training Institutes. I request the Hon. Minister to provide representation to the minorities also on the Committee so that minority students may get an opportunity to take their trades. That is the study I have made. The drop-outs, particularly from the minority community, just go to some work-shop or an engineering concern. The Government should come out to give some kind of facilities and should make some kind of sincere efforts to recruit such persons and see that they get ample opportunities in the Industrial Training Institutes and in the Apprentice Training services.

With these few words I thank the Chair for having given me this opportunity to speak. Thank you.

† ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) — ಮಾನ್ಯ ಸಭಾಧ್ಯಕ್ಷರೇ, ಈ ಕಂದಾಯ ಇಲಾಖೆ ಬಗ್ಗೆ ಹೇಳುವುದಾದರೆ, ಕಂದಾಯ ಇಲಾಖೆ ಅವ್ಯವಸ್ಥೆಯ ಆಗರ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿನ ವ್ಯವಸ್ಥೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾಗಲೂ ಇದು ಕಂದಾಯ ಇಲಾಖೆಯೆಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಯಾವುದೇ ಸರ್ಕಾರ ಇರಲಿ ಇದು ತಲೆ ತಗ್ಗಿಸತಕ್ಕಂಥ ವಿಚಾರ, ಉದಾಹರಣೆಗೆ ಅಲ್ಲಿರತಕ್ಕಂಥ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ ಹಾವಳಿ ಯಾವ ಮಟ್ಟಕ್ಕೆ ಹೋಗಿರುತ್ತದೆಂದು ಸರ್ಕಾರಕ್ಕೂ ಗೊತ್ತಿರಬಹುದು. ಮೊನ್ನೆ ನಾನು ಮಾನ್ಯ ಮಂತ್ರಿಗಳಿಗೆ ಪ್ರಶ್ನೆ ಕೇಳಿದ್ದೆ. ಪಂಚಾಯಿತಿ ಕೇಂದ್ರಗಳಾಗಿರಬಹುದು ಅಥವಾ ತಾಲ್ಲೂಕು ಕೇಂದ್ರಗಳಾಗಿರಬಹುದು ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಆಫೀಸರ್‌ಗಳು ಎಷ್ಟು ಜನ ಅಲ್ಲೇ ವಾಸ ಮಾಡುತ್ತಿದ್ದಾರೆ ಎಂದು ಕೇಳಿದ್ದಕ್ಕೆ, ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ, ಅದನ್ನು ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ, ವಿಲೇಜ್ ಅಕೌಂಟೆಂಟ್‌ಗಳ ಪೋಸ್ಟ್‌ಗಳನ್ನು ರದ್ದು ಮಾಡಿ ಅಲ್ಲಿ ಮಂಡಲ ಪಂಚಾಯಿತಿಗಳಲ್ಲಿರುವ ಕಾರ್ಯದರ್ಶಿಗಳಿಗೆ ಈ ಜವಾಬ್ದಾರಿಯನ್ನು ಕೊಟ್ಟರೆ ಸರಿಹೋಗಬಹುದು. ಗ್ರಾಮೀಣ ಪ್ರದೇಶದಲ್ಲಿ ಏನಾದರೂ ಅಶಾಂತಿ

ಉಂಟಾಗಬೇಕಾದರೆ, ಹಳ್ಳಿಗಳಲ್ಲಿ ಜಮೀನುಗಳ ವಿಚಾರದಲ್ಲಿ ಜಗಳ ಬರಬೇಕಾದರೆ ಅಲ್ಲಿರತಕ್ಕ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರುಗಳೇ ಕಾರಣಕರ್ತರಾಗಿರುತ್ತಾರೆ. ಆದ್ದರಿಂದ, ವಿಲೇಜ್ ಅಕೌಂಟೆಂಟ್‌ಗಳ ಪೋಸ್ಟನ್ನು ರದ್ದು ಮಾಡಿ ಅವರ ಜವಾಬ್ದಾರಿಯನ್ನು ಮಂಡಲ ಪಂಚಾಯಿತಿಯಲ್ಲಿರುವ ಕಾರ್ಯದರ್ಶಿಗಳಿಗೆ ವಹಿಸಿಕೊಡುವುದು ಒಳ್ಳೆಯದು. ಜೊತೆಗೆ ಅಲ್ಲಿ ಅವರು ಮಾಡತಕ್ಕಂಥ ಅನ್ಯಾಯ ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಇಷ್ಟು ಕಂದಾಯವನ್ನು ವಸೂಲಿ ಮಾಡಬೇಕೆಂದು ವಿಲೇಜ್ ಅಕೌಂಟೆಂಟ್‌ಗಳಿಗೆ ಟಾರ್ಗೆಟನ್ನು ಫಿಕ್ಸ್ ಮಾಡುತ್ತಾರೆ. ಈ ಟಾರ್ಗೆಟ್‌ನ್ನು ರೀಚ್ ಮಾಡಬೇಕೆನ್ನುವ ಉದ್ದೇಶದಿಂದ ಯಾರೇ ಬಂದು ಯಾವ ಸರ್ವೆ ನಂಬರಿಗೆ ಹಣ ಕಟ್ಟಿದರೂ ರಸೀತಿಯನ್ನು ಕೊಡುತ್ತಾರೆ. ಸ್ಮಶಾನದ ಜಾಗಕ್ಕೂ ಹಣವನ್ನು ಕಟ್ಟುತ್ತೇವೆಂದರೆ ಅದಕ್ಕೂ ಹಣವನ್ನು ಕಟ್ಟಿಸಿಕೊಂಡು ಬಿಡುತ್ತಾರೆ. ಕೆರೆ ಕುಂಟೆಗಳು ಇರುವ ಜಾಗಕ್ಕೂ ಯಾರಾದರೂ ಕಂದಾಯವನ್ನು ಕಟ್ಟಿದರೆ ಅದಕ್ಕೂ ಕಟ್ಟಿಸಿಕೊಳ್ಳುತ್ತಾರೆ. ಈ ಕೆರೆ ಕುಂಟೆಗಳ ಜಾಗಕ್ಕೆ ಸಾಹುಕಾರರುಗಳು ಕಂದಾಯವನ್ನು ಕಟ್ಟಿ ತಮ್ಮದನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರುವುದನ್ನು ಕೆಲವು ಕಡೆ ನೋಡಬಹುದು. ನಮ್ಮ ಕ್ಷೇತ್ರದಲ್ಲಿ ಒಂದು ಕೆರೆ ಜಾಗಕ್ಕೆ ವಿಲೇಜ್ ಅಕೌಂಟೆಂಟ್ ಟ್ಯಾಕ್ಸ್ ತೆಗೆದುಕೊಂಡಿದ್ದಾನೆ. ಸುಮಾರು ೧೬ ಎಕರೆ ಕೆರೆ ಜಾಗಕ್ಕೆ ಟಿ. ಟಿ. ಹಾಕಿ ಟ್ಯಾಕ್ಸನ್ನು ವಸೂಲಿ ಮಾಡಿರುವುದು ಬೆಳಕಿಗೆ ಬಂದಿದೆ. ಕೆರೆ ಜಾಗಕ್ಕೆ ಟಿ. ಟಿ. ಹಾಕಿಸಿ ರೆಕಾರ್ಡ್ ಬಿಲ್ಡ್‌ಅಪ್ ಮಾಡಿ ಪಹಣಿ ಬರೆದಿರತಕ್ಕಂಥ ನಿದರ್ಶನಗಳು ಇವೆ, ಆದ್ದರಿಂದ ಈ ವಿಲೇಜ್ ಅಕೌಂಟೆಂಟ್ ಪೋಸ್ಟ್‌ಗಳನ್ನು ಮೊದಲು ರದ್ದು ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಜೊತೆಗೆ ಹಿಂದೆ ಅನೇಕ ಸರ್ಕಾರಗಳಿದ್ದಾಗ, ಬರಗಾಲ ಬಂದಾಗ ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿದಾಗ ಈ ವರ್ಷ ಕಂದಾಯ ಮನ್ನಾ ಮಾಡಲಾಗಿದೆಯೆಂದು ಪೇಪರಲ್ಲಿ ಅನೌನ್ಸ್ ಮಾಡುತ್ತಿದ್ದರು. ಆದರೆ ರಿಕಾರ್ಡ್‌ಗಳಲ್ಲಿ ಸೇಮ್ ಕಂಟಿನ್ಯೂ ಆಗುತ್ತಿರುತ್ತದೆ. ಈ ವಿಲೇಜ್ ಅಕೌಂಟೆಂಟ್‌ಗಳು ಮನ್ನಾ ಮಾಡಿದ ಕಂದಾಯವನ್ನೂ ಸಹ ವಸೂಲಿ ಮಾಡಿರುವ ಉದಾಹರಣೆಗಳು ಇವೆ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಇದನ್ನೆಲ್ಲಾ ಸರಿಪಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಜೊತೆಗೆ ನನ್ನ ಕ್ಷೇತ್ರದಲ್ಲಿ ಸುಮಾರು ಐದು ದೊಡ್ಡ ಕೆರೆಗಳು ಇವೆ. ಇವುಗಳು ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಹತ್ತಿರ ಇರುವ ಕಾರಣದಿಂದಾಗಿ, ಸೈನಾಯಿಡ್ ಮಣ್ಣಿನಿಂದಾಗಿ ಸುಮಾರು ೫-೬ ಸಾವಿರ ಎಕರೆಗಳಷ್ಟು ಜಮೀನೆಲ್ಲಾ ಕೊಚ್ಚಿಕೊಂಡು ಹೋಗಿ ಈ ಐದು ಟ್ಯಾಂಕ್‌ಗಳು ಕೂಡ ನಾಶವಾಗಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಪುನರ್‌ಪರಿಶೀಲಿಸಿ ಆ ಕೆರೆಗಳನ್ನು ಪುನರ್‌ವ್ಯವಸ್ಥೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಫ್ರಾಗ್‌ಮೆಂಟೇಶನ್ ಆಕ್ಟ್ ಪ್ರಕಾರ ತುಂಡು ಭೂಮಿಯನ್ನು ಬೇರೆಯವರಿಗೆ ಪರಬಾರೆ ಮಾಡಬಾರದು ಎಂದು ಇದೆ. ಈ ಕಾನೂನು ಇರುವುದರಿಂದ ಎಲ್ಲ ಅಡ್ಜಸ್ಟ್‌ಮೆಂಟ್ ನಡೆದು ಅವ್ಯವಹಾರಗಳು ನಡೆಯುತ್ತಾ ಇವೆ. ಇಂಥ ಸಮಯದಲ್ಲಿ ತಹಶೀಲ್ದಾರರನ್ನು ಅಸಿಸ್ಟೆಂಟ್ ಕಮಿಷನರನ್ನು ಕೇಳಿ ಮಾಡಬೇಕೆಂದು ಕಾನೂನು ಇದ್ದರೂ ಕೂಡ ಅದನ್ನು ಬಿಟ್ಟು ತುಂಡು ಭೂಮಿಯನ್ನು ದೊಡ್ಡ ಭೂಮಿ ಎಂದು ರಿಕಾರ್ಡ್‌ನಲ್ಲಿ ತೋರಿಸಿ ಆ ಭೂಮಿಯನ್ನು ರಿಜಿಸ್ಟ್ರೇಶನ್ ಮಾಡುತ್ತಿದ್ದಾರೆ. ಇದರಿಂದಾಗಿ ಸರಕಾರಕ್ಕೆ ಬರುವ ಟ್ಯಾಕ್ಸ್ ಕೂಡ ಸೋರಿ ಹೋಗುತ್ತಿದೆ. ಆದ್ದರಿಂದ ತುಂಡು ಭೂಮಿ ನಿಷೇಧ ಕಾಯಿದೆಯನ್ನು ರದ್ದು ಮಾಡಿ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಹರಿಜನರು–ಗಿರಿಜನರು ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳವರಿಗೆ ಗ್ರ್ಯಾಂಟ್ ಕೊಡಬೇಕೆಂದು ಆಶೆ ಇತ್ತು. ಆದರೆ ಈಗ ಆ ಭೂಮಿಯೆಲ್ಲ ದೊಡ್ಡ ದೊಡ್ಡ ಜಮೀನ್ದಾರರುಗಳ ಗುತ್ತಿಗೆಯಾಗುತ್ತಿದೆ, ಯಾರ ಹತ್ತಿರ ದುಡ್ಡು ಇದೆಯೋ ಅವರಿಗೆ ಬರೀ ಸರ್ಟಿಫಿಕೇಟ್ ಸಿಗುತ್ತಿದೆ. ಆ ದೃಷ್ಟಿಯಿಂದ ಇದನ್ನೆಲ್ಲಾ ಪರಿಶೀಲನೆ ಮಾಡಿ ಬಡವರಿಗೆ ಜಮೀನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ.

೧.೩೦ ಪಿ.ಎಂ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).–ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಆಡಳಿತದಲ್ಲಿ ಈಗ ಅಪಾರ ಅನುಭವವುಳ್ಳ ಮತ್ತು ಹಿರಿಯರೂ ಆಗಿರುವ ಮಾನ್ಯ ಶ್ರೀ ಕೆ.ಹೆಚ್. ಪಾಟೀಲ್‌ರವರು ಈಗ ಕಂದಾಯ ಇಲಾಖೆಯನ್ನು ವಹಿಸಿಕೊಂಡಿದ್ದಾರೆ, ಇಂಥ ಸಂದರ್ಭದಲ್ಲಿ ಆ ಇಲಾಖೆಗೆ ಒಂದು ಹೊಸ ಸ್ವರೂಪವನ್ನು ಕೊಡಬೇಕೆಂದು ನಾನು ಅವರಲ್ಲಿ ಪ್ರಥಮತಃ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಂದಾಯ ಇಲಾಖೆ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಇರತಕ್ಕಂಥ ಒಂದು ಇಲಾಖೆಯಾಗಿದೆ. ಬರೇ ಕಂದಾಯ

ಬಾಕಿ ವಸೂಲಾತಿ ಮಾಡುವುದು ಅಥವಾ ರಿಯಾಯಿತಿಯನ್ನು ಕೊಡುವುದು, ಹಕ್ಕುಪತ್ರಗಳನ್ನು ಕೊಡುವಂಥಾದ್ದು ಇವೇ ಮೊದಲಾದ ಕೆಲಸಗಳನ್ನು ಬಿಟ್ಟು ರೈತರಿಗೆ ಅನುಕೂಲಕರವಾದಂಥ ಮತ್ತು ಅವರ ಅಭಿವೃದ್ಧಿಯ ಕುರಿತು ಚಿಂತನೆ ಮಾಡತಕ್ಕಂಥ ಒಂದು ಪ್ರಗತಿಶೀಲ ಸ್ವರೂಪವನ್ನು ಕೊಡತಕ್ಕಂಥ ಇಲಾಖೆಯನ್ನಾಗಿ ಇದನ್ನು ಮಾರ್ಪಾಡು ಮಾಡಬೇಕೆಂದು ನನ್ನ ವಿಜ್ಞಾಪನೆ. ಎರಡನೆಯದಾಗಿ, ಅಧಿಕಾರಿ ವರ್ಗದ ವಿಚಾರವಾಗಿ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಭ್ರಷ್ಟಾಚಾರ ಮತ್ತಿತರ ವಿಚಾರಗಳಲ್ಲಿ ಮಾತನಾಡಿದ ಸದಸ್ಯರುಗಳು ಅದನ್ನು ನಿರ್ಮೂಲನೆ ಮಾಡುವತ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಆ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲೇಬೇಕು ಎಂಬುದನ್ನು ಮಾನ್ಯ ಸಚಿವರು ಒಪ್ಪುತ್ತಾರೆ ಎಂದು ನಾನು ನಂಬಿದ್ದೇನೆ. ನಾನು ನೇರವಾಗಿ ಕೆಲವು ಅಂಶಗಳಿಗೆ ಮಾತ್ರ ಸೀಮಿತವಾಗಿ ಮಾತನಾಡುವುದಾದರೆ ಒಂದು ಆಕ್ರಮಣದ ಸಕ್ರಮೀಕರಣ ಒಳಸೇ ಭೂಕಂದಾಯ ಅಧಿನಿಯಮಕ್ಕೆ ತಿದ್ದುಪಡಿ—ಇದು ಮುಖ್ಯವಾದುದು. ಕಳೆದ ವರ್ಷ ನಮ್ಮ ಸದನದ ಮುಂದೆ ಇದು ಬಂತು, ಬಂದರೂ ಕೂಡ ಅದು ಹೆಚ್ಚಿಗೆ ಪ್ಲಾಂಟೇಶನ್‌ನವರಿಗೆ ಅನುಕೂಲ ಮಾಡಿಕೊಡುವಂಥ ಅಂಶಗಳನ್ನು ಒಳಗೊಂಡಿತ್ತು. ಈಗಾಗಲೇ ಮಾನ್ಯ ಪ್ರೊ: ನಂಜುಂಡಸ್ವಾಮಿಯವರು ಹೇಳಿದ ಹಾಗೆ, ಯಾರು ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದಾರೆ ಮತ್ತು ಅನೇಕ ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದಾರೆ, ಅದನ್ನು ಸಕ್ರಮಗೊಳಿಸಬೇಕು. ನ್ಯಾಯವಾಗಿ ಯಾರು ದಾಖಲೆ ಹೊಂದಿದ್ದಾರೆ ಅವರಿಗಂತೂ ಇದರ ಲಾಭ ಸಿಗುವುದರ ಜೊತೆಗೆ ಕೆಲವರು ಬಡವರು ಯಾರಿಗೆ ಈ ಕುರಿತು ಅರ್ಜಿಯನ್ನು ಕೊಡಬೇಕೆಂಬ ಬಗ್ಗೆ ಕೂಡ ಗೊತ್ತಿಲ್ಲ ಅಂಥವರಿಗೆ ಅನ್ಯಾಯವಾಗ ಕೂಡದು. ಹಿಂದೆ ಅನೇಕ ಮಂತ್ರಿಗಳು ಬಂದರು. ಒಮ್ಮೆ ಕಡತ ವಿಲೇವಾರಿ ಪ್ರಕರಣ ಒಂದು ನಡೆಯಿತು. ಇದನ್ನು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಜರುಗಿಸಿದಾಗ ಅಲ್ಲಿ ಇದ್ದ ಇಂಥ ಅರ್ಜಿಗಳನ್ನು ಕೂಡ ತೆಗೆದು ಹಾಕಿದ್ದರು. ಕಡತ ವಿಲೇವಾರಿ ಅಂದರೆ ಅರ್ಜಿಯನ್ನೇ ಇಲ್ಲ ಎಂದು ಮಾಡುವುದು ಅಥವಾ ಭೂಮಿ ಇಲ್ಲ ಎಂದು ಮಾಡುವುದು. ಹೀಗೆ ಮಾಡಿದ್ದರಿಂದ ಬಹಳಷ್ಟು ಜನರಿಗೆ ಅನ್ಯಾಯವಾಯಿತು. ಅವರು ಭೂಮಿಯನ್ನು ಸ್ವಾಧೀನ ಮಾಡಿಕೊಂಡಿದ್ದಾರೆ, ಕೆಲವರು ಮನೆಕಟ್ಟಿಕೊಂಡಿದ್ದಾರೆ. ತೆಂಗು-ಕಂಗುಗಳನ್ನು ನೆಟ್ಟು ಫಲ ಬರುವಂತಾಗಿದೆ. ಬಾವಿ ತೋಡಿಸಿದ್ದಾರೆ, ಹಲವಾರು ವರ್ಷಗಳಿಂದ ತಮ್ಮ ಬದುಕನ್ನು ಅಲ್ಲಿಯೇ ಮಾಡಿಕೊಂಡಿದ್ದಾರೆ. ಅಂಥವರಿಗೆ ಇದರಲ್ಲಿ ಅನ್ಯಾಯವಾಗಬಾರದು. ಅಂಥವರಿಗೆ ಭೂಮಿಯ ಹಕ್ಕುಪತ್ರಗಳನ್ನು ಕೊಡುವಂಥ ಒಂದು ಕಾನೂನು ವ್ಯವಸ್ಥೆಯಾಗಬೇಕು. ಈ ಬಗ್ಗೆ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಎಂದು ಇದೆ. ಕುಮ್ಕಿ ಹಕ್ಕು ಎಂದರೆ ಹಿಂದೆ ಬ್ರಿಟಿಷರ ಕಾಲದಲ್ಲಿ ಅವರು ಸ್ವಾಧೀನ ಮಾಡಿಕೊಂಡು ತೀರ್ವೆ ಇಲ್ಲದೆ ಅನುಭವಿಸಿಕೊಂಡು ಹೋಗುವಂಥ ಒಂದು ಹಕ್ಕು. ಅದಕ್ಕೂ ಕೂಡ ಹಿಂದೆ ಒಂದು ಕಾಲದಲ್ಲಿ ಕುಮ್ಕಿ ಹಕ್ಕು ಇಲ್ಲ, ಅಥವಾ ದರ್ಖಾಸ್ತು ಕ್ರಮ ಕೂಡ ಇಲ್ಲ ಎಂದು ಮಾಡಿದರು. ಅದು ಕೂಡ ಒಂದು ರೀತಿಯ ಅನ್ಯಾಯ ಮಾಡಿದಂತೆ ಆಗಿದೆ. ಆದುದರಿಂದ ಅದನ್ನೂ ಸೇರಿಸಿ ಹಕ್ಕು ಪತ್ರಗಳನ್ನು ಕೊಡುವಂಥ ಒಂದು ಕಾನೂನು ವ್ಯವಸ್ಥೆ ಆಗಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಈಗ ತಂದಂಥ ತಿದ್ದುಪಡಿಯಲ್ಲಿ ಅರಣ್ಯ ಇಲಾಖೆಯವರನ್ನು ಕೇಳಿ ಈ ಹಕ್ಕು ಪತ್ರಗಳನ್ನು ಕೊಡಬೇಕೆಂದು ಇದೆ. ಇದರಲ್ಲಿಯೂ ಒಂದು ಅನ್ಯಾಯವಾಗುತ್ತದೆ. ಅರಣ್ಯ ಇಲಾಖೆಯವರಿಗೆ ಸಿ ಮತ್ತು ಡಿ ಭೂಮಿಯನ್ನು ಟ್ರಾನ್ಸ್‌ಫರ್ ಮಾಡುವ ಮೊದಲು ಅನೇಕ ಆಕ್ರಮಣಗಳು ಆಗಿವೆ. ಇಂಥ ಭೂಮಿಯು ಅನೇಕ ರೈತರ ಹತ್ತಿರ ಇದೆ. ಅವರನ್ನು ಕೇಳುವ ಬದಲು ಅರಣ್ಯ ಇಲಾಖೆಗೆ ಯಾವ ಭೂಮಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಆಕ್ರಮಣವನ್ನು ವಿರಹಿತ ಪಡಿಸಿ ಎಂದು ಆ ಆರ್ಡರ್‌ನಲ್ಲೇ ತಿದ್ದುಪಡಿ ಮಾಡಿದರೆ ಸಮಂಜಸವಾಗುತ್ತದೆ. ಅದರ ಪ್ರಕಾರ ಕಾನೂನು ತರುವಾಗ ಗ್ರಾಮಸಭೆಗಳನ್ನು ಏರ್ಪಡಿಸಿ, ಸಾರ್ವಜನಿಕವಾಗಿ ತನಿಖೆ ಮಾಡಿ, ಅಸಿಸ್ಟೆಂಟ್ ಕಮಿಷನರ್ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಗಳನ್ನು ಇಟ್ಟುಕೊಂಡು ಸಾಮೂಹಿಕವಾದ ಒಂದು ಚಿಂತನೆಯನ್ನು ಮಾಡಿ ಸಂಬಂಧಪಟ್ಟವರಿಗೆ ಭೂಮಿಯನ್ನು ಕೊಡಬೇಕೆಂದು ನನ್ನ ವಿಜ್ಞಾಪನೆ.

ಇನ್ನು ಮೇಲ್ಮನವಿ ಪ್ರಾಧಿಕಾರವನ್ನು ರದ್ದು ಮಾಡಿದ್ದು ಬಹಳ ಒಳ್ಳೆಯ ಕೆಲಸವಾಗಿದೆ. ಈ ಬಗ್ಗೆ ನಮ್ಮಲ್ಲಿ ಅನೇಕ ಜನರು ಹೇಳಿದರು. ವಕೀಲರುಗಳ ಸಂಘದ ವತಿಯಿಂದ ಅದನ್ನು ರದ್ದು ಮಾಡಬಾರದು ಎಂದು ಮನವಿ ಬರುತ್ತಿದೆ. ಈ ಕುರಿತು ನಮ್ಮ ತಾಲ್ಲೂಕಿನ ಒಂದು ಉದಾಹರಣೆಯನ್ನು ಕೊಡುತ್ತೇನೆ. ಎರಡು ಸಲ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಭೂಮಿಯ ಹಕ್ಕನ್ನು ಕೊಟ್ಟರು, ಧನಿ ಕೂಡ ಒಪ್ಪಿಗೆ ಕೊಟ್ಟ ಭೂಮಿ ಅವನ ಹತ್ತಿರ ಇದೆ. ಆದರೆ ಎಕ್ಸ್‌ಟೆಂಟ್‌ನಲ್ಲಿ ಮಾತ್ರ ವ್ಯತ್ಯಾಸ ಇದೆ ಎಂದು ಧನಿ ಹೇಳಿ ಕೊಟ್ಟ. ಆದರೆ ಮೇಲ್ಮನವಿ ಪ್ರಾಧಿಕಾರದವರು ಎಕ್ಸ್‌ಟೆಂಟ್‌ನಲ್ಲಿ ಮಾತ್ರ ವ್ಯತ್ಯಾಸ ಇದೆ ಎನ್ನುವುದನ್ನು ಮರೆತು ಬಿಟ್ಟು, ಆ ಭೂಮಿ ಅವನ ಹತ್ತಿರ ಇದೆ ಎನ್ನುವುದಕ್ಕೆ

ಯಾವುದೇ ದಾಖಲೆಗಳು ಇಲ್ಲದ ಕಾರಣ ಅದರಲ್ಲಿ ಒಂದು ಪ್ರೋರ್ಷನ್ ಇದೆಯೆಂದು ಧನಿ ಒಪ್ಪಿದ್ದರೂ ಕೂಡ ಅದನ್ನು ವಿರಹಿತಪಡಿಸಿ ಮೇಲ್ಮನವಿ ಪ್ರಾಧಿಕಾರದವರು ಭೂಮಿಯ ಹಕ್ಕನ್ನು ಧನಿಗೇ ಕೊಟ್ಟಿದ್ದಾರೆ. ಇಂಥ ಅನ್ಯಾಯವಾಗುವುದಾದರೆ ಆ ಮೇಲ್ಮನವಿ ಪ್ರಾಧಿಕಾರ ಇರಬಾರದು. ಆದುದರಿಂದ ಅದನ್ನು ಸರ್ಕಾರದವರು ರದ್ದು ಪಡಿಸಿದ್ದು ಉತ್ತಮವಾಗಿದೆ. ಆದರೂ ಕೂಡ ಕೆಲವು ಕಡೆ ಈ ಕೆಲಸ ಆಗುತ್ತಾ ಇದೆ. ಆದುದರಿಂದ ಮಾನ್ಯ ಸಚಿವರ ಹತ್ತಿರ ನನ್ನ ಅರಿಕೆ ಏನೆಂದರೆ ನಮ್ಮ ರಾಜ್ಯದಲ್ಲಿ ಆ ಕೆಲಸ ನಡೆಯುತ್ತಾ ಇದೆ ಎಂದು ಕೇಳಿದ್ದೇನೆ. ಆದ್ದರಿಂದ ಆ ಕೆಲಸ ಆಗದಿದ್ದ ಹಾಗೆ ಕೂಡಲೇ ತಡೆಯಾಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಭೂ ಸ್ವಾಧೀನ ಕಾಯಿದೆಯಲ್ಲಿ ರಸ್ತೆ, ರೈಲು ಮಾರ್ಗ ಶಾಲೆಗಳ ಕಟ್ಟಡ, ಉದ್ಯಮಗಳು ಮುಂತಾದವುಗಳಿಗಾಗಿ ಈಗ ಇರುವ ಪ್ರೊಸೀಜರ್ ತುಂಬಾ ಲೆಬೋರಿಯಲ್ ಆಗಿದೆ. ಆದುದರಿಂದ ಶೀಘ್ರವಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅಗತ್ಯವಿರುವವರಿಗೆ ಭೂಮಿಯನ್ನು ಕೊಡಿಸುವಂಥ ಒಂದು ವ್ಯವಸ್ಥೆಯಾಗಬೇಕು. ಆಮೇಲೆ ೯೬ ಗೃಹ ನಿರ್ಮಾಣ ಸಹಕಾರಿ ಸಂಘಗಳ ೧೨೮ ಯೋಜನೆಗಳಿಗೆ ಭೂಸ್ವಾಧೀನಕ್ಕೆ ಒಂದು ತ್ರಿಸದಸ್ಯ ಸಮಿತಿ ಬೆಂಗಳೂರಿನಲ್ಲಿ ಆಗಿದೆ. ನಾನು ಕೂಡ ಸಹಕಾರಿ ರಂಗದಲ್ಲಿ ಕೆಲಸ ಮಾಡುತ್ತಿರುವವನಾಗಿರುವುದರಿಂದ ಈ ಮಾತನ್ನು ತಮಗೆ ಹೇಳ ಬಯಸುತ್ತೇನೆ. ಹೌಸಿಂಗ್ ಸಮಸ್ಯೆ ಎನ್ನುವಂಥದ್ದು ಬಹಳ ದೊಡ್ಡ ಸಮಸ್ಯೆ. ಆದರಲ್ಲಿ ಅನ್ಯಾಯ ಅಥವಾ ದೋಷಗಳು ಇರುವ ಸಹಕಾರಿ ಸಂಘಗಳನ್ನು ವಿರಹಿತ ಪಡಿಸಿ, ಎಲ್ಲಿ ನ್ಯಾಯವಾಗಿ ಇವರಿಗೆ ಭೂಮಿಯನ್ನು ಕೊಡತಕ್ಕಂಥಾದ್ದು ಇದೆ, ಅದನ್ನು ವಿಳಂಬವಿಲ್ಲದೆ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ, ಸ್ಟ್ಯಾಂಪ್ ಡ್ಯೂಟಿ ವಿಚಾರದಲ್ಲಿ ಮಾನ್ಯ ಸಚಿವರಲ್ಲಿ ನನ್ನ ಒಂದು ಅರಿಕೆ ಇದೆ. ಹೌಸಿಂಗ್ ಸೊಸೈಟಿಗಳಿಂದ ಸಾಲವನ್ನು ಪಡೆದುಕೊಳ್ಳುವಾಗ ಭೂಮಿಯನ್ನು ಅಡಮಾನ ಮಾಡಬೇಕಾಗುತ್ತದೆ. ಈಗಿನ ಪದ್ಧತಿ ಪ್ರಕಾರ ಒಂದು ಲಕ್ಷ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳಬೇಕಾದರೆ ೧೦ ಪರ್ಸೆಂಟ್ ಅಂದರೆ ಸಾಧಾರಣ ೧೦ ಸಾವಿರ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗುತ್ತದೆ. ಹಿಂದೆ ಇದಕ್ಕೆ ವಿನಾಯಿತಿ ಇತ್ತು. ಈಗ ಈ ವಿನಾಯಿತಿಯನ್ನು ಪುನಃ ತರಬೇಕು. ಹಾಗೆ ಮಾಡಿದರೆ ಯಾರು ಭೂಮಿಯನ್ನು ಅಡಮಾನವಾಗಿ ಸಾಲ ಪಡೆಯುತ್ತಾರೆ ಅವರಿಗೆ ಅನುಕೂಲವಾಗುತ್ತದೆ. ಪಿಎಲ್‌ಡಿ ಬ್ಯಾಂಕಿನವರಿಗೂ ಈ ರೀತಿಯಾದಂಥ ಏನು ಲಿಮಿಟ್ ಇದೆ ಅದೂ ಕೂಡ ಈ ತಿಂಗಳ ಅಂತ್ಯದಲ್ಲಿ ಪುನರ್‌ವಿಮರ್ಶೆಯಾಗಬೇಕು, ಅದನ್ನು ಕೂಡ ಮಾನ್ಯ ಸಚಿವರು ಪರಿಶೀಲಿಸಬೇಕು. ಮಾನ್ಯ ಸಚಿವರು ಸಹಕಾರಿ ಕ್ಷೇತ್ರದಲ್ಲಿ ಬಹಳಷ್ಟು ಅನುಭವ ಪಡೆದವರಾದುದರಿಂದ ಸಹಕಾರಿ ಸಂಸ್ಥೆಗಳ ಮೂಲಕ ಸಾಲ ಕೊಡುವ ಬಗ್ಗೆ ಒಂದು ಅನುಕೂಲಕರ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿಕೊಳ್ಳುತ್ತೇನೆ.

ಇನ್ನು ಕಾರ್ಮಿಕ ನ್ಯಾಯಾಧೀಕರಣದಲ್ಲಿ ಸುಮಾರು ೧೧,[illegible] ವಿವಾದಗಳು ಇವೆ ಎಂದು ಹೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಸಹಕಾರಿ ಸ್ಪರ್ಶವನ್ನು ನೀಡಿ, ಆ ವಿವಾದಗಳನ್ನು ಬಗೆಹರಿಸಬೇಕು. ಈ ನ್ಯಾಯಾಧೀಕರಣಗಳ ಮುಂದೆ ಅನೇಕ ವರ್ಷಗಳಿಂದ ವ್ಯಾಜ್ಯಗಳು ಇರುವಂಥದ್ದಲ್ಲ. ಆ ವ್ಯಾಜ್ಯಗಳನ್ನು ಕೂಡಲೆ ಬಗೆಹರಿಸಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಕಾರ್ಮಿಕರು ಹೋಟೇಲ್ ಕಾರ್ಮಿಕರು. ಅವರು ಹೋಟೆಲ್‌ಗಳಲ್ಲಿ ದುಡಿಯುತ್ತಿದ್ದರೂ ಅವರಿಗೆ ಸಿಗುವ ಸಂಬಳವು ಬಹಳ ಕಡಿಮೆ. ಕೆಲವರು ರಾತ್ರಿ ಹೊತ್ತು ಬೀದಿ ಬದಿಯಲ್ಲಿ ಸಣ್ಣಪುಟ್ಟ ಸಂಚಾರಿ ಹೋಟಲ್‌ನ್ನು ತೆಗೆದು ತಿಂಡಿ ತಿನಿಸುಗಳನ್ನು ಮಾಡಿ ಮಾರುತ್ತಾರೆ. ವಿಶೇಷತಃ ಬೆಂಗಳೂರಿನಲ್ಲಿ ಎರಡು ನಮೂನೆಯ ವ್ಯವಸ್ಥೆ ಇದೆ. ರಾತ್ರಿ ಹೊತ್ತು ಏನಾದರೂ ಕಾಫಿ/ತಿಂಡಿ ಬೇಕಾದಲ್ಲಿ ಒಂದೋ ಫೈವ್‌ಸ್ಟಾರ್ ಹೋಟೆಲ್‌ಗಳಿಗೆ ಹೋಗಬೇಕು, ಇಲ್ಲವೆ ಬೀದಿ ಬದಿಯ ಅಂಗಡಿಗಳಿಗೆ ಹೋಗಬೇಕು ಈ ಬೀದಿ ಬದಿಯ ಅಂಗಡಿಗಳಿಗೆ ಅನೇಕರು ಕಾರು ಇಟ್ಟುಕೊಂಡವರೂ ಕೂಡ ಹೋಗಿ ತಿಂಡಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಒಂದು ಕ್ರಮವನ್ನು ರೂಪಿಸಿ ಆ ಕಾರ್ಮಿಕರಿಗೆ ನೆರವಾಗುವಂಥ ವ್ಯವಸ್ಥೆಯನ್ನು ಮಾನ್ಯ ಸಚಿವರು ತಮ್ಮ ಕಾಲದಲ್ಲಿಯಾದರೂ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಸಭಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.— ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

(ಗೊಂದಲ)

ಶ್ರೀ ರಘುನಾಥ್ ರೈ:— ಮಾನ್ಯ ಉಪಾಧ್ಯಕ್ಷರೇ.........

(ಗೊಂದಲ)

ಉಪಾಧ್ಯಕ್ಷರು:—ಈಗ ಎಲ್ಲು ಗಂಟೆ ಹೊತ್ತು ಈ ಬೇಡಿಕೆ ಮೇಲೆ ಚರ್ಚೆಯಾಗಿದೆ. ಮಂತ್ರಿಗಳು ಉತ್ತರವನ್ನು ಒಂದು ಗಂಟೆಗೆ ಪ್ರಾರಂಭಮಾಡಬೇಕಾಗಿತ್ತು. ಇನ್ನು ಅರ್ಧ ಗಂಟೆ ಜಾಸ್ತಿ ಚರ್ಚೆ ಮಾಡಿದ್ದೀರಿ. ನಿಮಗೆ ಬೇರೆ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆ. ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ತಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ.........

(ಗೊಂದಲ)

ಶ್ರೀ ಬಿ. ಎಂ. ಇದಿನಬ್ಬ:—ನಮ್ಮಲ್ಲಿ ಗೇಣಿದಾರರಿಗೆ ಅನ್ಯಾಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ತೊಂದರೆಗಳಾಗಿವೆ. ಅದಕ್ಕಾಗಿ ದಯವಿಟ್ಟು ನನಗೆ ಹೇಳುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಉಪಾಧ್ಯಕ್ಷರೇ.........

(ಗೊಂದಲ)

ಉಪಾಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ. ಈಗ ಮಂತ್ರಿಗಳು ಉತ್ತರವನ್ನು ಪ್ರಾರಂಭಿಸುತ್ತಾರೆ. ತಾವು ಕುಳಿತುಕೊಳ್ಳಬೇಕು, ಐದು ನಿಮಿಷ ಎಂದು ಮಾನ್ಯ ಆಚಾರ್‌ರವರಿಗೆ ಅವಕಾಶ ಕೊಟ್ಟಿದ್ದಕ್ಕೆ ೧೫ ನಿಮಿಷ ತೆಗೆದುಕೊಂಡಿದಾರೆ.

(ಗೊಂದಲ)

## ಮಾನ್ಯ ಕಂದಾಯ ಮಂತ್ರಿಗಳಿಂದ ಉತ್ತರ

†ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).— ಮಾನ ಉಪಾಧ್ಯಕ್ಷರೇ, ನಿನ್ನೆ ಮತ್ತು ಇಂದು ಸಾಕಷ್ಟು ಜನ ನನ್ನ ಖಾತೆಗಳ ಮೇಲೆ ಮಾತನಾಡಿದ್ದಾರೆ. ಶ್ರೀಮಾನ್ ಸಿಂಧ್ಯಾರವರಿಂದ ಪ್ರಾರಂಭವಾದಂಥ ಚರ್ಚೆ ಶ್ರೀಮಾನ್ ಆಚಾರ್‌ರವರಿಂದ ಮುಗಿದಿದೆ. ಇನ್ನು ಅನೇಕ ಜನ ಮಾನನೀಯ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿವರಣೆಯನ್ನು ಮತ್ತು ನನಗೆ ಬೇಕಾಗುವಂಥ ಸಲಹೆಗಳನ್ನು ಕೊಡಬೇಕು ಎಂದು ಅಭಿಲಾಷೆ ಉಳ್ಳವರು ಇದ್ದರೂ ಸಹಾ ಸಮಯದ ಅಭಾವದಿಂದ ಆಗಲಿಲ್ಲ. ಅವರು ನನ್ನ ಉತ್ತರವಾದ ಮೇಲೆ ಕ್ಲಾರಿಫಿಕೇಷನ್‌ನಲ್ಲಿ ಸಾಕಷ್ಟು ಸಮಯವನ್ನು ತೆಗೆದುಕೊಳ್ಳಬಹುದು ಎನ್ನುವ ಮಾತನ್ನು ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಅನೇಕ ಸದಸ್ಯರ ಮನಸ್ಸಿನಲ್ಲಿರತಕ್ಕಂಥ ವಿಚಾರಗಳು ಇಂದು ವ್ಯಕ್ತವಾಗದಿದ್ದರೂ ಸಹಾ ನನ್ನ ಖಾತೆಗೆ ಸಂಬಂದಪಟ್ಟ ವಿಚಾರಗಳನ್ನು ಅವರು ಹೇಳದಿದ್ದರೂ ಸಹ ನಾನು ನನ್ನ ಭಾಷಣದಲ್ಲಿ ಹೇಳುತ್ತೇನೆ. ಆ ನಂತರ ಅವರು ಅದಕ್ಕೆ ಸೂಕ್ತ ವಿವರಣೆಗಳನ್ನು ಕೇಳಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮೊಟ್ಟ ಮೊದಲನೆಯದಾಗಿ, ನಾನು ಲೇಬರ್ ವಿಷಯವಾಗಿ ಮಾತನಾಡುತ್ತೇನೆ. ಕಾರ್ಮಿಕ ಖಾತೆ ಬಹಳ ಪ್ರಾಮುಖ್ಯವಾದ ಖಾತೆ. ಈ ಕಾರ್ಮಿಕ ವಿಭಾಗ ನನ್ನ ಕೈಗೆ ಸಿಕ್ಕಿದ್ದು ನನ್ನ ಸೌಭಾಗ್ಯ ಎಂದು ನಾನು ತಿಳಿಯುತ್ತೇನೆ ಏಕೆಂದರೆ, ಕಾರ್ಮಿಕರು ನಿಜವಾಗಿಯೂ ಕರ್ಮಯೋಗಿಗಳು ಅವರು ಕಾರ್ಯನ್ನು ಮಾಡಿ ತಮ್ಮ ಕಾರ್ಯದ ಫಲದ ಅನುಗುಣವಾಗಿ ತಮ್ಮ ಜೀವನವನ್ನು ಸಾಗಿಸುವಂಥ ಪವಿತ್ರವಾದ ಜೀವಿಗಳು ಕಾರ್ಮಿಕರು. ಅವರ ಸೇವೆಯನ್ನು ಕಿಂಚಿತ್ತಾದರೂ ಮಾಡುವಂಥ ಅವಕಾಶ ಸಿಕ್ಕಿದ್ದು ನನಗೆ ಸಮಾಧಾನವಾಗಿದೆ. ಈ ಎರಡು ದಿವಸಗಳ ಚರ್ಚೆಯಲ್ಲಿ ಅನೇಕ ನನ್ನ ಸ್ನೇಹಿತರು ಕಾರ್ಮಿಕರ ವಿಭಾಗವನ್ನು ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವ ಕಡೆಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಸರ್ಕಾರದವರು ನಜರನ್ನು ಸೆಳೆದಿದ್ದಾರೆ. ಸರ್ಕಾರದವರು ಕೇವಲ ಲಾಕೌಟ್ ಹಾಗೂ ಸ್ಟ್ರೈಕ್‌ಗಳ ಬಗ್ಗೆ ಮಾತ್ರ ಕಾನೂನನ್ನು ಇಟ್ಟುಕೊಂಡು ಆ ಕಾನೂನಿನ ಕ್ರಮವನ್ನು ಅನುಸರಿಸಿ ಕೆಲಸ ಮಾಡಿದರೆ ತೀರದು. ಇವತ್ತು ಕಾರ್ಮಿಕರು ಹಾಗೂ ಉದ್ದಿಮೆದಾರರು ಇಬ್ಬರನ್ನು ಒಂದುಗೂಡಿಸಿಕೊಂಡು ದೇಶ ಪ್ರಗತಿ ಯಾಗಬೇಕು, ಪ್ರೊಡಕ್ಷನ್ ಹೆಚ್ಚಾಗಬೇಕು, ಅದರ ಬಹುಲಾಭ ಕಾರ್ಮಿಕರಿಗೆ ಸಿಗಬೇಕು, ಅತ್ಯಲ್ಪ ಲಾಭ

ಇಂಡಸ್ಟ್ರಿಯಲಿಸ್ಟ್‌ಗೆ ಹೋಗಬೇಕು ಎನ್ನತಕ್ಕಂಥ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕೆಲಸವನ್ನು ಮಾಡಬೇಕು.

ಇಂದು ಕಾರ್ಮಿಕ ವಿಭಾಗದ ಎಲ್ಲ ಅಧಿಕಾರಿಗಳೂ ಸಹ, ಎರಡು ದಿವಸಗಳ ಕಾಲ ನಮ್ಮ ಮಾನನೀಯ ಸದಸ್ಯರುಗಳು ಮಾಡಿದಂತಹ ಭಾಷಣವನ್ನು, ವಿಚಾರಗಳನ್ನೂ ಅರಿತಿದ್ದಾರೆ. ಅವರ ವಿಚಾರ ಸರಣಿಯಲ್ಲಿ ನಾವು ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವುದು ನನ್ನ ಅಧಿಕಾರಿಗಳಿಗೆ ಮನದಟ್ಟು ಆಗಿದೆ ಎಂದು ನಾನು ಭಾವನೆ ಮಾಡುತ್ತೇನೆ. ಇವೊತ್ತು ದೇಶದಲ್ಲಿ ಕಾರ್ಮಿಕ ವರ್ಗದವರ ಬಗ್ಗೆ ಎಲ್ಲರೂ ಮಾತನಾಡಿದರೂ ಸಹ ಅವರಿಗೆ ಇನ್ನೂ ನಿಜವಾದ ನ್ಯಾಯ ಸಿಗುತ್ತಿಲ್ಲ. ಇದಕ್ಕೆ ಕಾರಣ ಏನು ಎನ್ನುವುದನ್ನು ಹುಡುಕುವುದೇ ನಮ್ಮ ಮುಖ್ಯವಾದ ಕರ್ತವ್ಯವಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ, ಎಲ್ಲಿಯವರೆಗೆ ನಾನು ಕಾರ್ಮಿಕ ಮಂತ್ರಿಯಾಗಿ ಇರುತ್ತೇನೋ ಅಲ್ಲಿಯವರೆಗೆ ಸರ್ಕಾರದ ಧೋರಣೆ, ಸರ್ಕಾರದ ವಿವರಣೆ ಯಾವಾಗಲೂ ಶೇಕಡ ೧೦೦ಕ್ಕೆ ೫೧ರಷ್ಟು ಕಾರ್ಮಿಕರ ಸೈಡ್ ಇರುತ್ತದೆ ೪೯ ಭಾಗ ಇಂಡಸ್ಟ್ರಿಯಲಿಸ್ಟ್‌ಗಳ ಸೈಡ್ ಇರುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ಇವೊತ್ತು ಕಾರ್ಮಿಕರ ವಿಭಾಗದಲ್ಲಿ ಸಂಘಟಿತರಾದವರದು ಒಂದು ವರ್ಗ, ಸಂಘಟಿತರಲ್ಲದವರದು ಇನ್ನೊಂದು ವರ್ಗ ಇದೆ. ಸಂಘಟಿತ ವರ್ಗದಲ್ಲಿಯೂ ಸಹ ಬಹಳ ಮಟ್ಟಿಗೆ ರಾಜಕೀಯ ಪ್ರವೇಶ ಆಗಿ ಕೂಲಿಗಾರರ ಜೀವನವನ್ನೇ ತಪ್ಪು ದಾರಿಗೆ ಎಳೆಯುವಂತಹ ರಾಜಕೀಯ ಪ್ರವೃತ್ತಿ ಅನೇಕ ಕಡೆ ಕಂಡು ಬರುತ್ತಿದೆ. ಕೆಲವು ಸಂದರ್ಭಗಳಲ್ಲಿ ಕಾರ್ಮಿಕರನ್ನು ನಾವು ವಿಚಾರ ಮಾಡಿದಾಗ ಅವರು ಚಳುವಳಿಯ ಪ್ರವೃತ್ತಿಗೆ ಅನುಕೂಲವಿಲ್ಲದಿದ್ದರೂ ಸಹ ಮುಖಂಡರ ಮನಸ್ಸನ್ನು ಮೀರಲಾರದೆ ಅಥವಾ ಸಂಘಟನೆಯ ಧೋರಣೆಯನ್ನು ಎದುರಿಸಲಾಗದೇ ಅವರು ಚಳುವಳಿಗಾಗಿ ತಲೆಯೊಡ್ಡಬೇಕಾಗುತ್ತದೆ. ಚಳುವಳಿ ಮಾಡುತ್ತಾರೆ ಎನ್ನುವ ಒಂದೇ ಒಂದು ನೆಪದಿಂದ ಇಂಡಸ್ಟ್ರಿಯಲಿಸ್ಟ್‌ಗಳು ಕಾರ್ಮಿಕರನ್ನು ಅವರೂ ಒಂದು ಭಾಗೀದಾರರು ಎಂಬ ಭಾವನೆ ಮಾಡದೇ ಅವರನ್ನು ಕೇವಲ ಪಶು ವರ್ಗದಂತೆ ನೋಡುವಂತಹ ರೀತಿಯೂ ಸಹ ನಮಗೆ ಕಂಡು ಬರುತ್ತಿದೆ. ಮಾನ್ಯ ಸದಸ್ಯರು ಅನೇಕ ಸಂದರ್ಭಗಳಲ್ಲಿ ನನಗೆ ಸಲಹೆ ಮಾಡಿದ್ದಾರೆ. ಕೆಲವು ಇಂಡಸ್ಟ್ರಿಯಲಿಸ್ಟ್‌ಗಳು ನಮ್ಮ ಸರ್ಕಾರದ, ಕೇಂದ್ರ ಸರ್ಕಾರದ, ಬ್ಯಾಂಕುಗಳ, ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್‌ಗಳ ಲಾಭವನ್ನು ಪಡೆದು ಅವರಿಂದ ಉದ್ದಿಮೆಯನ್ನು ಪ್ರಾರಂಭ ಮಾಡಿ ಆ ಉದ್ದಿಮೆಯಲ್ಲಿ ಲಾಭ ಬರ ಹತ್ತಿದ ನಂತರ ಆ ಲಾಭವನ್ನು ಬೇರೆ ಕಡೆ ವರ್ಗಾಯಿಸಿ ಈ ಇಂಡಸ್ಟ್ರಿಯನ್ನು ಬಂದ್ ಮಾಡುತ್ತಾರೆ. ಈ ದೃಷ್ಟಿಯಿಂದ ಕೂಲಿ ಮಾಡತಕ್ಕ ಜನ ಏನು ಇದ್ದಾರೆ, ಕಾರ್ಮಿಕರ ವರ್ಗ ಏನು ಇದ್ದಾರೆ ಆ ವರ್ಗದವರ ಹೊಟ್ಟೆಗೆ ಬರೆ ಇಡತಕ್ಕ ಕೆಲಸದಲ್ಲಿ ತೊಡಗುತ್ತಾರೆ ಎನ್ನುವಂಥ ಮಾತು ಹೊಸದೇನಲ್ಲ ನನಗೆ ತಿಳಿದ ಮಟ್ಟಿಗೆ, ಕೆಲವು ಇಂಡಸ್ಟ್ರಿಯಲಿಸ್ಟ್ ಅಂತೂ ಇಲ್ಲಿ ಹೊಸದಾಗಿ ಇಂಡಸ್ಟ್ರಿ ಮಾಡುತ್ತೇವೆ ನಮಗೆ ಹಣ ಕೊಡಿ ಎಂದು ಹೇಳಿ ಸರ್ಕಾರದಿಂದ ೩-೪ ಕೋಟಿ ರೂಪಾಯಿಗಳ ಬಡ್ಡಿ ಇಲ್ಲದ ಸಾಲವನ್ನು ಪಡೆದುಕೊಂಡು, ನಂತರ ಆ ಇಂಡಸ್ಟ್ರಿಯನ್ನು ಮುಚ್ಚಿ ಬೇರೆ ಕಡೆ ಬಿ.ಐ.ಎಫ್.ಆರ್.ಗೆ ತೆಗೆದುಕೊಂಡು ಹೋಗಿ ಇದನ್ನು ಏನೂ ಮಾಡಲಿಕ್ಕೆ ಆಗುವುದಿಲ್ಲ, ಇದನ್ನು ಲಿಕ್ವಿಡೇಷನ್ ಪ್ರೊಸೀಡಿಂಗ್ಸ್ ಮಾಡಿ ಎಂದು ಹೇಳಿದಂತ ಉದಾಹರಣೆಗಳೂ ನಮ್ಮ ಎದುರಿಗೆ ಇದೆ. ಅಲೆಂಬಿಕ್ ಕಾರ್ಖಾನೆ ಬಗ್ಗೆ ಒಂದು ಮಾತು ಹೇಳಿದರು ನಿಜ. ಅಲೆಂಬಿಕ್ ಕಾರ್ಖಾನೆಯವರು ಬಹು ದೊಡ್ಡ ಪ್ರಮಾಣದಲ್ಲಿ ಬರೋಡದಲ್ಲಿ ಫ್ಯಾಕ್ಟರಿಯನ್ನು ಮುಂದುವರಿಸುತ್ತಾ ಇದ್ದರೂ ಸಹ ವೈಟ್ ಫೀಲ್ಡ್‌ನಲ್ಲಿ ಫ್ಯಾಕ್ಟರಿಯನ್ನು ಬಂದ್ ಮಾಡಬೇಕಾಯಿತು. ಯಾವುದರ ಸಲುವಾಗಿ ? ಈ ಫ್ಯಾಕ್ಟರಿ ಇರತಕ್ಕ ಸ್ಥಳವನ್ನು ಮಾರಾಟ ಮಾಡಿ ಅದರ ಲಾಭವನ್ನು ಬೇರೆ ಒಂದು ಉದ್ದಿಮೆಗೆ ಹಾಕಿ ನಮ್ಮ ಕೂಲಿಗಾರರನ್ನು ಕೈಬಿಡುವ ದೃಷ್ಟಿಯಿಂದ ಅವರು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ಷ್ಮವಾದ ದೃಷ್ಟಿಯನ್ನು ಹರಿಸಬೇಕು. ಇಲ್ಲಿಯವರೆಗೆ ಇದ್ದ ರೀತಿ ನೀತಿಗಳನ್ನು ಬದಲಾವಣೆ ಮಾಡಬೇಕು ಎಂದು ನಾನು ನಮ್ಮ ಅಧಿಕಾರಿಗಳಿಗೆ ಈ ಸದನದ ಮೂಲಕ ಬಹಿರಂಗವಾಗಿ ಆದೇಶ ಕೊಡುತ್ತೇನೆ. ಇದರಲ್ಲಿ ಚಾಚೂ ತಪ್ಪದೇ ಅಧಿಕಾರಿಗಳು ನಡೆಯಬೇಕು. ಹಾಗೆ ನಡೆಯದೇ ಇದ್ದರೆ ಅಂತಹ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತಗೆದುಕೊಳ್ಳುವುದಕ್ಕೆ ನಾನು ಹಿಂದು ಮುಂದು ನೋಡುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಆಶ್ವಾಸನೆ ಕೊಡುತ್ತೇನೆ. ಸರ್ಕಾರ ಯಾವುದೇ ದೃಷ್ಟಿಯಿಂದಲೂ ಸಹ ಇಂಡಸ್ಟ್ರಿಯಲಿಸ್ಟ್‌ರಾಗಲಿ, ಅಥವಾ ಹಣ ಉಳ್ಳವರಾಗಲೀ ಅಥವಾ ರಾಜಕೀಯ ಪ್ರಭಾವಕ್ಕೆ ಒಳಗಾದವರಿಗಾಗಲೀ ಅವರ ಕೈವಾರಿ ಆಗುವುದು ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದೇ ಸಮಯದಲ್ಲಿ ನಿಮ್ಮ ಮುಖಾಂತರ ಕೂಲಿಕಾರರ ಮುಖಂಡರನ್ನು ನಾನು ಪ್ರಾರ್ಥನೆ ಮಾಡುವುದಿಷ್ಟೆ. ಕೂಲಿಕಾರರು ಬಹುಸಂಖ್ಯಾತರು, ಆ ಕೂಲಿಗಾರರ ಜೀವನ ಹಸನಾಗಬೇಕು, ಅವರ ಜೀವನ ಸರಿಯಾಗಿ

ನಡೆಯುವಂತಾಗಬೇಕು. ಅದು ಆಗಬೇಕಾದರೆ ಇಂಡಸ್ಟ್ರಿ ಪ್ರಖರವಾಗಿ ಬೆಳೆಯಬೇಕು. ಇಂಡಸ್ಟ್ರಿಯಲ್ಲಿ ಬರುವ ಲಾಭದ ಬಹುಭಾಗ ಅವರ ಕೈಗೆ ಸೇರಬೇಕು. ಯಾವುದೇ ಒಂದು ಇಂಡಸ್ಟ್ರಿ ಬಂದ್ ಆದರೆ ಒಬ್ಬ ಮಾಲೀಕ ಇರುತ್ತಾನೆ. ಆದರೆ ಸಾವಿರ ಮಂದಿ ಕೂಲಿಗಾರರು ಇರುತ್ತಾರೆ. ಈ ಸಾವಿರ ಮಂದಿಗೆ ಸಿಗುವಂಥ ಹಣ ಬಂದ್ ಆದರೆ ಯಾರಿಗೆ ಹೆಚ್ಚು ಹಾನಿಯಾಗುತ್ತದೆ. ಬರತಕ್ಕಂಥ ದೇಶದ ಉತ್ಪಾದನೆ ಕಡಿಮೆಯಾದಾಗ ಯಾರಿಗೆ ಹೆಚ್ಚು ಹಾನಿಯಾಗುತ್ತದೆ ಎಂದು ವಿಚಾರ ಮಾಡುವುದು ಅತ್ಯಂತ ಅವಶ್ಯಕ. ಇವತ್ತು ಬಂಡವಾಳಶಾಹಿ ಜನ ತಮ್ಮ ಬಂಡವಾಳದ ಮೇಲೆ ಉದ್ದಿಮೆಯನ್ನು ಪ್ರಾರಂಭ ಮಾಡುವಂಥವರು ಅತಿ ವಿರಳ. ಯಾವುದೇ ಉದ್ಯಮವನ್ನು ತೆಗೆದುಕೊಂಡರೂ ಸಹ ಫೈನಾನ್ಸ್ ಕಾರ್ಪೋರೇಷನ್ ಮುಖಾಂತರವಾಗಲಿ ಅಥವಾ ಇನ್ನಿತರ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್‌ಗಳ ಮುಖಾಂತರವಾಗಲಿ ಮತ್ತು ಷೆಡ್ಯೂಲ್ ಬ್ಯಾಂಕ್‌ಗಳ ಮುಖಾಂತರವಾಗಲಿ ಹಣವನ್ನು ಪಡೆದು ಉದ್ಯಮಗಳನ್ನು ಪ್ರಾರಂಭ ಮಾಡಿ ಆ ಉದ್ಯಮಗಳಲ್ಲಿ ನಮ್ಮ ಕಾರ್ಮಿಕ ಜನರನ್ನು ಉದ್ದಿಮೆ ಮಾಡಲಿಕ್ಕೆ ಹೆಚ್ಚಿನಂಥ ರೀತಿ ಇರುವುದನ್ನು ನಾವೆಲ್ಲಾ ನೋಡುತ್ತಾ ಇದ್ದೇವೆ. ಇದನ್ನೆಲ್ಲಾ ವಿಚಾರ ಮಾಡಿದಾಗ ಕಾರ್ಮಿಕ ವರ್ಗಕ್ಕೆ ಸಹಾಯ ಮಾಡುವುದು ಪ್ರತಿಯೊಬ್ಬ ಮಾನವೀಯನ ಕರ್ತವ್ಯ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಕೆಲವು ಕಾರ್ಮಿಕ ಮುಖಂಡರಾಗಲಿ ಅಥವಾ ರಾಜಕೀಯ ಪಕ್ಷಗಳಾಗಲಿ ಕೇವಲ ತಮ್ಮ ಹಿತಸಾಧನೆಗಾಗಿ ಅಥವಾ ಯಾವುದೋ ರೀತಿಯಿಂದ ತಾವು ಬೆಳೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅಥವಾ ಮತ್ತೆ ಯಾವುದೋ ದೃಷ್ಟಿಯಿಂದ ಪಾಪುಲರ್ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ರಾಜಕೀಯವನ್ನು ಬೆರೆಸಿ ಸ್ಟ್ರೈಕ್ ಮೊದಲಾದ ಕಾರ್ಯಕ್ರಮಗಳಿಂದಾಗಿ ಇಂಡಸ್ಟ್ರೀಸನ್ನು ಬಂದ್ ಮಾಡಿದರೆ ಅದರಿಂದ ದೇಶಕ್ಕೆ ದೊಡ್ಡ ಹಾನಿಯಾಗುತ್ತದೆ. ಆ ಹಾನಿಯನ್ನು ತಪ್ಪಿಸಬೇಕು ಎಂದು ಅವರೆಲ್ಲರಿಗೂ ನಾನು ಪ್ರಾರ್ಥನೆ ಮಾಡುತ್ತೇನೆ. ಇವತ್ತು ಸ್ಟ್ರೈಕ್ ಮಾಡುವುದು ಅಥವಾ ಚಳುವಳಿ ಮಾಡುವುದು ಯಾತಕ್ಕೋಸ್ಕರವಾಗಿ ಅಂದರೆ ಸರ್ಕಾರದ ಗಮನವನ್ನು ಸೆಳೆಯುವ ಸಲುವಾಗಿ ಅಲ್ಲವೆ. ಸರ್ಕಾರ ನಿಮ್ಮ ಕಡೆಗೆ ಬಂದು ಸಹಾಯ ಮಾಡುತ್ತೇವೆ ಎಂದು ಹೇಳುವಂಥವರು ಇದ್ದಾಗ ನೀವು ಸ್ಟ್ರೈಕ್ ಮಾಡುವುದಕ್ಕೆ ಏಕೆ ಹೋಗುತ್ತೀರಿ, ಉಪವಾಸ ಏಕೆ ಮಾಡುತ್ತೀರಿ, ವನವಾಸಕ್ಕೆ ಏಕೆ ಹೋಗುತ್ತೀರಿ, ಪೋಲೀಸರ ಕೈಯಲ್ಲಿ ಏಕೆ ಹೊಡೆಸಿಕೊಳ್ಳುತ್ತೀರಿ. ನಿಮ್ಮ ಸಮಸ್ಯೆಗಳನ್ನು ನೇರವಾಗಿ ನಮ್ಮ ನಜರಿಗೆ ತಂದರೆ ನಮ್ಮ ಕೈಯಲ್ಲಿ ಕಾರ್ಮಿಕರಿಗೆ ಯಾವ ರೀತಿ ಸಹಾಯ ಮಾಡಲಿಕ್ಕೆ ಸಾಧ್ಯವೋ ಆ ಎಲ್ಲ ಸಹಾಯ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಈ ಕಾರ್ಮಿಕ ವಿಭಾಗದಲ್ಲಿ ಅನೇಕ ವಿಭಾಗಗಳಿವೆ. ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳ ಬಗ್ಗೆ ಶ್ರೀಮಾನ್ ಸಿಂಧ್ಯರವರು ಮತ್ತು ಇನ್ನಿತರ ಮಾನನೀಯ ಸದಸ್ಯರು ಈ ಕಡೆಯವರು, ಆ ಕಡೆಯವರು ಕೂಡಿ ಬಹಳ ವಿಷದವಾಗಿ ಹೇಳಿದ್ದಾರೆ. ಈ ಫ್ಯಾಕ್ಟರಿ ಇನ್‌ಸ್ಪೆಕ್ಟರ್ಸ್ ಯಾವ ರೀತಿಯಾಗಿ ಫ್ಯಾಕ್ಟರಿಗಳನ್ನು ಸೂಪರ್‌ವಿಷನ್ ಮಾಡುತ್ತಾ ಇದ್ದಾರೆ ಎಂದು ಹೇಳಿದರು. ಒಬ್ಬ ಮನುಷ್ಯ ದಿವಸಕ್ಕೆ 200-300-400 ಫ್ಯಾಕ್ಟರಿಗಳನ್ನು ಸೂಪರ್‌ವಿಷನ್ ಮಾಡುವುದಕ್ಕೆ ಸಾಧ್ಯವೇ ಎಂದು ಹೇಳಿದ್ದಾರೆ, ಮಾನ್ಯ ಚಂದ್ರೇಗೌಡರೂ ಇದರ ಬಗ್ಗೆ ಹೇಳಿದ್ದಾರೆ. ಇದು ನಿಜ. ನಮ್ಮಲ್ಲಿರತಕ್ಕಂಥ ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ನೋಡಿದಾಗ, ಅವರು ಆ ಫ್ಯಾಕ್ಟರಿಗಳಲ್ಲಿ ಕುಳಿತು ಅದನ್ನು ಎಣಿಸುವುದೂ ಸಹಿತ ಅವರಿಗೆ ಆಗುವುದಿಲ್ಲ, ಅಷ್ಟು ಫ್ಯಾಕ್ಟರಿಗಳಿವೆ ಆ ಫ್ಯಾಕ್ಟರಿಗಳಲ್ಲಿ ಅವರೇನು ಇನ್‌ಸ್ಪೆಕ್ಷನ್ ಮಾಡುತ್ತಾರೆಂದು ನಾನು ಮಿನಿಸ್ಟರಾಗಿ ಇಮ್ಯಾಜಿನ್ ಮಾಡಿದರೆ ಅವರು ಇನ್‌ಸ್ಪೆಕ್ಷನ್ ಮಾಡುವುದಲ್ಲ ಅವರು ಹೋಗಿ ಮುಟ್ಟುವುದೂ ಸಾಧ್ಯವಿಲ್ಲ. ಅವರು ಹೋದರೆ ಅಲ್ಲಿ ಅವರಿಗೆ ಯಾವ ಬುಕ್ಕನ್ನು ಕೊಡುತ್ತಾರೆ ಆ ಬುಕ್ಕಿನಲ್ಲಿ ಬರೆದು ಬರುತ್ತಾರೆ ಎಂದು ಮಾನ್ಯ ಸಿಂಧ್ಯರವರು ಹೇಳಿದರು. ನನಗೆ ಅದು ಸಂದೇಹ. ಅವರು ಅಲ್ಲಿಯವರೆಗೆ ಹೋಗಿ ಬುಕ್‌ನಲ್ಲಿ ಬರೆಯುವುದಕ್ಕೆ ಆಗುತ್ತದೋ ಇಲ್ಲವೋ ಅವರು ಬುಕ್ಕನ್ನು ತರಿಸಿ ಬರೆಯುತ್ತಾರೋ ಏನೋ ಎನ್ನುವುದು ನನಗೆ ಸಂದೇಹವಿದೆ. ನಾನು ಅದನ್ನು ವಿಚಾರ ಮಾಡುತ್ತೇನೆ. ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳ ಸಂಖ್ಯೆ ಹೆಚ್ಚಾಗದೇ ಇದ್ದರೆ ಆ ಫ್ಯಾಕ್ಟರಿಗಳನ್ನು ಸೂಪರ್‌ವಿಷನ್ ಮಾಡುವುದು ಸಾಧ್ಯವಿಲ್ಲ, ಹೆಚ್ಚು ಮಾಡುವಂಥ ಕಾರ್ಯಕ್ರಮ ನಿಮ್ಮ ಕೈಯಲ್ಲಿದೆ, ನೀವು ಬಜೆಟ್‌ನಲ್ಲಿ ಹೆಚ್ಚು ಪ್ರೊವಿಜನ್ ಮಾಡಿಕೊಡಬೇಕು. ಈ ವರ್ಷ ನಾನು ಬರುವುದಕ್ಕೆ ಮೊದಲೇ ಪ್ರೊವಿಜನ್ ಆಗಿದೆ ಹೆಚ್ಚು ಕೇಳಲಿಕ್ಕೆ ನನಗೆ ಅವಕಾಶವಿಲ್ಲ, ಆದರೂ ವಿಚಾರ ಮಾಡೋಣ. ಮುಂದಿನ ಸಲವಾದರೂ ನಿಮ್ಮ ಸಹಾಯವನ್ನು ನಾನು ಬೇಡುತ್ತೇನೆ. ನಾನು ಮಾಡುವಂಥ ಕಾರ್ಯ ಸರಿಯಾಗಿದ್ದರೆ, ನಮ್ಮ ಕಾರ್ಯಕ್ರಮ ನಿಮ್ಮೆಲ್ಲರ ಮನಸ್ಸಿಗೆ ಒಗ್ಗುವಂತಾಗಿದ್ದರೆ ಮುಂದಿನ ಸಲವಾದರೂ ಬಜೆಟ್‌ನಲ್ಲಿ ಹೆಚ್ಚು ಮಾಡಿದರೆ ಕರ್ತೃತ್ವಶಾಲಿತ್ವವನ್ನು ಈ ಖಾತೆಯಲ್ಲಿ ಅಮಲಿನಲ್ಲಿ ತರುವುದಕ್ಕೆ ಅವಶ್ಯವಾಗುತ್ತದೆ.

ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇನ್ನೊಂದು ವಿಷಯ ಮೊನ್ನೆತಾನೆ ನನ್ನ ನಜರಿಗೆ ಬಂತು, ಈ ಪವರ್‌ಲೂಮ್ಸ್ ಆಗಲಿ ಅಥವಾ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸಾಗಲಿ, ಅಕ್ಕಿ ಕುಟ್ಟುವುದಾಗಲಿ, ಅಕ್ಕಿ ಬೇಯಿಸುವುದಾಗಲಿ ಇವೆಲ್ಲವುಗಳಿಗೂ ಕಾರ್ಖಾನೆಗಳು ಬೇಕು ಎಂದು ಹೇಳುತ್ತೇವೆ. ಇವೆಲ್ಲವುಗಳಿಗೂ ಕಾರ್ಖಾನೆ ಇರುವುದಕ್ಕೆ ಹೇಗೆ ಸಾಧ್ಯ? ಆದುದರಿಂದ ನಾನು ಮೊನ್ನೆ ಒಂದು ನೋಟಿಫಿಕೇಷನ್ ಹೊರಡಿಸಿದೆ, ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆ ನೋಟಿಫಿಕೇಷನ್‌ನಲ್ಲಿ ಎಲ್ಲ ಪವರ್‌ಲೂಂಗಳನ್ನು ಮತ್ತು ಸಣ್ಣ ಸಣ್ಣ ಉದ್ಯಮಗಳನ್ನು ಫ್ಯಾಕ್ಟರಿ ಆಕ್ಟ್‌ನಿಂದ ತೆಗೆದು ಹಾಕಿದೆ. ಕರ್ನಾಟಕ ರಾಜ್ಯದಲ್ಲಿ ಇದು ಪ್ರಥಮ. ಇಡೀ ಹಿಂದೂಸ್ಥಾನದಲ್ಲಿ ಕರ್ನಾಟಕದಲ್ಲೇ ಮೊಟ್ಟಮೊದಲು ತೆಗೆದಿರುವುದು. ಮಂತ್ರಿಯಾದವರು ಅಥವಾ ಸರ್ಕಾರದವರು ತಮ್ಮ ಅಧಿಕಾರವನ್ನು ಬಿಟ್ಟುಕೊಡುವುದಕ್ಕೆ ಬಹಳ ಹಿಂಜರಿಯುತ್ತಾರೆ. ಅದನ್ನು ನಾನು ನಿಜವಾಗಿ ಬಿಟ್ಟುಕೊಟ್ಟಿದ್ದೇನೆ. ಇನ್ನು ಹೆಚ್ಚು ಇಂಡಸ್ಟ್ರೀಸನ್ನು ಡಿನೋಟಿಫೈ ಮಾಡಬೇಕು ಎಂದು ನನಗೆ ಮನಸ್ಸಿದೆ, ಅದಕ್ಕೆ ಎಲ್ಲರೂ ಒಪ್ಪುವುದಿಲ್ಲ. ಅದಕ್ಕೆ ಎಲ್ಲ ರೀತಿಯಿಂದ ಒಪ್ಪಿಗೆ ಬೇಕಾಗುತ್ತದೆ. ಆ ಒಪ್ಪಿಗೆ ಇಲ್ಲ. ನಮ್ಮ ಅನೇಕ ಕಾರ್ಮಿಕ ಮುಖಂಡರು ಇದು ತೆಗೆದದ್ದು ತಪ್ಪು ಎಂದು ಹೇಳುತ್ತಾರೆ. ಏಕೆಂದರೆ, ಅವರು ಸ್ವಲ್ಪ ಹೆಚ್ಚು ಇರಬೇಕು, ಮತ್ತೆ ಕಾರ್ಮಿಕರು ನಮ್ಮ ಹತ್ತಿರ ಬರಬೇಕು ಎನ್ನುವುದು ಅವರ ಅಭಿಪ್ರಾಯ.

ನಮ್ಮ ಫ್ಯಾಕ್ಟರಿ ಇನ್ಸ್‌ಪೆಕ್ಟರುಗಳು ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಾರೆಯೋ ಎಂದು ಇವೆಲ್ಲವುಗಳನ್ನು ನೋಡಿ ನಾನು ಇದನ್ನು ತೆಗೆದಿದ್ದೇನೆ. ಇಂಥ ಯಾವುದಾದರೂ ಸಾರ್ವಜನಿಕರಿಗೆ ತೊಂದರೆ ಯಾಗುವಂಥ ಕಾರ್ಯಕ್ರಮಗಳಿದ್ದರೆ, ಆ ಕಾರ್ಯಕ್ರಮಗಳನ್ನು ನೆರವೇರಿಸಲಿಕ್ಕೆ ಮತ್ತು ಮಾಡಲಿಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಇದನ್ನು ಇ. ಎಸ್. ಐ. ಬಗ್ಗೆ ತಾವು ಅನೇಕಸಲ ಹೇಳಿದ್ದೀರಿ. ಇ.ಎಸ್.ಐ. ಆಸ್ಪತ್ರೆಗಳಲ್ಲಿ ಹೀನಾಯವಾದ ವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದೀರಿ. ನಾನಿನ್ನೂ ಅಲ್ಲಿ ಹೋಗಿ ನೋಡಿಲ್ಲ. ಈಗತಾನೇ ವರ್ಗಾವಣೆ ಕಾರ್ಯ ಮುಗಿದಿದೆ. ಇನ್ನು ಮೇಲೆ ಆಸ್ಪತ್ರೆಗಳಿಗೆ ಕಾಲಿಡಬೇಕಾಗಿದೆ, ನನಗೆ ಅನೇಕ ಸಂದರ್ಭದಲ್ಲಿ ಸಹಿ ಇಲ್ಲದ ಕಾಗದಗಳು ಬರುತ್ತಿವೆ; ಕೆಲವರನ್ನು ಎನ್‌ಕ್ವೈರಿ ಮಾಡಲಿಕ್ಕೆ ಕಳಿಸುತ್ತಿದ್ದೇನೆ. ಹಿಂದೆ ಆಗಿದ್ದನ್ನು ಮರೆಯೋಣ; ಇನ್ನು ಮುಂದೆ ಅಂಥಾದ್ದು ಏನಾದರೂ ನಡೆದಿರುವುದು ತಮಗೆ ಗೊತ್ತಾಗಿ ಅದನ್ನು ನನ್ನ ಗಮನಕ್ಕೆ ತಂದರೆ, ಅಂದೇ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ತಾವು ಸರ್ಕಾರದ ಗಮನಕ್ಕೆ ವಿಷಯಗಳನ್ನು ತರುವಾಗ ದ್ವೇಷಾಸೂಯೆಗಳಿಗೆ ಅವಕಾಶ ಇಲ್ಲದೇ ಇರಲಿ, ಪಕ್ಷ ಪಂಗಡಗಳ ಭೇದಭಾವ ಇಲ್ಲದೇ ಇರಲಿ. ಯೋಗ್ಯ ವಿಚಾರಗಳು ಇದ್ದರೆ ನಿಶ್ಚಿತವಾಗಿಯೂ ನೆರವೇರಿಸಿಕೊಡುತ್ತೇನೆ. ಇವತ್ತು ದೇಶದಲ್ಲಿ ಲಂಚ ನಿರ್ಮೂಲನವಾಗಬೇಕೆಂದು ಎಲ್ಲರೂ ಮಾತನಾಡುತ್ತಾರೆ. ಭಾಷಣ ಮಾಡುವುದರೊಳಗೆ ಎಲ್ಲರೂ ಮುಂದಾಗುತ್ತಾರೆ. ಆದರೆ, ಲಂಚ ನಿರ್ಮೂಲನೆ ಯಾರಿಂದ ಆಗಬೇಕು; ಹೇಗೆ ಆಗಬೇಕು ಎನ್ನುವುದರ ಬಗ್ಗೆ ಪ್ರತಿಯೊಬ್ಬ ರಾಜಕೀಯ ಧುರೀಣರೂ ವಿಚಾರ ಮಾಡಬೇಕಿದೆ. ಲಂಚ ನಿರ್ಮೂಲನೆಯಾಗಬೇಕಾದರೆ, ಮನುಷ್ಯನಲ್ಲಿ ಒಂದು ನಿರ್ದಿಷ್ಟವಾದಂಥ ಅವಧಿಯಲ್ಲಿ ತನಗೆ ಕೊಟ್ಟಂತಹ ಕಾರ್ಯವನ್ನು ಮಾಡುವಂಥ ಕಾರ್ಯಕ್ರಮ ಇರಬೇಕು. ಇವತ್ತು ತಾವು ಬಂದು ಹೇಳಿದ ಕೆಲಸವನ್ನು ನೀವು ಬಂದು ಹೇಳಿದ ೧೫ ದಿವಸಗಳ ಮೇಲೆ ಮಾಡುತ್ತೇನೆ ಅಂದರೆ ಸ್ವಲ್ಪವಾದರೂ ಭ್ರಷ್ಟಾಚಾರ ಶುರುವಾಗುತ್ತದೆ. ನಮಗೆ ಬಂದ ಫೈಲು ಅವತ್ತೇ ಡಿಸ್‌ಪೋಸ್ ಆದರೆ ಲಂಚ ಕಡಿಮೆಯಾಗುತ್ತದೆ. ಇದನ್ನು ನಾನು ವೈಯಕ್ತಿವಾಗಿ ತಿಳಿದುಕೊಂಡು, ನನ್ನ ಎಲ್ಲಾ ಖಾತೆಗಳಲ್ಲಿಯೂ ಸಹ ಯಾವುದೇ ವಿಚಾರವಾಗಿ ಫೈಲು ಬಂದರೂ 10 ದಿವಸಗಳೊಳಗೆ ಅವನ್ನು ನಿಖಾಲಿ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಆ ಸರ್ಕ್ಯುಲರ್ ಇನ್ನೂ ಅಮಲಿನಲ್ಲಿ ಬಂದಿರಲಿಕ್ಕಿಲ್ಲ. ಏಕೆಂದರೆ, ನಿದ್ದೆಯೊಳಗೆ ಇದ್ದವರನ್ನು ಎಬ್ಬರಿಸಿದರೆ, ಅವನು ಮುಖ ತೊಳೆದುಕೊಂಡು ತಯಾರಾಗಬೇಕು. ನಮ್ಮ ಸೆಕ್ರೆಟೇರಿಯೇಟ್‌ನಲ್ಲೂ ಸಹ ಪೂರ್ತಿ ಅಮಲಿನಲ್ಲಿ ಬಂದಿದೆಯೆಂದೂ ನಾನು ಒಪ್ಪುದಿಲ್ಲ. ನಾನು ಫೈಲುಗಳನ್ನು ನೋಡಿದಾಗ, ಒಮ್ಮೊಮ್ಮೆ ತಪ್ಪುತ್ತಾರೆ. ನಾನು ನಮ್ಮ ಸೆಕ್ರೆಟರಿಯವರಿಗೆ ಹೇಳಿದೆ, ಮೊಟ್ಟಮೊದಲಿಗೆ ಮಂದಿಗೆ ಬುದ್ಧಿ ಹೇಳುವ ಮೊದಲು ನಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಫೈಲುಗಳನ್ನು ವಿಲೇವಾರಿ ಮಾಡೋಣ. ಯಾವುದೇ ಫೈಲುಗಳು ಡಿಲೇ ಆಗಿದ್ದರೆ ನನಗೆ ಕಳಿಸಿಕೊಡಿ ಎಂದು ಹೇಳಿದ್ದೇನೆ. ನನಗೆ ಕಳಿಸಿದ ಫೈಲುಗಳನ್ನು ಅವತ್ತೇ ನಿಖಾಲಿ ಮಾಡುತ್ತೇನೆ, ನಾನು ಒಂದು ದಿವಸವೂ ಇಟ್ಟುಕೊಳ್ಳುವುದಿಲ್ಲ. ಆ ದೃಷ್ಟಿಯಿಂದ ನಾನು ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಮೊದಲು ಈ ಫೈಲ್ ವಿಲೇವಾರಿ ಬಗ್ಗೆ ಅಧಿಕಾರಿಗಳಲ್ಲಿ ವಿನಂತಿಸಿದ್ದೇನೆ. ಅವರು ಈಗ ಜೋರಾಗಿ ಕೆಲಸ ಮಾಡಲಿಕ್ಕೆ ಹತ್ತಿದ್ದಾರೆ. ಉತ್ತಮವಾದಂಥ ಅನುಭವಿಕ ಸೆಕ್ರೆಟರಿ ಗೋಪಾಲರೆಡ್ಡಿಯವರು ಇರುವುದರಿಂದ ನನ್ನ ಕೆಲಸ ಬಹಳ ಹಗುರವಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ. ಅದೇ ರೀತಿ ಕೆ. ಪಿ. ಸಿಂಗ್‌ರವರು ಇದ್ದಾರೆ; ಮಹೇಶ್‌ನವರು

ಕಮೀಷನರ್ ಆಗಿದ್ದಾರೆ. ನಾನು ಅಧಿಕಾರಿಗಳನ್ನು ವರ್ಣನೆ ಮಾಡುವುದು ವಿರಳ. ಆದರೆ, ಚಲೋ ಕೆಲಸ ಮಾಡುವವರಿಗೆ ವರ್ಣನೆ ಮಾಡದೇ ನಿರ್ವಾಹ ಇಲ್ಲ. ಅವರ ನೇತೃತ್ವದಲ್ಲಿ ಉತ್ತಮ ಕೆಲಸವಾಗುತ್ತದೆಂಬ ನಿರೀಕ್ಷೆ ಇದೆ; ಏನು ಆಗದಿದ್ದರೂ ಕಡೆಗೆ ನಾನು ಹೇಳಿದ್ದಾದರೂ ನಡೆಯಬಹುದು ಎನ್ನುವ ಆಸೆ ನನಗೆ ಇದೆ. ನೋಡೋಣ.

ಆ ಆಸೆಗೆ ತಪ್ಪಿದರೆ ಅವರು ಸಹ ನಮ್ಮ ದಂಡನೆಗೆ ಗುರಿಯಾಗುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇ.ಎಸ್.ಐ. ಆಸ್ಪತ್ರೆಗೆ ಇವೊತ್ತು ನಮ್ಮ ದೇಶದಲ್ಲಿ ಬರತಕ್ಕ ಹಣ ಎಷ್ಟು ಇದೆ ಆ ಹಣ ಪೂರ್ತಿಯಾಗಿ ಖರ್ಚಾಗುವುದಿಲ್ಲ. ಇದಕ್ಕೆ ಕಾರಣ ಏನು ಅಂದರೆ, ನಮ್ಮ ಸರ್ಕಾರ ಕೆಲವು ಹಣ ಹಾಕಬೇಕಾಗುತ್ತದೆ. ಕೇಂದ್ರದವರೂ ಹಾಕಬೇಕಾಗುತ್ತದೆ, ನಮ್ಮ ಪದ್ಧತಿ ಹೇಗೆ ಇದೆ ಅಂದರೆ ಅಪ್ಪ ಒಂದು ಕೋಟು ಹೊಲಿಸಿ ಇಡುತ್ತಾನೆ. ಆ ಕೋಟು ನಾವು ಹಾಕಿಕೊಳ್ಳಬೇಕು. ಆ ಕೋಟು ಸರಿಯಾಗುವುದಿಲ್ಲ, ನನ್ನ ಮೈ ದೊಡ್ಡದಾಗಿದೆ ಅಂದರೆ ಕೇಳುವುದಿಲ್ಲ. ಹೇಗಾದರೂ ಮಾಡಿ ನಿಮ್ಮ ಮೈ ಅಡ್ಜಸ್ಟು ಮಾಡಿಕೊಳ್ಳಿ ಎಂದು ಹೇಳುತ್ತಾರೆ, ಅದಕ್ಕೆ ಆ ಕೋಟನ್ನು ಅಡ್ಜಸ್ಟ್ ಮಾಡಿಕೊಳ್ಳಬೇಕು ಎನ್ನುವಂಥ ಬುದ್ಧಿ ನಾವು ಕಲಿಯಬೇಕಾಗಿದೆ, ಇವೊತ್ತು ನಾವು ನಮ್ಮ ಮೈ ಅಡ್ಜಸ್ಟ್ ಮಾಡಿ ಕೊಳ್ಳುವ ಬದಲು ಆ ಕೋಟನ್ನು ಅಡ್ಜಸ್ಟ್ ಮಾಡಿಕೊಳ್ಳಬೇಕು. ಆ ಕೋಟನ್ನು ಅಡ್ಜಸ್ಟ್ ಮಾಡಿಕೊಳ್ಳುವಂಥ ಕೆಲಸವನ್ನು ನಾವು, ನೀವು ನಮ್ಮ ಅಧಿಕಾರಿಗಳು ಎಲ್ಲರೂ ಕೂಡಿ ಮಾಡಬೇಕಾಗುತ್ತದೆ. ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇ.ಎಸ್.ಐ. ಆಸ್ಪತ್ರೆಯ ಬಗ್ಗೆ ನಾನು ತಮ್ಮ ಎದುರಿಗೆ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿರತಕ್ಕ ಡಾಕ್ಟರುಗಳು ಯಾರೂ ಹೊರಗೆ ಹೋಗಲಿಕ್ಕೆ ತಯಾರಿಲ್ಲ. ಹೆಣ್ಣು ಮಕ್ಕಳು ಇದ್ದರೆ ಬಂದು ಅಳುತ್ತಾರೆ. ಗಂಡು ಮಕ್ಕಳು ಇದ್ದರೆ ಅವರ ಕೈಲಿ ಹೇಳಿಸುವುದು, ಇವರ ಕೈಲಿ ಹೇಳಿಸುವುದು ಮಾಡುತ್ತಾರೆ. ಬೆಂಗಳೂರು ಬಿಟ್ಟು ಹೋಗುವುದಕ್ಕೆ ತಯಾರಿಲ್ಲ. ಒಂದು ಸಾರಿ ಹೇಳಿದರೆ ಬಿಡಬಹುದು. ಎರಡು ಸಾರಿ ಹೇಳಿದರೆ ಬಿಡಬಹುದು, ಮತ್ತೆ ಹೇಳಿದರೆ ಅವರನ್ನು ಅಲ್ಲೇ ಇಡಬೇಕಾಗುತ್ತದೆ ಈ ರೀತಿ ಇಡುವುದರಿಂದ ಇವರಿಗೆ ಒಂದು ತರಹ ಕೆಟ್ಟ ವ್ಯಸನ ಬಂದಿದೆ. ಮತ್ತೊಂದು ವಿಷಯ ಅಂದರೆ, ಅನೇಕ ಇ.ಎಸ್.ಐ. ಹಾಸ್ಪಟಲ್ ಡಾಕ್ಟರ್ಸ್ ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಾರೆಂದು ನನಗೆ ತಿಳಿದುಬಂದಿದೆ. ಇದು ನಿಜಕ್ಕೂ ದುರ್ದೈವ, ಈಗ ಅವರ ಬುದ್ಧಿ ಬೆಳೆಯಬೇಕು. ಅವರು ಜಾಣರಿದ್ದರೆ ಆಯಾ ವಿಷಯದಲ್ಲಿ ತಜ್ಞರಾಗಿ ಕೆಲಸ ಮಾಡಬೇಕು. ಆದರೆ ಇ.ಎಸ್.ಐ. ಆಸ್ಪತ್ರೆಯಲ್ಲಿದ್ದು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದು ನಿಜವಾಗಿಯೂ ಅಕ್ಷಮ್ಯವಾದಂಥ ಅಪರಾಧ, ನಮ್ಮ ಕೂಲಿಗಾರರಿಗೆ, ನಮ್ಮ ಶ್ರಮಜೀವಿಗಳಿಗೆ ಸಾಕಷ್ಟು ಔಷಧೋಪಚಾರ ಕೊಡಬೇಕೆಂದರೆ ಅವರು ಇನ್ನು ಎಷ್ಟು ಸಮಯ ಇದ್ದರೂ ಸಾಲದು. ಶ್ರಮಜೀವಿಗಳಿಗೆ ಸಿಕ್ಕತಕ್ಕ ಸೌಲಭ್ಯ ಯಾತಕ್ಕೂ ಇಲ್ಲ, ಅದಕ್ಕಿಂತಲೂ ಹೆಚ್ಚಿಗೆ ಸಿಕ್ಕಬೇಕು. ಇಂದಿನಿಂದಲಾದರೂ ಅಲ್ಲಿನ ಡಾಕ್ಟರ್ಸ್ ಆ ರೀತಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ಬಿಡಬೇಕು. ಮತ್ತೆ ಯಾರಾದರೂ ಪ್ರೈವೇಟ್ ಪ್ರಾಕ್ಟಿಸ್ ಮಾಡುವಂಥ ಡಾಕ್ಟರು ಇದ್ದರೆ ಅವರ ಬಗ್ಗೆ ನನ್ನ ಗಮನಕ್ಕೆ ತರಬೇಕೆಂದು ನಾನು ಅಧಿಕಾರಿಗಳಲ್ಲೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ತಮ್ಮಗಳಿಗೆ ತಿಳಿದು ಬಂದರೆ ಸಹ ತಾವು ನನಗೆ ಕಾನ್‌ಫಿಡೆಷಿಯಲ್ ಆಗಿ ಲೆಟರ್ ಬರೆದರೆ ಸಾಕು. ನೀವು ಬಂದು ಹೇಳಿ, ನೀವು ನಿಮ್ಮ ಹೆಸರನ್ನು ಕೊಟ್ಟು ಮಾಡುವಂತಹ ಆವಶ್ಯಕತೆ ಇಲ್ಲ. ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇದು ಆದನಂತರ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಬಹಳಷ್ಟು ಬಾಯ್ಲರ್ ಇನ್ಸ್‌ಪೆಕ್ಟರ್ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಜನರನ್ನು ನೇಮಿಸಬೇಕಾಗಿದೆ. ಈಗ ನೇಮಿಸಿದಂಥ ಸಂಖ್ಯೆಯಲ್ಲಿ ಅನೇಕ ವೇಕೆನ್ಸಿಗಳು ಇದ್ದರೂ ಅವುಗಳನ್ನು ತುಂಬಲಿಕ್ಕೆ ಸರ್ಕಾರದ ನಿಬಂಧನೆಗನು ಗುಣವಾಗಿ ಆಗಿಲ್ಲ. ಒಟ್ಟು ೨೨೬ ಹುದ್ದೆಗಳು ಸ್ಯಾಂಕ್ಷನ್ ಆದದ್ದು, ಅದರಲ್ಲಿ ಸುಮಾರು ೧೭೦ ಪೋಸ್ಟ್‌ಗಳನ್ನು ತುಂಬಿದ್ದಾರೆ. ಇನ್ನು ೫೬ ಜಾಗ ಖಾಲಿ ಇವೆ, ಅವುಗಳನ್ನೆಲ್ಲಾ ತುಂಬಬೇಕು. ಆ ರೀತಿ ತುಂಬುವಂಥ ಕೆಲಸ ಮಾಡಬೇಕೆಂದು ನನ್ನ ಆಸೆ ಇದೆ, ಇನ್ನು ಬಾಯ್ಲರ್ ಬಗ್ಗೆ ಸಹ ಅನೇಕ ವೇಕೆನ್ಸಿಗಳು ಇವೆ, ಪ್ರಮೋಷನ್ ಕೊಟ್ಟಿಲ್ಲ. ಇವೆಲ್ಲ ಆಗಬೇಕಾದರೆ ಸರ್ಕಾರದಲ್ಲಿ ಹಣದ ಕೊರತೆ ಕೂಡ ಇವೆ. ಈಗ ಕೊರತೆ ಸ್ವಲ್ಪ ಸ್ವಲ್ಪ ಕಡಿಮೆಯಾಗಲಿಕ್ಕೆ ಹತ್ತಿದೆ. ನಾವು ನಿಜವಾಗಿಯೂ ಪ್ರಯತ್ನ ಮಾಡಿದರೆ, ನಮ್ಮ ಕಾಲಮೇಲೆ ನಾವು ನಿಲ್ಲುವುದು ಸಾಧ್ಯವಿದೆ ಇವೊತ್ತು ಬಾಯ್ಲರ್ ಫ್ಯಾಕ್ಟರಿ ಇ.ಎಸ್.ಐ. ಇವುಗಳನ್ನೆಲ್ಲಾ ಸರಿಯಾಗಿ ಸಕ್ರಮಗೊಳಿಸಿದರೆ, ನಮ್ಮ ಟ್ರೆಜರಿಗೆ ನಮ್ಮ ಫೈನಾನ್ಸ್‌ನವರಿಗೆ ಭಾರವಾಗದಂತೆ ಈ ಡಿಪಾರ್ಟ್‌ಮೆಂಟ್‌ಗಳನ್ನು ನಡೆಸುವುದು ಸಾಧ್ಯ. ಆ ದೃಷ್ಟಿಯಿಂದ ನಾನು ವಿವೇಚನೆ ಮಾಡಲಿಕ್ಕೆ ಹತ್ತಿದ್ದೇನೆ. ಹೆಚ್ಚು ಜನರನ್ನು ಯಾವ ರೀತಿಯಾಗಿ ಸೇರಿಸಿಕೊಳ್ಳಬೇಕು ಮತ್ತು ತ್ವರಿತವಾಗಿ ಹೇಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನುವ ಕಡೆ ನನ್ನ ಗಮನ ಇದೆ. ಅದಕ್ಕೆ ತಮ್ಮ ಸಲಹೆಗಳು ಏನಾದರೂ ಇದ್ದರೆ, ಇಂದು ಮಾತನಾಡದೇ ಇರತಕ್ಕ ಸದಸ್ಯರು ಸಹ ನನಗೆ ಸಲಹೆಗಳನ್ನು ಕೊಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದು ಆದನಂತರ ಲೇಬರ್

ಡಿಸ್‌ಪ್ಯೂಟ್ ಬಗ್ಗೆ ಬಹಳ ವಿವರಣೆಯನ್ನು ಹೇಳಿದಿರಿ, ನನಗೆ ಬಹಳ ಸಂತೋಷ ಅನಿಸಿತು. ಪ್ರತಿಯೊಬ್ಬ ಸದಸ್ಯರು ಸಹ ಈ ವಿಷಯವಾಗಿ ಹೆಚ್ಚು ಆಸ್ಥೆ ವಹಿಸಿ ಹೇಳಿದ್ದಾರೆ. ಇವತ್ತು ಲೇಬರ್ ಕೇಸಸ್ ಪೆಂಡಿಂಗ್ ಎಷ್ಟು ಇದೆ ಎಂದು ಹೇಳಿದರೆ ಎಲ್ಲರ ಮನಸ್ಸು ವ್ಯಸನವಾಗುವ ರೀತಿಯಲ್ಲಿ ಆಗುತ್ತದೆ ಅದಕ್ಕಾಗಿ ಲೇಬರ್ ಕೋರ್ಟ್‌ಗಳನ್ನು ಹೆಚ್ಚು ಮಾಡಬೇಕೆಂದು ಅನಿಸುತ್ತದೆ. ಈಗ ಲೇಬರ್ ಕೋರ್ಟ್‌ಗಳನ್ನು ಬರೀ ಹೆಚ್ಚು ಮಾಡಿದರೂ ಆಗುವುದಿಲ್ಲ, ಏಕೆಂದರೆ ಈಗ ಮಂದಗತಿಯಲ್ಲಿ ಅವು ವೇಗದಲ್ಲಿ ಹೋಗುತ್ತಿದೆ. ಅದಕ್ಕೋಸ್ಕರ ಈ ಅದಾಲತ್ ಕೋರ್ಟ್ ಹೇಗೆ ಮಾಡುತ್ತೇವೆ, ಹಾಗೆ ಮಾಡಿ ಸಣ್ಣ ಸಣ್ಣ ನ್ಯಾಯಾಲಯದಲ್ಲಿ ಬಹಳ ದಿವಸಗಳ ತನಕ ಇಟ್ಟುಕೊಂಡು ಜನರಿಗೆ ತೊಂದರೆಯಾಗಿರುವುದನ್ನು ತಪ್ಪಿಸಬೇಕೆನ್ನುವ ದೃಷ್ಟಿಯಿಂದ ಈ ಅದಾಲತ್ ಸಿಸ್ಟಮ್ ಏತಕ್ಕೆ ತರಬಾರದು ಎಂದು ನಾನು ವಿಚಾರ ಮಾಡಿದ್ದೇನೆ.

೨–೦೦ ಪಿ. ಎಂ.

ಅದಕ್ಕೆ ಸಚಿವ ಸಂಪುಟದವರು ಒಪ್ಪಿದರೆ ಇದೇ ವರ್ಷ ಅದಾಲತ್ ಸಿಸ್ಟಂ ಅನ್ನು ತರಬೇಕೆಂಬ ಆಶಯ ಇದೆ. ಅದು ಬಂದರೆ ಸುಮಾರು ಒಂದು ವರ್ಷದೊಳಗೆ ಬಹುಸಂಖ್ಯಾತ ಕೇಸುಗಳನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಮತ್ತೆ ತಮ್ಮೆಲ್ಲರಿಗೂ ಗೊತ್ತಿದೆ. ಯಾವುದೇ ಒಂದು ವಿಷಯ ವಿದ್ದರೂ ಸಹ Committed judges are necessary. Judicial Judges may be there. ಅದು ಯಾವಾಗ ಅಂದರೆ, ನ್ಯಾಯವನ್ನು ಬರೀ ಜ್ಯುಡಿಷಿಯಲ್ ಎಂದರೆ ಎರಡೂ ಕಡೆಯುವರೂ ತೂಗಿ ನೋಡಿ ಪ್ರಯತ್ನ ಮಾಡಿ ಕೊಡುವಂತವರು ಇದ್ದರೆ ಅದು ಆಗುತ್ತದೆ. ಅದು ಇಲ್ಲದೆ ಇದ್ದಾಗ ಒಬ್ಬ ಅಬಲ ಒಬ್ಬ ಸಬಲ ಇದ್ದಾಗ ನಾವು ಜ್ಯುಡಿಷಿಯಲ್ ಎದುರಿಗೆ ಅವನನ್ನು ನಿಲ್ಲಿಸುತ್ತೇವೆಂದು ಹೇಳಿದರೆ ೨೮ ಸಾಕ್ಷಿಗಳನ್ನು ತಂದು ನಿಲ್ಲಿಸಿದಾಗ ಆ ಸಾಕ್ಷಿಗಳನ್ನು ಕ್ರಾಸ್ ಮಾಡಲಿಕ್ಕೆ ದೊಡ್ಡ ದೊಡ್ಡ ಲಾಯರ್‌ಗಳು ಬಂದು ಪ್ರಶ್ನೆ ಕೇಳಿದರೆ ಬಡವ ಏನು ಮಾಡಬೇಕಾಗುತ್ತದೆ. ಅಂತಹ ಹೊತ್ತಿನಲ್ಲಿ ನಾವು ಈ ಅದಾಲತ್ ಸಿಸ್ಟಂಗೆ ಅಂದರೆ ಕಮಿಟೆಡ್ ಜಡ್ಜಸ್‌ಗೆ ಮೊರೆ ಹೋಗಬೇಕಾಗುತ್ತದೆ. ನಮ್ಮಲ್ಲಿರತಕ್ಕಂತಹ ಕಾರ್ಯಕರ್ತರನ್ನೇ ಅಂದರೆ ಕಾರ್ಮಿಕರ ವಿಷಯದಲ್ಲಿ ತಜ್ಞರಾದಂತಹವರನ್ನು ಕಾರ್ಮಿಕರ ವಿಷಯದಲ್ಲಿ ಅನುಭವ ಉಳ್ಳವರನ್ನು ಮತ್ತು ಕಾರ್ಮಿಕರ ಬಗ್ಗೆ ಚಿಂತನೆ ಉಳ್ಳವರನ್ನು ನಾವು ನೇಮಿಸಿದರೆ ಅವರು ನಿಜವಾಗಿ ತೀವ್ರಗತಿಯಿಂದ ನ್ಯಾಯವನ್ನು ಕೊಡಬಹುದು ಅವರು ತೀವ್ರ ಗತಿಯಿಂದ ನ್ಯಾಯಕೊಡುವುದರಿಂದ ಕಾರ್ಮಿಕರ ಹಿತವಾಗುತ್ತದೆ.

"Justice delayed is justice denied",

ಈ ಮಾತನ್ನೇ ಅನೇಕ ಸದಸ್ಯರು ಹೇಳಿದ್ದಾರೆ, ನಿಜ. ಈಗ ಜಸ್ಟೀಸ್ ಡಿಲೇ ಆಗಿದೆ. ಇವತ್ತು ಸಾವಿರಾರು ಕೇಸುಗಳು ಹಾಗೇ ಬಾಕಿ ಉಳಿದಿವೆ. ಇದು ನಮ್ಮ ಕೈಯಲ್ಲಿ ಇಲ್ಲ. ಹೈಕೋರ್ಟ್‌ನವರು ಕೊಡತಕ್ಕಂತಹ ಒಬ್ಬ ನ್ಯಾಯಾಧೀಶರು ಅಲ್ಲಿ ಕೊಡುತ್ತಾರೆ. ಅವರು ನಿರ್ಣಯಗಳನ್ನು ಕೊಡುತ್ತಾರೆ. ಆ ನಿರ್ಣಯಗಳನ್ನು ಅಮಲಿನಲ್ಲಿ ತರುವಂತ ಕಾರ್ಯ ಆಗುವುದರೊಳಗೆ ೧೦–೧೨ ವರ್ಷಗಳಾಗುತ್ತದೆ. ಇದರ ಸಲುವಾಗಿ ತಮ್ಮೆಲ್ಲರ ಬೆಂಬಲವನ್ನು ಕೋರುತ್ತಿದ್ದೇನೆ. ಅದಾಲತ್ ಸಿಸ್ಟಂ ಅನ್ನು ನಾವು ಈ ಲೇಬರ್ ಆರ್ಗನೈಸೇಷನ್‌ನಲ್ಲಿ ಅಮಲಿನಲ್ಲಿ ತರಬೇಕೆಂದು ನನ್ನ ಆಶಯ ಇದೆ. ಅದಕ್ಕೆ ತಾವೆಲ್ಲರೂ ಬೆಂಬಲವನ್ನು ಕೊಡಬೇಕು. ಇನ್ನು ಮಾನ್ಯ ಸಿಂಧ್ಯರವರು ಮತ್ತು ಅನೇಕ ಸದಸ್ಯರು ಐ.ಟಿ.ಐ. ಬಗ್ಗೆ ಹೇಳಿದರು. ಇವತ್ತು ನಮ್ಮಲ್ಲಿ ೩೪ ಐ.ಟಿ.ಐ. ತರಬೇತಿ ಕೇಂದ್ರಗಳು ಇವೆ. ನಮ್ಮಲ್ಲಿ ಕನಿಷ್ಠ ಪಕ್ಷ ಒಂದು ತಾಲ್ಲೂಕಿಗೆ ಒಂದು ಇರಬೇಕೆಂದು ಹೇಳಿದರೆ ನಮ್ಮ ಶಕ್ತಿ ಅಷ್ಟು ಸಮರ್ಥನೀಯವಾಗಿ ಇನ್ನೂ ಬೆಳೆದಿಲ್ಲ. ಕನಿಷ್ಠ ಸಬ್ ಡಿವಿಜನ್‌ಗೆ ಒಂದಾದರೂ ಇರಬೇಕೆಂದು ಹೇಳಿದರೆ ಅದೂ ಕೂಡ ಇರಲಿಕ್ಕೆ ಆಗುವುದಿಲ್ಲ. ೪೭ ಸಬ್ ಡಿವಿಜನ್‌ಗಳು ಇವೆ. ಒಂದೊಂದು ಸಬ್‌ಡಿವಿಷನ್‌ಗೆ ಒಂದೊಂದರಂತೆ ಮಾಡಿದರೂ ಸಹ ೪೭ ಆಗಬೇಕು. ಈಗ ನಮ್ಮಲ್ಲಿ ೩೪ ಮಾತ್ರ ಇವೆ. ಈ ವರ್ಷ ವಿಶ್ವಬ್ಯಾಂಕ್‌ನಿಂದ ಬರತಕ್ಕಂತಹ ಒಂದು ಸ್ಕೀಮಿನ ಅನ್ವಯ ಕೇಂದ್ರ ಸರಕಾರದವರು ಕೊಟ್ಟಿರುವಂತಹ ಸ್ಕೀಮನ್ನು ಅನುಸರಿಸಿ ಹತ್ತು ಹೊಸ ಸೆಂಟರ್‌ಗಳನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಿದೆ. ಇನ್ನು ೩೪ ಅನ್ನು ನಮ್ಮ ಹಣದಿಂದ ಮಾಡಿ ಒಂದೊಂದು ಸಬ್ ಡಿವಿಜನ್‌ಗೆ ಒಂದೊಂದಾದರೂ ಈ ವರ್ಷ ಮಾಡಬೇಕೆಂಬ ಆಶಯ ಇದೆ. ಇದಕ್ಕೆ ತಮ್ಮೆಲ್ಲರ ಸಹಕಾರವನ್ನೂ ನಾನು ಕೊಡುತ್ತೇನೆ. ನಾನು ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಏನೂ ಹೇಳದಿದ್ದರೆ ಅದು ಸರಿಯಾಗುವುದಿಲ್ಲ. ಇವತ್ತು ನಾನು ಮಂತ್ರಿಯಾಗಿರಬಹುದು ನಾನು ಮಂತ್ರಿಯಾಗುವುದಕ್ಕಿಂತ ಮೊದಲಿನ ಅನುಭವ ನನ್ನ ಹತ್ತಿರ ಇರುವುದರಿಂದ ಅದನ್ನು ಮುಚ್ಚಿಟ್ಟು ಇದನ್ನು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ನಾಮಮಾತ್ರವಾಗಿ ಇದೆಯೇ ವಿನಃ ಕಾರ್ಮಿಕರಿಗೆ ಅನುಕೂಲ

ವಾಗುವ ದೃಷ್ಟಿಯಿಂದ ಕೆಲಸ ಮಾಡುವುದಿಲ್ಲ. ಅಲ್ಲಿ ಸ್ವಲ್ಪ ಅಪ್ರೆಂಟೀಸ್ ಮೆಂಬರ್ಸ್ ಬೇಕಾಗುತ್ತದೆ, ನಾನು ನಮ್ಮ ಕಮೀಷನರಿಗೆ ಕಾರ್ಯದರ್ಶಿಯವರಿಗೆ ಅದನ್ನು ಚುರುಕುಗೊಳಿಸಲಿಕ್ಕೆ ಹೇಳಿದ್ದೇನೆ. ಇದನ್ನು ಹೇಗೆ ಚುರುಕುಗೊಳಿಸಬೇಕೆಂಬುದು ಅವರ ಸಮಸ್ಯೆಯಾಗಿರಬಹುದು. ಇವತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕಛೇರಿ ಎಂದರೆ ಯಾವನಾದರೂ ಬಂದು ಸಾಲಿಗೆ ನಿಂತು ಇವರು ಹೇಳಿದ ಹಾಗೆ ಬರೆದು ಹೆಸರು ಕೊಟ್ಟು ಬುಕ್‌ನಲ್ಲಿ ರಿಜಿಸ್ಟರ್ ಮಾಡಿ ಇಟ್ಟರೆ ಕೆಲಸ ಮುಗಿಯಿತು ಎಂದು ತಿಳಿದುಕೊಳ್ಳುತ್ತಾರೆ. ಅನೇಕ ಸಂದರ್ಭಗಳಲ್ಲಿ ಎಲ್ಲಿ ವೇಕೆನ್ಸಿ ಇದೆ ಅಲ್ಲಿ ಕೇಳಿದರೆ ಹಾಳೆ ಪ್ರಕಾರ ಕಳಿಸುತ್ತೇನೆ ಎಂದು ಬೇರೆ ಬೇರೆ ರೀತಿಯಿಂದ ಹೇಳಿಕಳಿಸಿದಂತಹ ಉದಾಹರಣೆಗಳು ನಮ್ಮಲ್ಲಿವೆ. ಅವೆಲ್ಲಾ ಬದಲಾವಣೆಯಾಗಬೇಕು. ಆದರೆ ಒಂದೇ ಒಂದು ದಿವಸದಲ್ಲಿ ಇದೆಲ್ಲವೂ ಬದಲಾವಣೆ ಆಗುವುದಿಲ್ಲ. ತಾವು ಸ್ವಲ್ಪ ತಾಳ್ಮೆಯಿಂದ ಇರಬೇಕೆಂದು ಹೇಳಬಯಸುತ್ತೇನೆ. ಸುಧಾರಣೆಯನ್ನು ಮಾಡುವ ಮನಸ್ಸಿಗೆ ಆದರೆ ಆ ಮನಸ್ಸಿಗೆ ಸರಿಯಾದ ವೇಗ ಬರಬೇಕು. ಇಷ್ಟು ದಿವಸ ಮಂದಗತಿಯಿಂದ ಬಾಣಂತಿಯರ ವೇಗದಿಂದ ಹೊರಟಿದ್ದರು. ಆ ವೇಗ ನಮ್ಮ ವೇಗಕ್ಕೆ ಮುಟ್ಟುವವರೆಗೂ ನಾವು ಕಾಯಬೇಕು. ಒಮ್ಮೆಗೆ ನಾವು ಅವರನ್ನು ಶಿಸ್ತಿಗೆ ಒಳಪಡಿಸುವುದು ಸೂಕ್ತವಲ್ಲ. ಆ ದೃಷ್ಟಿಯಿಂದ ತಮಗೆ ಸಹನೆ ಇರಬೇಕು. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಕಂಪ್ಯೂಟರೈಸೇಷನ್‌ನ್ನು ಮಾಡಿ ಯಾರಿಗೂ ಅನ್ಯಾಯ ಆಗದಂತೆ ಮೇಲಿಂದ ಮೇಲೆ ಸೂಪರ್‌ವಿಷನ್ ಮಾಡಿಸಿ ಒಂದೊಂದು ಡಿವಿಜನ್‌ಗೆ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸನ್ನು ಮಾಡಿ ಅಲ್ಲಿ ಕಂಪ್ಯೂಟರೈಸೇಷನ್ ಪದ್ಧತಿಯನ್ನು ಅಮಲಿನಲ್ಲಿ ತಂದು ಅಲ್ಲಿಯ ಜನರಿಗೆ ಹೆಚ್ಚು ತ್ವರಿತಗತಿಯಲ್ಲಿ ಅನುಕೂಲ ಮಾಡಿಕೊಡಬೇಕು. ಎಂದು ನಾನು ಆಶೆ ಮಾಡುತ್ತೇನೆ. ಇದೂ ಅಲ್ಲದೆ ಹೆಣ್ಣುಮಕ್ಕಳಿಗಾಗಿ ಒಂದು ಪ್ರತ್ಯೇಕ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಗಬೇಕಾದ್ದು ಅವಶ್ಯಕವಿದೆ. ಮತ್ತೆ ಅಂಗವಿಕಲರಿಗೋಸ್ಕರ ಒಂದು ಪ್ರತ್ಯೇಕ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇದ್ದರೂ ಕೂಡ ಅಲ್ಲಿ ನಿಜವಾಗಿ ಅಂಗವಿಕಲರಿಗೆ ಸರಿಯಾದ ನ್ಯಾಯ ಸಿಕ್ಕುತ್ತಿಲ್ಲ. ಅವರು ಅಂಗವಿಕಲರ ಅಡ್ರೆಸ್‌ನ್ನು ತೆಗೆದುಕೊಂಡು ಮೇಲಿಂದ ಮೇಲೆ ಪತ್ರಗಳನ್ನು ಬರೆದು ಎಲ್ಲೆಲ್ಲಿ ಸ್ಥಳ ಖಾಲಿ ಇವೆ ಎಂಬುದನ್ನು ನೋಡಿ ಅದನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರು ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಟ್ರೈನಿಂಗ್ ಸೆಂಟರ್‌ಗಳನ್ನು ಮಾಡಬೇಕು. ಈ ಟ್ರೈನಿಂಗ್ ಸೆಂಟರ್‌ಗಳನ್ನು ಮಾಡುವಾಗ ಯಾವ ರೀತಿಯ ಟ್ರೈನಿಂಗ್ ಇರಬೇಕೆಂಬುದನ್ನು ನೋಡಬೇಕು. ನಮ್ಮಲ್ಲಿ ಅನೇಕರೀತಿಯ ಟ್ರೈನಿಂಗ್‌ಗಳಿವೆ. ಇವತ್ತು ಐ.ಟಿ.ಐ. ಟ್ರೈನಿಂಗ್ ಯಾವ ಬೇಸಿಸ್ ಮೇಲೆ ಬಂದಿದೆ ಎಂದರೆ ಮಹಾತ್ಮ ಗಾಂಧಿಯವರು ಸೆಲ್ಫ್ ಎಂಪ್ಲಾಯ್‌ಮೆಂಟ್ ಟ್ರೈನಿಂಗ್ ಸ್ಕೀಂ ಎಂದು ಏನು ಹೇಳಿದ್ದರು ಅದನ್ನು ಅನುಸರಿಸಿ ಮಾಡಿದ್ದೇವೆ. ಆದರೆ ಈ ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್‌ನವರು ಟ್ರೈನಿಂಗ್ ಕೊಡುವಾಗ, ಐ.ಟಿ.ಐ.ನವರು ಕೊಡುವಾಗ ಅದಕ್ಕನುಗುಣವಾಗಿ ಟ್ರೈನಿಂಗ್ ಕೊಡಬೇಕೆಂಬುದೇ ನಮ್ಮ ಉದ್ದೇಶ. ಅಲ್ಲಿ ಪಾಸ್ ಆದವರು ನೌಕರಿಗಿಂತ ಹೆಚ್ಚು ಉದ್ದಿಮೆಯನ್ನು ಮಾಡುವಂತಹವರಾಗಿರಬೇಕು. ಇವರು ಪಾಸ್ ಆದಕೂಡಲೇ ನೌಕರಿ ಮಾರ್ಗವನ್ನು ತೋರಿಸುವುದಕ್ಕೆ ಬದಲಾಗಿ, ಕೆ.ಎಸ್.ಎಫ್.ಸಿ, ಅಥವಾ ಕೆ.ಎಸ್.ಐ.ಐ.ಡಿ.ಸಿ.ಯವರಿಗೆ, ನೀವು ಅವರಿಗೆ ಸಾಲ ಕೊಡಿ ಇಲ್ಲಿ ಪಾಸ್ ಆದವರಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕು. ಯಾವುದೇ ಷರತ್ತು ಇಲ್ಲದೆ ನೂರಕ್ಕೆ ೯೫ ರಷ್ಟು ಸಾಲವನ್ನು ಕೊಡಬೇಕು ಎನ್ನುವಂಥ ದೃಷ್ಟಿಯಿಂದ ನಾವು ವ್ಯವಸ್ಥೆ ಮಾಡಬೇಕು. ಅದಕ್ಕೆ ಅನುಗುಣವಾಗಿ ಒಬ್ಬ ಪ್ರೊಜೆಕ್ಟ್ ಆಫೀಸರೂ ಇರಬೇಕು. ವಿದ್ಯಾರ್ಥಿ ಪಾಸಾದ ಕೂಡಲೆ ಯಾವ ಪ್ರೊಜೆಕ್ಟ್ ಅವನಿಗೆ ಕೊಡಬೇಕು ಎನ್ನುವಂಥ ದೃಷ್ಟಿಯಲ್ಲಿ ಹೋದರೆ ಮಾತ್ರ ಈ ಟ್ರೈನಿಂಗ್ ಸಮರ್ಥನೀಯವಾಗುತ್ತದೆ. ಇದನ್ನು ಮಾಡಬೇಕೆಂದು ನನ್ನ ಆಶಯವಿದೆ. ಆದರೆ ಅದಕ್ಕೆ ಇನ್ನೂ ಯಾವುದೇ ಕಾರ್ಯಕ್ರಮವನ್ನೂ ನಾವು ಹಾಕಿಕೊಂಡಿಲ್ಲ. ನಾನು ಇಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ನಾನು ಒಮ್ಮೆ ಪಂಜಾಬಿಗೆ ಹೋಗಿದ್ದೆ. ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಿಯ ಆ್ಯಕ್ಟ್ ಬದಲಾವಣೆ ಬಗ್ಗೆ ಒಂದು ಕಮಿಟಿ ಮಾಡಿದ್ದರು. ಆಗ ಪಂಜಾಬಿಗೆ ಹೋಗಿದ್ದೆ. ಪಂಜಾಬಿನಲ್ಲಿ ಎ.ಪಿ.ಎಂ.ಸಿ. ಬೋರ್ಡ್‌ನವರು ರೈತರ, ಕೂಲಿಕಾರರ ವರ್ಗದವರಿಗೆ ಸಾಮೂಹಿಕವಾಗಿ ಇನ್‌ಷ್ಯೂರೆನ್ಸ್ ವ್ಯವಸ್ಥೆಯನ್ನು ಮಾಡಿದ್ದಾರೆ. ಯಾರಾದರೂ ಒಬ್ಬ ರೈತ ಹೊಲದಲ್ಲಿ ಕೆಲಸ ಮಾಡುವಾಗ ಹೆಂಟೆ, ಕುಂಟೆ ಮುಂತಾದವು ಏನಾದರೂ ತಗುಲಿ ಗಾಯಗಳಾದರೆ ಅದಕ್ಕೆ ಇನ್‌ಷ್ಯೂರೆನ್ಸ್ ವ್ಯವಸ್ಥೆ ಇದೆ. ರೈತನ ಹೆಂಡತಿ ಹೊಲಕ್ಕೆ ತನ್ನ ಗಂಡನಿಗೆ ಊಟವನ್ನು ಒಯ್ಯುವಾಗ ದಾರಿಯಲ್ಲಿ ಏನಾದರೂ ಹಾವು ಕಡಿದು ಸತ್ತರೆ ಅದಕ್ಕೆ ಇನ್‌ಷ್ಯೂರೆನ್ಸ್ ವ್ಯವಸ್ಥೆ ಇದೆ. ಅಲ್ಲಿ ರೈತನಿಗೆ, ರೈತನ ಮಕ್ಕಳಿಗೆ, ಹೆಂಡತಿಗೆ ಎಲ್ಲರಿಗೂ ಸಾಮೂಹಿಕ ಇನ್‌ಷ್ಯೂರೆನ್ಸ್ ವ್ಯವಸ್ಥೆ ಇದೆ.

ಅದೇರೀತಿ ನಾವೂ ಕೂಡ ಇಲ್ಲಿ ನಮ್ಮ ಕೂಲಿಕಾರರಿಗೆ ರೈತರ ಕುಟುಂಬದವರಿಗೆ ಇನ್‌ಷ್ಯೂರೆನ್ಸ್ ವ್ಯವಸ್ಥೆ ಏತಕ್ಕೆ ಮಾಡಬಾರದೆಂಬ ಆಲೋಚನೆ ಇದೆ, ಈ ಬಗ್ಗೆ ನಾನು ಈಗಾಗಲೇ ಇನ್‌ಷ್ಯೂರೆನ್ಸ್ ಕಂಪೆನಿಯವರಿಗೆ ತಿಳಿಸಿದ್ದೇನೆ. ಅವರು ಬಂದಕೂಡಲೇ ಆಲೋಚನೆ ಮಾಡಿ ಯಾವ ರೀತಿಯ ಸ್ಕೀಮನ್ನು ಮಾಡಿದರೆ ಅನುಕೂಲವಾಗುತ್ತದೆ. ಸರ್ಕಾರ ಇದರಲ್ಲಿ ಎಷ್ಟರಮಟ್ಟಿಗೆ ಪಾಲ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಇಂಡಸ್ಟ್ರಿ ಎಷ್ಟರ ಮಟ್ಟಿಗೆ ಪಾಲು ತೆಗೆದುಕೊಳ್ಳಲಿಕ್ಕೆ ಆಗುತ್ತದೆ. ಎಷ್ಟರ ಮಟ್ಟಿಗೆ ಕೂಲಿಗಾರರ ಹೊಣೆಯಾಗುತ್ತದೆ. ಇನ್ನೂ ಮುಂತಾದುವನ್ನು ಪರಿಶೀಲಿಸಿ ಒಂದು ಸಾಮೂಹಿಕ ಇನ್‌ಷ್ಯೂರೆನ್ಸ್ ಸ್ಕೀಂ ಮಾಡಬೇಕೆಂದು ಆಶಿಸಿದ್ದೇನೆ. ಇದೂ ಅಲ್ಲದೆ ಇ.ಎಸ್.ಐ ಸ್ಕೀಂ ನಲ್ಲಿ ನಮ್ಮ ಸರ್ಕಾರಕ್ಕಿಂತ ಹೆಚ್ಚಿನ ಸಹಾಯ ಸೌಲಭ್ಯಗಳನ್ನು ಕೊಡುವುದಕ್ಕೆ ಯಾರಾದರೂ ಮುಂದೆ ಬಂದರೆ ಇನ್‌ಷ್ಯೂರೆನ್ಸ್ ಮಾಡಿಸುತ್ತೇವೆಂದು ಮುಂದೆ ಬಂದರೆ ಅಂಥವರ ಸಲುವಾಗಿ ನಾವು ಹೆಚ್ಚಿನ ಹಣವನ್ನು ತೆಗೆದುಕೊಂಡು ಲಾಭ ಮಾಡುವುದರ ಬದಲು ಅವರಿಗೆ ಎಕ್ಸ್‌ಟೆನ್‌ಷನ್ ಸಹಿತ ಕೊಟ್ಟು ರೈತರ ಕಲ್ಯಾಣ ಆಗುವಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಉದ್ದೇಶ ನಮ್ಮ ಸರ್ಕಾರಕ್ಕಿದೆ.

ಆದರೆ ಇದು ಕೇವಲ ನಮ್ಮಿಂದಲೇ ಸಾಧ್ಯವಿಲ್ಲ. ಇ ಎಸ್.ಐ. ಸ್ಕೀಂ ಸೆಂಟ್ರಲ್ ಗವರ್ನಮೆಂಟ್‌ನಿಂದ ಬರತಕ್ಕ ಸ್ಕೀಂ. ಕೊಡತಕ್ಕ ಹಣವನ್ನು ವಸೂಲ್ಮಾಡುವವರು ನಾವಾದರೂ ಕೊಡುವವರು ಕೇಂದ್ರ ಸರ್ಕಾರದವರು ಸುಮಾರು ೯ ಕೋಟಿ ರೂಪಾಯಿ ಉತ್ಪನ್ನ ಇ. ಎಸ್. ಐ. ನಿಂದ ಆಗುತ್ತಿದ್ದರೆ ನಮಗೆ ಖರ್ಚಾಗುತ್ತಿದ್ದರೆ ನಮಗೆ ಖರ್ಚಾಗುವುದು ಕೇವಲ ೩ ಕೋಟಿ ಉಳಿದ ೬ ಕೋಟಿ ರೂಪಾಯಿ ಹಣ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ, ಇದನ್ನು ನಾವು ಲಕ್ಷ್ಯದಲ್ಲಿಡಬೇಕು ಇ.ಎಸ್.ಐ. ಆಸ್ಪತ್ರೆಗಳು ಎಲ್ಲಾ ಕಡೆಗೂ ಸರಿಯಾದ ಸ್ಥಿತಿಯಲ್ಲಿಲ್ಲ. ಕೇವಲ ಇಂದಿರಾ ನಗರದಲ್ಲಿ ಒಂದು ಆಸ್ಪತ್ರೆ ಚಲೋ ಇದ್ದರೆ ಎಷ್ಟು ಜನರಿಗೆ ಅನುಕೂಲ ಸಿಗುತ್ತದೆ. ಉದಾಹರಣೆಗೆ ನಮ್ಮ ಊರಿನದೊಂದನ್ನು ಹೇಳುತ್ತೇನೆ. ಕಾನೂನುಸಂಬದ್ಧವಾಗಿ ಇ.ಎಸ್.ಐ, ಆಸ್ಪತ್ರೆ ಎಂದು ಹೇಳಿದ್ದಾರೆ. ಅಲ್ಲಿ ಯಾರೋ ಒಬ್ಬ ವೈದ್ಯರಿದ್ದಾರೆ. ಅವನು ಬಹಳ ಹೊತ್ತು ಏನೇನೋ ಆಗಿರುತ್ತಾನೆ. ಸ್ವಲ್ಪ ಹೊತ್ತು ಬರಾಬರ್ ಇರುತ್ತಾನೆ. ಅವನು ೩ ಸಾವಿರ ಲೇಬರರ್ಸ್‌ನ್ನು ನೋಡಬೇಕೆಂದರೆ ಹೇಗೆ ಸಾಧ್ಯ. ನಾನು ಮಂತ್ರಿಯಾಗುವುದಕ್ಕೆ ಮೊದಲು ನೋಡಿದ ಉದಾಹರಣೆಯನ್ನು ಅನುಭವವನ್ನು ಹೇಳಿದೆ, ಆ ದೃಷ್ಟಿಯಿಂದ ಇವತ್ತು ಇಎಸ್ಐ ಸರ್ವೀಸನ್ನು ತ್ವರಿತ ರೀತಿಯಿಂದ ಮತ್ತು ಕ್ರಿಯಾತ್ಮಕವಾಗಿ ಕಾರ್ಮಿಕರಿಗೆ ಮುಟ್ಟಿಸಬೇಕೆಂಬುದು ನನ್ನ ಮನದ ಇಚ್ಛೆ. ಅದಕ್ಕಾಗಿ ಈವರೆಗೆ ನೀವು ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಿಜವಾಗಿಯೂ ಲೇಬರ್ ಆರ್ಗನೈಸೇಷನ್‌ನ ಸುಧಾರಣೆ ಕಡೆಗೆ ಗಮನ ಕೊಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇಷ್ಟೇ ಅಲ್ಲ ಮಾನ್ಯ ಸದಸ್ಯರು ಹೇಳಿದ ಪ್ರತಿ ಒಂದು ವಾಕ್ಯವನ್ನು ಬರೆದು ಕೊಂಡಿದ್ದೇನೆ. ಎಲ್ಲವನ್ನು ಹೇಳಬೇಕಾದರೆ ಸುಮಾರು ೨ ಗಂಟೆ ವರೆಗೆ ನಾನು ಭಾಷಣ ಮಾಡಬೇಕಾಗುತ್ತದೆ. ಆ ಹವ್ಯಾಸಕ್ಕೆ ನಾನು ಹೋಗುವುದಿಲ್ಲ. ಒಂದು ಮಾತನ್ನು ನಿಮಗೆ ಹೇಳುತ್ತಿದ್ದೇನೆ. ನೀವು ಹೇಳಿದ ಪ್ರತಿಯೊಂದು ವಾಕ್ಯವನ್ನು ಸಹ ನಾನು ಗಮನದಲ್ಲಿಟ್ಟುಕೊಂಡು ಸರ್ಕಾರದ ವತಿಯಿಂದ ಏನು ಮಾಡಲಿಕ್ಕೆ ಸಾಧ್ಯವಿದೆಯೋ, ನೀವೇ ನನ್ನ ಸ್ಥಾನದಲ್ಲಿದ್ದರೆ ಏನು ಮಾಡುತ್ತಿದ್ದಿರೋ ಅದನ್ನೆಲ್ಲಾ ತಪ್ಪದೆ ಮಾಡುತ್ತೇನೆಂಬ ಭರವಸೆಯನ್ನು ನಾನು ಕೊಡಲಿಕ್ಕೆ ಇಚ್ಛಿಸುತ್ತೇನೆ.

ಇನ್ನು ಎಂಡೋಮೆಂಟ್ ವಿಷಯಕ್ಕೆ ಬರೋಣ. ಇದು ಒಂದು ಕರ್ಮಯೋಗಿಗಳ ನಾಡು, ಈ ಎಂಡೋಮೆಂಟ್ ಭಕ್ತಿಯೋಗಿಗಳ ನಾಡು. ಈ ಭಕ್ತಿ ಯೋಗಿಗಳ ನಾಡು ಹೇಗಿದೆ ಎಂದರೆ ೪೭ಸಾವಿರ ದೇವಾಲಯಗಳು ಈ ಎಂಡೋಮೆಂಟ್ ಕಮಿಷನ್ ಕಕ್ಷೆಯೊಳಗಿವೆ. ಆ ದೇವಾಲಯಗಳ ಸ್ಥಿತಿ ಏನಾಗಿದೆ ಎಂಬುವನ್ನು ದೇವರೇ ಕಾಯಬೇಕು. ದೊಡ್ಡ ದೊಡ್ಡ ದೇವಾಲಯಗಳಲ್ಲಿ ದೇವಾಲಯದ ಸುತ್ತಲೂ ನೋಡತಕ್ಕ ಗಲೀಜು ನೋಡಲಿಕ್ಕೆ ಆಗುವುದಿಲ್ಲ. ನಾನು ಮಂತ್ರಿಯಾಗುವುದಕ್ಕೆ ಮೊದಲು ಮೈಸೂರಿನಲ್ಲಿರುವ ಚಾಮುಂಡಿ ಬೆಟ್ಟವನ್ನು ನೋಡುವುದಕ್ಕೆ ಹೋಗಿದ್ದೆ. ನಾನು ದೇವರನ್ನು ನೋಡುವುದಕ್ಕಿಂತ ಹೆಚ್ಚಾಗಿ ಗುಡಿಯನ್ನು ನೋಡುವುದಕ್ಕೆ ಹೋಗಿದ್ದೆ. ಅಲ್ಲಿ ಸಿಗರೇಟ್, ಪಾನ್‌ಬೀಡಿ ಬಜ್ಜಿ ಮಾರುವ ಸಣ್ಣ ಸಣ್ಣ ಅಂಗಡಿಗಳನ್ನು ಹಾಕಿ ಮಾರುತ್ತಿದ್ದರು. ಹೊಲಸು ಇದ್ದುದನ್ನು ಅಲ್ಲೇ ಒಗೆಯುತ್ತಾರೆ. ಚಾಮುಂಡಿ ಬೆಟ್ಟಕ್ಕೆ ದೂರ ದೂರದಿಂದ ಬಂದು ಕೈಮುಗಿಯುವ ಭಕ್ತರು ಒಂದು ಕಡೆಯಾದರೆ ಈ ರೀತಿ ಗಲೀಜು ಮಾಡಿ ಅದನ್ನೇ ನೋಡಿಕೊಂಡು ಸುಮ್ಮನೆ ಇರುವ ನಮ್ಮ ದೇವರ ಸೇವೆಗಾಗಿ ನೇಮಿಸಿದ ವರ್ಗ ಇನ್ನೊಂದು ಕಡೆ. ಇವೆಲ್ಲವನ್ನು ತೂಗಿಸಿಕೊಂಡು ಹೋಗಬೇಕಾಗಿದೆ. ದೇವರ ಹೆಸರಿನಿಂದ ದಾನಿಗಳು ಅನೇಕರು ಬರುತ್ತಿದ್ದಾರೆ, ಭಕ್ತರು ಅನೇಕರು ಬರುತ್ತಿದ್ದಾರೆ. ಕರ್ನಾಟಕ ರಾಜ್ಯ ದೈವೀಸಂಭೂತವಾದ ನಾಡು ಎಂದು ಹೆಸರಾಗಿದೆ. ಎಲ್ಲೆಲ್ಲಿಂದಲೋ ಪ್ರವಾಸಿಗರು

ಬಂದು ದೇವರ ಹೆಸರಿನಲ್ಲಿ ದೇಣಿಗೆಗಳನ್ನು ಕೊಡುತ್ತಿದ್ದಾರೆ. ಮೊನ್ನೆ ಕಳೆದ ಶನಿವಾರ ತಿರುಪತಿಗೆ ಒಬ್ಬ ಭಕ್ತರು ಬಂದು ಒಂದು ಗೆಸ್ಟ್ ಹೌಸನ್ನು ಕಟ್ಟಿಸಿ ಅದನ್ನು ನಿಮ್ಮ ವಶಕ್ಕೆ ಕೊಡುತ್ತೇವೆಂದು ಕೊಟ್ಟರು. ಸುಮಾರು ೫-೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ ಕಟ್ಟಡವನ್ನು ಉದ್ಘಾಟನೆ ಮಾಡುವುದಕ್ಕೆ ನನ್ನನ್ನು ಕರೆದಿದ್ದರು, ಹೋಗಿದ್ದೆ. ನಾನು ಹೋದನಂತರ ಹಿಂದಿನ ಮತ್ತು ಇಂದಿನ ಸ್ಥಿತಿಯನ್ನು ನೋಡಿದರೆ ಸ್ವಚ್ಛವಾಗಿತ್ತು. ದೇವರು ಇಲ್ಲಿ ಉಳಿದಿದ್ದಾನೆಂದು ಸಂತೋಷವಾಯಿತು. ಆದರೆ ಹಳೆಯ ಬಿಲ್ಡಿಂಗ್‌ಗಳು ಇನ್ನೂ ಅದೇ ರೀತಿ ಇದೆ. ಅವೆಲ್ಲವನ್ನು ದುರಸ್ತಿ ಮಾಡಬೇಕಾಗಿದೆ. ಅಲ್ಲಿ ಹೋಗತಕ್ಕ ಜನರು ಅಲ್ಲಿರತಕ್ಕ ಮ್ಯಾನೇಜರ್ ಮೇಲೆ ಅನೇಕ ಸಂದರ್ಭಗಳಲ್ಲಿ ನಮಗೆ ಪಿತಕ್ಕೆ ಜಾಗ ಕೊಡುವುದಿಲ್ಲ ಎಂದು ಜಗಳ ಮಾಡುತ್ತಾರೆ. ಏಕೆಂದರೆ, ಹೋಗುವ ಭಕ್ತರ ಸಂಖ್ಯೆ ಹೆಚ್ಚು. ಅಲ್ಲಿರತಕ್ಕ ಜಾಗ ಅತೀ ಕಡಿಮೆ. ಸುಮಾರು ೧೦೦ಕ್ಕೆ ೪೦ರಷ್ಟು ಜನ ಕರ್ನಾಟಕದವರು ತಿರುಪತಿಗೆ ಹೋಗುತ್ತಾರೆಂದು ನನಗೆ ತಿಳಿದುಬಂದಿದೆ. ಹಾಗಾದರೆ ಅವರಿಗೆ ಜಾಗ ಎಲ್ಲಿ? ಇರುವಂಥ ಕೆಲವೇ ಛತ್ರಗಳಲ್ಲಿ ಸುಮಾರು ೨೦ರಿಂದ ೫೦ ರೂಪಾಯಿವರೆಗೂ ಚಾರ್ಜ್ ಮಾಡುತ್ತಿದ್ದಾರೆ. ಹಾಗಾದರೆ ಬಡವರ ಗತಿ ಏನು ಎನ್ನುವಂಥ ಮಾತು ವಿಚಾರ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬಡವರಿಂದ ಬರತಕ್ಕ ಚಾರಿಟಿ ಹಣವನ್ನು ಕೊಡಿಡುವ ಬದಲು ಉಪಯೋಗ ಮಾಡಿ ಅಲ್ಲಿ ಒಂದು ದೊಡ್ಡ ಚೌಲ್ಟ್ರಿ ಕಟ್ಟಿದರೆ ಹೆಚ್ಚು ಉಪಯುಕ್ತವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದು ನಾನು ಹೋಗಿಬಂದ ಮರುದಿನವೇ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ತೀವ್ರವಾಗಿಕಟ್ಟಡದ ಕೆಲಸ ಚಾಲೂ ಮಾಡಿ ಎಂದು ಆದೇಶ ಕೊಟ್ಟಿದ್ದೇನೆ. ನೀರಿನ ಅಭಾವ ಇರುವುದರಿಂದ ಇನ್ನೊಂದು ಬೋರ್ ಹಾಕಿ ಎಂದು ಹೇಳಿದ್ದೇನೆ. ಹೀಗೆ ಅನೇಕ ಮಾನ್ಯನೀಯ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಏನಾಗಬೇಕು ಎಂಬುದನ್ನು ಹೇಳಬೇಕು. ಇಂಥ ದೇವಸ್ಥಾನಕ್ಕೆ ದುಡ್ಡು ಕೊಡಿ ಎನ್ನುವ ಬದಲು ಆ ಕ್ಷೇತ್ರದಲ್ಲಿ ಏನಾಗಬೇಕು ಎಂಬುದನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಹೇಗೆ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಆಲೋಚನೆ ಮಾಡಿ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಆ ರೀತಿ ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ದೇವಸ್ಥಾನದಲ್ಲಿ ಮ್ಯಾನೇಜರ್ ಇರಲಿ, ಅರ್ಚಕರಿರಲಿ, ಯಾರೇ ಇರಲಿ ದೇವಸ್ಥಾನದ ಒಳಗೆ ಮತ್ತು ಹೊರಗೆ ಮೊದಲು ಸ್ವಚ್ಛತೆ ಕಾಪಾಡುವುದು ಅವರ ಕರ್ತವ್ಯ. ಸ್ವಚ್ಛತೆ ಇಲ್ಲದೇ ಇದ್ದರೆ, ಅಧ್ಯಕ್ಷತೆಯ ಆಧಾರದ ಮೇಲೆ ಅವರನ್ನು ಸಸ್ಪೆಂಡ್ ಮಾಡಬೇಕೆಂದು ನಾನು ಇವತ್ತಿನ ದಿವಸ ಎಂಡೋಮೆಂಟ್ ಕಮಿಷನರ್ ಅವರಿಗೆ ಆದೇಶ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮಗೆ ಕೊಟ್ಟಿರುವ ಹಣ ಅತೀ ಸ್ವಲ್ಪ. ಆದರ ಬೇಡಿಕೆ ಬಹಳ. ಆದರೂ ಪರ್ವಾಗಿಲ್ಲ, ದೇವರ ಮೇಲೆ ಭಾರ ಹಾಕಿ ಯಾವ ರೀತಿ ಕೊಟ್ಟರೆ ಅನುಕೂಲವಾಗುತ್ತದೆ ಎಂಬುದನ್ನು ಆಲೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಕೋಡ್ ಆಪ್ ಕಾಂಡಕ್ಟ್ ಮಾಡಬೇಕು. ಮನಸ್ಸಿಗೆ ಬಂದಹಾಗೆ ಕೊಡುವುದು ಸರಿಯಲ್ಲ. ಯಾರುಯಾರಿಗೆ ಯಾವ ಯಾವ ಆಧಾರದ ಮೇಲೆ ಕೊಡಬಹುದು ಎಂಬ ಬಗ್ಗೆ ಕೋಡ್ ಆಪ್ ಕಾಂಡಕ್ಟ್ ಮಾಡಲಿಕ್ಕೆ ಈಗಾಗಲೇ ನಾನು ಹೇಳಿದ್ದೇನೆ. ಜನರು ಎಷ್ಟು ಕೂಡಿಸಿ ಕೊಟ್ಟರೆ ನಾವು ಎಷ್ಟು ಕೊಡಬೇಕು ಎಂಬ ಬಗ್ಗೆ ನಿರ್ಧಾರಕ್ಕೆ ಬರೋಣ. ಯಾವ ಯಾವ ತರಹದ ಟೆಂಪಲ್‌ಗೆ ಕೊಡುವುದು ಅತ್ಯಂತ ಅವಶ್ಯಕತೆ ಇದೆ ಎಂಬುದನ್ನು ನೋಡೋಣ. ಪ್ರವಾಸೋದ್ಯಮಗಳ ಸ್ಥಿತಿ ನೋಡಿ ಎಲ್ಲಿ ಜನರು ಬರುತ್ತಾರೆ ಅಂಥ ಕಡೆ ಯಾವ ರೀತಿ ಸಹಾಯ ಮಾಡಬೇಕು ಎಂಬುದನ್ನು ನೋಡೋಣ. ಪರರಾಷ್ಟ್ರದಿಂದ ಮತ್ತು ನಮ್ಮ ಸ್ವರಾಷ್ಟ್ರದಲ್ಲಿ ಪರರಾಜ್ಯಗಳಿಂದ ಜನರು ಬಂದು ದೇವರಿಂದ ಆಕರ್ಷಿತರಾಗುತ್ತಿದ್ದಾರೆ, ಅಂಥವರ ಆಕರ್ಷಣೆಗೆ ಬೇಕಾಗುವಂಥ ಹಣವನ್ನು ವೆಚ್ಚ ಮಾಡೋಣ. ಇವೆಲ್ಲದರ ಕ್ರೋಡೀಕರಣ ಆಗಬೇಕು. ಅಲ್ಲಿಯವರೆಗೆ ಮಾನ್ಯನೀಯ ಸದಸ್ಯರು ತಮ್ಮ ಬೇಡಿಕೆಗಳನ್ನು ಸ್ವಲ್ಪ ಸಸ್ಪೆಂಡ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ರಿಲಿಜಿಯಸ್ ಎಂಡೋಮೆಂಟ್ ಆಕ್ಟ್‌ಗಳು ನಮ್ಮ ರಾಜ್ಯದಲ್ಲಿ ೫ ಇವೆ. ಕೂರ್ಗಿಗೆ ಒಂದು, ಹೈದರಾಬಾದ್ ಕರ್ನಾಟಕಕ್ಕೆ ಒಂದು, ಬಾಂಬೆ–ಕರ್ನಾಟಕಕ್ಕೆ ಒಂದು, ಮೈಸೂರಿಗೆ ಒಂದು, ಮಂಗಳೂರಿಗೆ ಮತ್ತೊಂದು–ಹೀಗೆ ೫ ಆಕ್ಟ್‌ಗಳಿವೆ. ಇದನ್ನೆಲ್ಲಾ ಕ್ರೋಡೀಕರಿಸಿ ಈಗಾಗಲೇ ತಾವು ಜನತಾ ದಳದವರು ಬಿಲ್ ತಯಾರು ಮಾಡಿದ್ದೀರಿ. ಅದರಲ್ಲಿ ಕೆಲವು ತಿದ್ದುಪಡಿಗಳನ್ನೂ ಮಾಡಿದ್ದೀರಿ. ಲಾ ಮಿನಿಸ್ಟರ್‌ಗೆ ಮೂರು ನಾಲ್ಕು ದಿವಸಗಳಲ್ಲಿ ನಾನು ಆ ಬಿಲ್ ಕಳುಹಿಸಿಕೊಡುತ್ತೇನೆ. ಅವರು ಅದನ್ನು ತ್ವರಿತ ರೀತಿಯಿಂದ ಗಮನಾರ್ಹವಾಗಿ ವಿಚಾರ ಮಾಡಿದರೆ ಅನುಕೂಲವಾಗುತ್ತದೆ. ಆ ಬಿಲ್ಲನ್ನು ಮಾನ್ಯ ಕಾನೂನು ಮಂತ್ರಿಗಳಾದ ಮೊಯಿಲಿಯವರಿಗೆ ೩-೪ ದಿವಸಗಳಲ್ಲಿ ಕಳುಹಿಸಿಕೊಡುತ್ತೇನೆ. ಅವರು ಪರಿಶೀಲನೆ ಮಾಡಿ ನನಗೆ ಬಿಲ್ ಕೊಟ್ಟರೆ ನಿಜವಾಗಿಯೂ ಇದೇ ಅಧಿವೇಶನದಲ್ಲಿ ಕ್ರೋಡೀಕೃತ ಬಿಲ್ಲನ್ನು ತರಬೇಕೆಂಬ ಆಸೆ ಇಟ್ಟುಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಪಾಟೀಲರೇ, ಕಾನೂನು ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ವಿರೋಧಪಕ್ಷದವರ ಸಹಾಯ ಬೇಕಾಯಿತಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ವಿವೇಕಾನಂದರು ಒಂದು ಸಾರಿ ಹೇಳಿದರು, ಪರಮಾತ್ಮ ನನ್ನ ಸ್ನೇಹಿತರಿಂದ ನನ್ನನ್ನು ಕಾಪಾಡು, ನನ್ನ ವಿರೋಧಿಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು. ಆ ದೃಷ್ಟಿಯಿಂದ ಒಮ್ಮೊಮ್ಮೆ ನಿಮ್ಮ ಸಹಾಯ ನಮಗೆ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಆ ಅನುಭವ ನಿಮಗೆ ಆಗಿರಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಾದರೆ ಇದನ್ನು ಲಂಬಿಸುವುದಿಲ್ಲ,

ಶ್ರೀ ಕೆ. ಹೆಚ್. ಪಾಟೀಲ್.— ಆ ಕಾನೂನು ಬಂದ ಮೇಲೇ ನಿಮ್ಮೆಲ್ಲರಿಗೂ ಒಂದು ರೀತಿಯಲ್ಲಿ ಸಮಾಧಾನವಾಗುತ್ತದೆ. ನಮಗೂ ಸಹ ಒಬ್ಬರಿಗೆ ಒಂದು, ಇನ್ನೊಬ್ಬರಿಗೆ ಇನ್ನೊಂದು ಆಗುವಂಥಾದ್ದು ತಪ್ಪಿ ಎಲ್ಲರನ್ನೂ ಸಮಾನವಾದ ರೀತಿಯಲ್ಲಿ ನೋಡುವುದಕ್ಕೆ ಅನುಕೂಲವಾಗುತ್ತದೆ ಆ ಕಾನೂನಿನಲ್ಲೂ ಸಹ ಈ ರೀತಿಯ ಕೆಲವು ಸಂಗತಿಗಳು ಇರುವುದರಿಂದ ಅಲ್ಲಿರತಕ್ಕ ಚಾರಿಟಬಲ್ ಇನ್ಸಿಟ್ಯೂಷನ್‌ನಲ್ಲಿರತಕ್ಕ ಜನರಿಗೆ ನಮ್ಮ ಮೇಲೆ ನಿಯಂತ್ರಣ ಬಂದೀತಲ್ಲ ಎಂಬ ಭಯ ಇದೆ ಅದಕ್ಕೆ ಸ್ಥಳೀಯವಾಗಿ ಬೇರೆ ರೀತಿಯ ಪ್ರಚೋದನೆ ಬಂದರೂ ಕೂಡ ಅದಕ್ಕೆ ಯಾರೂ ಮನಸ್ಸು ಕೊಡಬೇಡಿ. ನಿಮ್ಮ ಎದುರಿಗೇ ಆ ಕಾನೂನು ಬಂದಾಗ ಏನು ಸಲಹೆ ಬೇಕೋ ಅದನ್ನು ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್. ಈ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಶನ್ ಬಗ್ಗೆ ಅನೇಕ ಮಾನ್ಯ ಸದಸ್ಯರಿಂದ ನಾನು ನಿರೀಕ್ಷಣೆ ಮಾಡಿದ್ದೆ. ಮುಖ್ಯವಾದ ತೊಂದರೆ ಇರುವುದು ಯಾವುದು ಎಂದರೆ, ಜನರಿಗೆ ಬೇಕಾಗುವಷ್ಟು ಸ್ಟ್ಯಾಂಪ್ಸ್, ಹಣ ಕೊಟ್ಟರೂ ಸಿಕ್ಕುತ್ತಿಲ್ಲ. ಅದನ್ನು ಯಾರೂ ಹೇಳಲೇ ಇಲ್ಲ. ಮಾನ್ಯ ಸದಸ್ಯರು ಹೇಳದಿದ್ದರೂ ಸಹ ನಾನು ಅದನ್ನು ಗಮನಿಸಿದ್ದೇನೆ. ನಿಮ್ಮ ಮನಸ್ಸಿನೊಳಗೆ ಇದ್ದರೂ ಸಮಯದ ಅಭಾವದಿಂದ ಹೇಳಲಿಕ್ಕೆ ಆಗಲಿಲ್ಲವೆಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ನಮಗೆ ಬೇಕಾದ ಡಿನಾಮಿನೇಷನ್ ಸ್ಟ್ಯಾಂಪ್ಸ್ ಸಿಕ್ಕದಿದ್ದ ಹಾಗಾಗಿದೆ, ಅದಕ್ಕಾಗಿ ಕ್ಯೂ ನಿಲ್ಲಬೇಕಾಗಿದೆ ಅದು ಇನ್ನು ಮೇಲೆ ತಪ್ಪಬೇಕು. ಇದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಟ್ರಜರಿ ಅಧಿಕಾರಿಗಳಿಗೂ ಸಹ ಪತ್ರ ಬರೆದು, ಜನರಿಗೆ ಬೇಕಾಗುವ ಸ್ಟ್ಯಾಂಪ್ ಯಾವುದು ಇದೆ, ಅವುಗಳನ್ನು ಸಕಾಲಕ್ಕೆ ದೊರಕುವ ಹಾಗೆ ಮಾಡಬೇಕೆಂದು ಕೇಳಿಕೊಂಡಿರುವಂತಹ ಸಂಗತಿಯನ್ನು ನಿಮ್ಮ ಎದುರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಾ॥ ಎಸ್. ಬಿ. ನಂಜಪ್ಪ.— ಸ್ಟ್ಯಾಂಪ್ಸ್ ಬಗ್ಗೆ ನಾನು ಮಾತನಾಡಬೇಕೆಂದಿದ್ದೆ. ಅದಕ್ಕೆ ಅವಕಾಶ ಸಿಕ್ಕಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಮೊದಲು ೩ ಪರ್ಸೆಂಟ್ ಸ್ಟ್ಯಾಂಪ್ ಡ್ಯೂಟಿ ಇದ್ದುದನ್ನು ೧೩ ಪರ್ಸೆಂಟ್‌ಗೆ ಏರಿಸಿರುವುದರಿಂದ ಇಪ್ಪತ್ತು ಒಂದು ಟ್ರಾಕ್ಟರನ್ನು ಪರ್ಚೇಸ್ ಮಾಡಬೇಕಾಗಿದ್ದರೆ ಅದನ್ನು ರಿಜಿಸ್ಟರ್ ಮಾಡುವುದಕ್ಕೆ ೨೦ ಸಾವಿರ ರೂಪಾಯಿಗಳ ಸ್ಟ್ಯಾಂಪ್ ಪೇಪರನ್ನು ಪರ್ಚೇಸ್ ಮಾಡಬೇಕಾದ ಪರಿಸ್ಥಿತಿ ಬಂದಿದೆ ಆದ್ದರಿಂದ ತಾವು ಇದನ್ನು ಬಹಳ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಾಗುತ್ತದೆ. ಸ್ಟ್ಯಾಂಪ್ ಡ್ಯೂಟಿಯನ್ನು ಯಾವುದೇ ಕಾರಣದಿಂದ ಜಾಸ್ತಿ ಮಾಡದ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.-- ಸ್ಟ್ಯಾಂಪ್ಸ್ ಕಡಿಮೆ ಮಾಡುವುದು ಅದೆಲ್ಲ ಟ್ಯಾಕ್ಸೇಷನ್ ಬಿಲ್‌ನಲ್ಲಿ ಬರುತ್ತದೆ. ಆ ಬಗ್ಗೆ ಅರ್ಥ ಮಂತ್ರಿಗಳ ಬೇಡಿಕೆ ಬಂದಾಗ, ತಾವು ಮಾತನಾಡಬಹುದು. ಆದರೆ ನಿಮಗೆ ಬೇಕಾದ ಸ್ಟ್ಯಾಂಪ್ಸ್‌ಗಳನ್ನು ಒದಗಿಸಿಕೊಡುವ ಕರ್ತವ್ಯ ನನ್ನದು. ಆದರೂ ನೀವು ಹೇಳಿದ ವಿಷಯವನ್ನು ನಾನು ಒಪ್ಪುತ್ತೇನೆ. ಟ್ರ್ಯಾಕ್ಟರು ಮತ್ತು ರೈತರಿಗೆ ಬೇಕಾಗುವ ಉಪಕರಣೆಗಳನ್ನು ಕೊಂಡುಕೊಳ್ಳುವಾಗ ಸ್ಟ್ಯಾಂಪ್ ಡ್ಯೂಟಿ ಕಡಿಮೆಯಾಗಬೇಕು. ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳ ಬಗ್ಗೆ ಸಲಹೆಗಳನ್ನು ಮಾಡಿದ್ದಾರೆ. ಅವುಗಳೆಲ್ಲಕ್ಕೂ ವಿವರವಾಗಿ ಉತ್ತರ ಕೊಡುವುದಕ್ಕೆ ಸಮಯ ಇಲ್ಲ. ಆದರೂ ಅವುಗಳೆಲ್ಲವನ್ನೂ ಕ್ರೋಢೀಕರಿಸಿ ಸಾಧ್ಯವಾದ ಮಟ್ಟಿಗೆ ಅವುಗಳ ಬಗ್ಗೆ ಶಕ್ಯವಿದ್ದ ಎಲ್ಲ ರೀತಿಯ ಪ್ರಯತ್ನ ಮಾಡಿ ಕಾರ್ಯರೂಪಕ್ಕೆ ತರುತ್ತೇನೆಂಬ ಭರವಸೆಯನ್ನು ನೀಡುತ್ತೇನೆ.

ಶ್ರೀಮಾನ್ ಚಂದ್ರೇಗೌಡರು ತಮ್ಮದೇ ಆದ ಸ್ವಾರಸ್ಯಪೂರ್ಣವಾದ ಭಾಷಣದಲ್ಲಿ ಅಂದಿನ ಹಾಗೂ ಇಂದಿನ ರೆವಿನ್ಯೂ ಖಾತೆಯ ಬಗ್ಗೆ ಹೇಳಿದ್ದಾರೆ. ರೆವಿನ್ಯೂ ಖಾತೆ ಅಂದು ಇದ್ದದ್ದಕ್ಕೂ ಇಂದು ಇರುವುದಕ್ಕೂ ಎಷ್ಟು ಬದಲಾವಣೆಯಾಗಿದೆ ಎಂಬುದನ್ನು ತಾವು ನೋಡಿದರೆ, ಇಂದು ನಿಜವಾಗಿಯೂ ಜಿಲ್ಲಾಧಿಕಾರಿ, ಜಿಲ್ಲಾಧಿಕಾರಿಯಾಗಿ ಉಳಿದಿದ್ದಾನೆಯೇ? ಎಂಬ ಪ್ರಶ್ನೆ ಇದೆ. ನೀವು ಹೇಳಬಹುದು.

ನೀವು ರೆವಿನ್ಯೂ ಮಿನಿಸ್ಟರ್ ಇದ್ದೀರಿ. ಜಿಲ್ಲಾಧಿಕಾರಿ ನಿಮ್ಮ ಕೈಕೆಳಗೆ ಹೇಗೆ ಬರುತ್ತಾನೆಂದು ಹೇಳಬಹುದು ಇಲ್ಲ. ಅದು ಹೇಗೆ ಆಗಿದೆ ಅಂದರೆ, ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು ತಪ್ಪು ತಿಳಿದುಕೊಳ್ಳದಿದ್ದರೆ ನಾನು ಒಂದು ಮಾತನ್ನು ಹೇಳುತ್ತೇನೆ. "ಗಂಡ ಹೆಂಡತಿ ಇದ್ದಾಗ ಹೆಂಡತಿ ಗಂಡನ ಹೆಸರಿನಲ್ಲಿ ಆರ್ಡರ್ ಮಾಡುತ್ತಾಳೆ. ಆದರೆ ಅದು ಗಂಡನಿಗೆ ತಿಳಿದೇ ಇರುವುದಿಲ್ಲ" ಆ ಸ್ಥಿತಿ ರೆವಿನ್ಯೂ ಖಾತೆಯಲ್ಲಿ ನಿರ್ಮಾಣವಾಗಿದೆ. ರೆವಿನ್ಯೂ ಖಾತೆಗೆ ಸಂಬಂಧಿಸಿದ ಅನೇಕ ವಿಚಾರಗಳಲ್ಲಿ ರೆವಿನ್ಯೂ ಮಿನಿಸ್ಟರ್‌ಗೆ ಗೊತ್ತಾಗದ ಹಾಗೆ ಕಾರ್ಯಾಚರಣೆಗೆ ತರುವಂತಹ ಕೆಲಸ ಮಾಡುತ್ತಿದ್ದಾರೆ. ಎಲ್ಲವನ್ನು ಸಂಗ್ರಹಿಸಿ ಅವುಗಳಿಗೆ ಉತ್ತರವನ್ನು ಕೊಡುವಂತಹ ಕೆಲಸವನ್ನು ಡಿ.ಸಿ. ಮಾಡಬೇಕಾಗಿದೆ. ನಾನು ನಿಜವಾಗಿ ಡೆಪ್ಯುಟಿ ಕಮೀಷನರ್ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಮಾಡುತ್ತೇನೆ. ಅದರಲ್ಲಿ ಅನೇಕರು ತಪ್ಪು ಮಾಡುತ್ತಾರೆ. ಮಾಡುವುದಿಲ್ಲ ಎಂದಲ್ಲ. ತಪ್ಪು ಮಾಡಿದರೂ ಸಹ ಅವರ ಕಾಠಿಣ್ಯತೆಯನ್ನು ನಾವು ನೋಡಬೇಕು. ಒಂದೊಂದು ಇಲಾಖೆಯವರು ಒಂದೊಂದು ರೀತಿಯಿಂದ ಕೊಡತಕ್ಕ ಆರ್ಡರ್‌ಗಳನ್ನೆಲ್ಲ ಮನ್ನಿಸಿ ಅವರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಅವರು ಹೇಳಿದ ಕಾಲದ ಡೆಪ್ಯೂಟಿ ಕಮೀಷನರ್ ನನಗೆ ಗೊತ್ತು. ಹಿಂದೆ ದೇಸಾಯ್ ಅನ್ನುವವರು ಧಾರವಾಡದ ಕಮೀಷನರ್ ಆಗಿದ್ದರು. ಆಗ ಮಂರಾರ್ಜಿ ದೇಸಾಯಿಯವರು ನಮ್ಮ ಊರಿಗೆ ಬರಬೇಕೆಂದು ನಮ್ಮ ಇಚ್ಛೆ ಇತ್ತು. ನಾನು ಆಗ ತಾಲ್ಲೂಕು ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯಾಗಿದ್ದೆ. ನಾನು ನಮ್ಮ ಊರಿಗೆ ಬರಬೇಕೆಂದು ಪತ್ರ ಬರೆದಾಗ ಅವರು ಒಪ್ಪಿದರು. ಆದರೆ ಅದು ಡೆಪ್ಯುಟಿ ಕಮೀಷನರ್ ಮುಖಾಂತರ ಬರಬೇಕೆಂದು ತಿಳಿಸಿದರು. ನಾನು ಡೆಪ್ಯುಟಿ ಕಮೀಷನರ್‌ರವರನ್ನು ನೋಡುವುದಕ್ಕೆ ಹೋದರೆ ಇವತ್ತು ಆಗುವುದಿಲ್ಲ. ನಾಳೆ ನಾವು ಕರೆದಾಗ ಬನ್ನಿ ಎಂದರು. ಆಗ ಅನಿವಾರ್ಯವಾಗಿ ನಾವು ಡೆಪ್ಯೂಟಿ ಕಮೀಷನರ್ ಹೇಳಿದ್ದನ್ನೆ ಕೇಳಬೇಕಾಗಿತ್ತು. ಈಗ ಆ ರೀತಿ ಇದೆಯೇ. ಇಲ್ಲ, ಚಂದ್ರೇಗೌಡರು ಈಗ ನಮ್ಮ ಮನೆಗೆ ಬರಬೇಕೆಂದು ಹೇಳಿದರೆ ಡೆಪ್ಯೂಟಿ ಕಮೀಷನರ್‌ರವರನ್ನು ಕೇಳಿ ಬರುತ್ತೇವೆಂದು ಹೇಳುತ್ತೀವೆಯೇ? ಆಗುವುದಿಲ್ಲ. ಏಕೆಂದರೆ ಈಗ ಮಂತ್ರಿಗಳು ನಿಮ್ಮ ಕೈಗೆ ಸಿಗುತ್ತಾರೆ. ಈಗ ಜನಾನುರಾಗಿ ಮಿನಿಸ್ಟರ್ ಎಂದು ಶಿಸ್ತನ್ನು ಮುಂದುಬಿಟ್ಟಿದ್ದೇವೆ. ಅವರಿಗೂ ಶಿಸ್ತಿಲ್ಲ, ನಮಗೂ ಶಿಸ್ತಿಲ್ಲ. ಹೀಗಾಗಿದೆ. ಮೊದಲು ಇದ್ದಂತಹ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೇವೆ. ಅಷ್ಟೆ ಆ ಅಧಿಕಾರಿಗಳ ಕಾರ್ಯಕ್ಷೇತ್ರ ಬೇರೆ. ಕಕ್ಷೆ ಬೇರೆ, ಅವರ ಹೊಣೆಗಾರಿಕೆ ಬೇರೆ ಮೊದಲು ಒಬ್ಬ ಡೆಪ್ಯೂಟಿ ಕಮೀಷನರ್ ಪ್ರತಿ ತಿಂಗಳು ಒಂದು ದಿವಸವಾದರೂ ಹಳ್ಳಿಗಳಲ್ಲಿ ಟೆಂಟ್ ಹಾಕಿಕೊಂಡು ಇರಬೇಕು ಎಂದು ಇತ್ತು. ಬಂಗಲೆಯಲ್ಲಿ ಇರಬೇಕು ಎಂದಲ್ಲ. ಈಗಿನ ಡೆಪ್ಯೂಟಿ ಕಮೀಷನರುಗಳಿಗೆ ಟೆಂಟ್ ಅಂದರೆ ಗೊತ್ತಿದೆಯೇ? ಏಕೆಂದರೆ ಅವರು ಬಂಗಲೆಗಳಲ್ಲಿ ಇರುತ್ತಾರೆ.

ಶ್ರೀ ಎಂ. ವಿ. ವೆಂಕಟಪ್ಪ.— ಏರ್‌ಕಂಡೀಷನ್ಸ್ ರೂಮುಗಳಲ್ಲಿ ಇರುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್ — ಅವರು ಹೇಳಿದ ಹಾಗೆ ಏರ್‌ಕಂಡೀಷನ್ ರೂಮುಗಳಲ್ಲಿರುತ್ತಾರೆ. ಡೆಪ್ಯೂಟಿ ಕಮೀಷನರ್‌ರಲ್ಲ, ಇವತ್ತು ಹಳ್ಳಿಗಳಿಗೆ ತಹಶೀಲ್ದಾರರೂ ಹೋಗುವುದಿಲ್ಲ. ತಹಶೀಲ್ದಾರ್ ಅಲ್ಲ, ವಿಲೇಜ್ ಅಕೌಂಟೆಂಟೂ ಹೋಗುವುದಿಲ್ಲ. ನಾವು ಸರ್ಕ್ಯುಲರ್ ಕಳುಹಿಸಿದ್ದೇವೆ. ಯಾವ ವಿಲೇಜ್ ಅಕೌಂಟೆಂಟ್ ಹಳ್ಳಿಗಳಲ್ಲಿ ಇರುವುದಿಲ್ಲ ಅವನನ್ನು ಅದೇ ಗ್ರೌಂಡ್‌ನಲ್ಲಿ ಸಸ್ಪೆಂಡ್ ಮಾಡುತ್ತೇವೆಂದು ತಿಳಿಸಿದ್ದೇವೆ. ಆದರೆ ಇಲ್ಲಿಯತನಕ ಒಬ್ಬ ಸದಸ್ಯರಾದರೂ ಇಂತಹ ವಿಲೇಜ್ ಅಕೌಂಟೆಂಟ್ ಊರಿನಲ್ಲಿಲ್ಲವೆಂದು ಬಂದು ಹೇಳಿದ್ದಾರೆಯೇ ಯಾರು ಹೇಳಿಲ್ಲ. ಏಕೆಂದರೆ ನಾನು ಹೇಳುತ್ತೇನೆ. ಅವನು ನಿಮಗೆ ಒಂದು ಗಂಟು ಬೀಳುತ್ತಾನೆ. ನನ್ನನ್ನು ಇಲ್ಲೇ ಇರುವ ಹಾಗೆ ಮಾಡಿ ಎಂದು ಹೇಳುತ್ತಾನೆ. ಆದ್ದರಿಂದ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ಇವತ್ತು ನಮ್ಮ ಮನೋಗತ ಬದಲಾವಣೆಯಾಗಬೇಕು. ಇವತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟೊಂದು ಬದಲಾವಣೆಯಾಗಿದೆ. ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಒಂದಾದರೂ ಇದೆಯೇ? ಒಂದೂ ಇಲ್ಲ. ಫಂಡ್ ಡಿಸ್ಟ್ರಿಬ್ಯೂಷನ್ ಅವರ ಕೈಯಲ್ಲಿ ಇಲ್ಲ. ಮೊದಲು ತಕಾವಿ ಇತ್ತು, ಈಗ ಅದೂ ಹೊರಟು ಹೋಯಿತು ಹಾಗಾದರೆ ಡೆಪ್ಯುಟಿ ಕಮೀಷನರ್‌ಗೆ ಕೆಲಸ ಏನು? He is knowns a recovery Officer. ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಕೂಡಿ ಹಣ ವಸೂಲು ಮಾಡಿ. ಹಣ ಕೊಡದಿದ್ದರೆ ಹೊಲ ಮಾರಿ ರೊಕ್ಕವನ್ನು ಸರ್ಕಾರಕ್ಕೆ ತುಂಬುವಂತಹ ಕೆಲಸವನ್ನು ಮಾತ್ರ ಇವತ್ತು ಡೆಪ್ಯುಟಿ ಕಮೀಷನರ್ ಮಾಡಬೇಕಾಗಿದೆ. ಇದಕ್ಕಿಂತ ಹೆಚ್ಚು ಮಾಡುವುದಕ್ಕಾಗುತ್ತದೆಯೇ. ಈ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕಾಗಿದೆ. ತಾವು ಹೇಳಿದ ಹಾಗೆ, ಯಾವ ಎಲೆಕ್ಷನ್ನೂ ನಮ್ಮ ಕೈಯಲ್ಲಿ ಇಲ್ಲ, ಪಂಚಾಯತ್‌ರಾಜ್ ಇದ್ದರೆ ಪಂಚಾಯತ್ ರಾಜ್ ಇಲಾಖೆಗೆ ಹೋಗಬೇಕು. ಮುನಿಸಿಪಾಲಿಟಿ ಇದ್ದರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಹೋಗಬೇಕು. ನಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಯಾವ ಎಲೆಕ್ಷನ್ನೂ ಇರುವುದಿಲ್ಲ.

ಈ ದೃಷ್ಟಿಯಿಂದ ಡಿಪಾರ್ಟ್‌ಮೆಂಟ್ ಇವತ್ತು ಹೇಗಾಗಿದೆಯೆಂದರೆ, ಹರಿದು ಹಂಚಿಕೊಂಡು ತಿನ್ನುವ ಹಾಗೆ ಆಗಿದೆ. ಪರ್ವಾಗಿಲ್ಲ, ಸೇವೆ ಮಾಡುವವರಿಗೆ ಇದೊಂದು ಅವಕಾಶ. ಅಧಿಕಾರ ಇಲ್ಲದಿದ್ದರೂ ಕೂಡ ನಾವು ಏನಾದರೂ ಮಾಡಲಿಕ್ಕೆ ಬರುತ್ತದೆಯೋ ಎಂದು ಆಲೋಚನೆ ಮಾಡಬೇಕಾಗಿದೆ. ಅದಕ್ಕೆ ನಾನು ನಿಮ್ಮ ಸಹಾಯ ಕೇಳುತ್ತೇನೆ. ನಮ್ಮ ಕೈಯಲ್ಲಿ ಅಧಿಕಾರ ಇಲ್ಲ, ಇಲ್ಲದಿದ್ದರೂ ಸಹ ನಾವು ಜನರ ಸೇವೆ ಮಾಡಬೇಕು. ದೇಶದ ಸೇವೆ ಮಾಡಬೇಕು, ರಾಜ್ಯದ ಸೇವೆಯನ್ನು ಮಾಡಬೇಕು. ರಾಜ್ಯ ಸರ್ಕಾರವನ್ನು ಭದ್ರ ಮಾಡಬೇಕು. ಇದು ಸಾಧ್ಯವೇ? ಹಿರಿಯರೂ ಮಾನನೀಯ ಸದಸ್ಯರೂ ಆದಂಥ ಪ್ರೊ: ನಂಜುಂಡಸ್ವಾಮಿಯವರು ಒಂದು ಮಾತನ್ನು ಹೇಳಿದರು. ಬ್ರಿಟಿಷರ ಕಾಲದಿಂದ ಬಂದಂಥ ಪರಂಪರೆಯನ್ನು ನೀವು ಅಮಲಿನಲ್ಲಿ ತಂದರೆ ನಿಮ್ಮನ್ನು ಬ್ರಿಟಿಷರ ಏಜೆಂಟ್ ಎಂದು ತಿಳಿದುಕೊಳ್ಳಬೇಕಾದೀತು. ನೀವು ಹಾಗೆ ಮಾಡಬೇಡಿ, ಹೊಸದಾಗಿ ಮಾಡಿ, ನಾವೆಲ್ಲರೂ ರೈತರು ನಿಮಗೆ ಪಗಾರ ಕೊಡುವವರು, ನಿಮಗೆ ದಾನ ಹಾಕುವವರು, ನೀವು ನಮ್ಮನ್ನು ಸಾಲಗಾರರೆಂದು ಕರೆಯಬೇಡಿ ಎಂದು ಹೇಳಿದರು. ನಿಜ, ನಾನು ಒಪ್ಪುತ್ತೇನೆ. ನಾನು ಮೊದಲು ರೈತನಾಗಿ ನಂತರ ಇಲ್ಲಿ ಮಂತ್ರಿಯಾಗಿದ್ದೇನೆ. ಇವತ್ತಿಗೂ ನಾನು ನನ್ನ ರೈತರ ಉತ್ಪನ್ನದಿಂದ ತಿನ್ನುತ್ತಿದ್ದೇವೆಯೋ ಹೊರತು ಈ ಮಂತ್ರಿ ಪದವಿಯ ಉತ್ಪನ್ನ ಸಾಲುವುದಿಲ್ಲ. ಆ ದೃಷ್ಟಿಯಿಂದ ರೈತರ ಕಲ್ಯಾಣದ ಬಗ್ಗೆ ಎರಡನೆಯ ಅಭಿಪ್ರಾಯವಿಲ್ಲ ಆದರೆ ವಿಚಾರ ಮಾಡಬೇಕು, ಎಲ್ಲವನ್ನೂ ಬ್ರಿಟಿಷರು ಮಾಡಿದ್ದಾರೆ ಎಂದರೆ ಬ್ರಿಟಿಷರು ಮಾಡಿದ್ದನ್ನು ನಾವು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೋ ಯಾವುದು ಚಲೋ ಇದೆ ಅದನ್ನು ತೆಗೆದುಕೊಳ್ಳಬೇಕು. ಅವರು ರೆವಿನ್ಯೂ ಎಂಬ ಹೆಸರನ್ನು ತೆಗೆಯಿರಿ ಅಂದರು. ಬ್ರಿಟೀಷರ ಕಾಲದಲ್ಲಿ ಇಂಗ್ಲೆಂಡಿನಲ್ಲಿ ರೆವಿನ್ಯೂ ಎಂದು ಇಲ್ಲವೆಂದು ಹೇಳಿದರು. ನಾನು ಮುಂಜಾನೆ ಒಂದು ಬುಕ್ಕನ್ನು ನೋಡಿದೆ ಅದರಲ್ಲಿ ಹೀಗಿದೆ. ..Revenue is a term in economics., i.e.. a variety of meaning. In England, the term refers to the income or receipt of the national Government.''

೨.೩೦ ಪಿ. ಎಂ.

ಮೀನ್ಸ್ ಆಫ್ ಪ್ರೊಡಕ್ಷನ್ ಯಾವುದು ? ಜಮೀನುಗಳು ಮೀನ್ಸ್ ಆಫ್ ಪ್ರೊಡಕ್ಷನ್. ಅದು ಒಂದೇ ಏನು ಮೀನ್ಸ್ ಆಫ್ ಪ್ರೊಡಕ್ಷನ್ ಇವತ್ತು ಬೆಂಗಳೂರಿನಲ್ಲಿ ಮನೆ ಕಟ್ಟುತ್ತಾರೆ ಮನೆ ಮೀನ್ಸ್ ಆಫ್ ಪ್ರೊಡಕ್ಷನ್ ಆಗುವುದಿಲ್ಲವೇ ಒಬ್ಬೊಬ್ಬ ಅಧಿಕಾರಿ ನಾಲ್ಕು-ನಾಲ್ಕು ಬಂಗಲೆ ಕಟ್ಟಿ ಬೇರೆಯವರಿಗೆ ಬಾಡಿಗೆಗೆ ಕೊಡುತ್ತಾನೆ. ಅದು ಮೀನ್ಸ್ ಆಫ್ ಪ್ರೊಡಕ್ಷನ್ ಅಲ್ಲವೇ ? ಇವತ್ತು ಶಹರಿನಲ್ಲಿ ಇರತಕ್ಕವರು ಕಾನ್ಶಿಯಸ್ ಇರುವ ಜನರು ಪೊಲಿಟಿಕಲಿ ಅವೇಕನ್ ಜನ ಅವರಿದ್ದಾರೆ. ಅವರು ತಮ್ಮ ಮೇಲೆ ಬರುವ ಕಾನೂನುಗಳನ್ನು ಹಿಂದಕ್ಕೆ ಸರಿಸುತ್ತಾರೆ. ಆ ದೃಷ್ಟಿಯಿಂದ ಅವರು ದೂರ ಆಗುತ್ತಾರೆ. ಆದರೆ ನಮ್ಮ ರೈತ ಹಾಗಲ್ಲ. ಅವರು ಹೇಳಿದ ಕಾನ್‌ಸೆಪ್ಟ್ ಒಪ್ಪುವುದಾದರೆ ನಮಗೆ ಲ್ಯಾಂಡ್ ರೆವಿನ್ಯೂ ಬೇಡ. ಇವತ್ತು ಲ್ಯಾಂಡ್ ರೆವಿನ್ಯೂ ೩ ಕೋಟಿ ಬರುತ್ತದೆ. ಆದರೆ ಹೆಚ್ಚು ಖರ್ಚು ಆಗುತ್ತದೆಂದು ಹೇಳಿದರು. ಅವರಿಗೆ ಸರಿಯಾದ ಮಾಹಿತಿ ಇಲ್ಲ. ನಮ್ಮಲ್ಲಿ ಸುಮಾರು ೧೨೨ ಲಕ್ಷ ಹೆಕ್ಟೇರ್ ಎಂದರೆ ಸುಮಾರು ೩ ಕೋಟಿ ಎಕರೆ ಜಮೀನು ಇದ್ದು ಅದರಲ್ಲಿ ಲ್ಯಾಂಡ್ ರೆವಿನ್ಯೂ ೧೨ ಕೋಟಿ ರೂಪಾಯಿ ಬರುತ್ತದೆ. ಇವತ್ತು ನಾವು ಬರೀ ಲ್ಯಾಂಡ್ ರೆವಿನ್ಯೂ ಮಾತ್ರ ವಸೂಲಿ ಮಾಡುವುದಿಲ್ಲ. ಆದರೆ ನಮ್ಮ ಇಲಾಖೆ ಇವತ್ತು ವಸೂಲಿ ಮಾಡುತ್ತಿರುವುದು ೧೫೬ ಕೋಟಿ ರೂಪಾಯಿ ಆಗುತ್ತದೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಲ್ಯಾಂಡ್ ರೆವಿನ್ಯೂ ೪ ಕೋಟಿ ರೂಪಾಯಿ. ಇದಕ್ಕೆ ನೀರಿನ ಕರ ಸೇರಿಸಿದರೆ ೧೨ ಕೋಟಿ ರೂಪಾಯಿಯಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಲ್ಯಾಂಡ್ ರೆವಿನ್ಯೂ ಬೇರೆ. ನಾನ್ ಅಗ್ರಿಕಲ್ಚರ್ ಎಲ್ಲಾ ಕೂಡಾ ೧೦ ಕೋಟಿ ರೆವಿನ್ಯೂ. non-agricultural revenue as such based on the land. ಅಷ್ಟಾದರೂ ಕೂಡಾ ಅಗ್ರಿಕಲ್ಚರ್ ಮೇಲೆ ಬರುವುದು ಬರೀ ೪ ಕೋಟಿ. ಇದನ್ನು ಬಿಟ್ಟರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲವೇ ? ಆದರೆ ನನ್ನ ಅಭಿಪ್ರಾಯದಲ್ಲಿ, ರೈತನಾಗಿ ನಾನು ಅದನ್ನು ತೆಗೆದುಕೊಳ್ಳಲೇಬೇಕು ಎನ್ನುವವನು. ಏಕೆಂದರೆ ಹತ್ತು ಎಕರೆಯದು ಬಿಟ್ಟಿದ್ದು ತಪ್ಪು. ಇವತ್ತು ೧ ಎಕರೆಗೆ ಒಂದು ಅಥವಾ ಎರಡು ರೂಪಾಯಿ ಕೊಡುತ್ತಾನೆ. ಇವತ್ತು ಅದನ್ನು ಬಿಟ್ಟರೆ ರೆಕಾರ್ಡ್ ಬಿಲ್ಡಪ್ ಮಾಡುವವರು ಯಾರು ? ಅದನ್ನು ಕೊಟ್ಟರೆ ಅದು ನನ್ನ ಹೊಲ ಎಂದು ಹೇಳುವ ಅಭಿಮಾನ ಅವನಲ್ಲಿ ಬರುತ್ತದೆ. ದಾನ ಮಾಡೋದು, ತಿರುಪತಿ ತಿಮ್ಮಪ್ಪನ ಹುಂಡಿಗೆ ಹಾಕುವ ಬದಲು ಇಲ್ಲಿ ಎರಡು ರೂಪಾಯಿ ಹಾಕಲಿ ಏನಾಗುತ್ತದೆ. ಆದ್ದರಿಂದ ಇದನ್ನು ಬಿಡುವುದು ಬೇಡ. ಯಾವುದೇ ರೀತಿಯಿಂದ

ಮನಸನ್ನು ಕಡಿಸಿಕೊಂಡು ನಮ್ಮ ಕಡೆ ಏಕೆ ಟ್ಯಾಕ್ಸ್ ತೆಗೆದುಕೊಳ್ಳಬೇಕು ಎನ್ನುವುದು ಬೇಡ. ಬೇಕಾದರೆ ಅವರು ಕೇಳಲಿ ಲ್ಯಾಂಡ್ ರೆವಿನ್ಯೂ ಎಂದು ಏನು ತೆಗೆದುಕೊಳ್ಳುತ್ತೀರಿ ಅಷ್ಟು ರಖಂನ್ನು ಇನ್‌ವೆಸ್ಟ್ ಆಗ್ರೋ ಬೇಸ್ಡ್ ಇಂಡಸ್ಟ್ರೀ ಮಾಡುವುದಕ್ಕೆ ನಮಗೆ ಕೊಡಿ ಎಂದು ಕೇಳಲಿ ನಾನು ಖರೇ ಹೇಳಬೇಕೆಂದರೆ, ನೀವು ಎಲ್ಲರೂ ಬೈತೀರಿ ಎಂದು ಸುಮ್ಮನೆ ಬಿಡುತ್ತೇನೆ. ಇವತ್ತು ಲೋನ್ ಏನು ಇದೆ, ಆ ಲೋನ್ ಸೂಟ್ ಬಿಡಬೇಕು ಅಥವಾ ಅವರಿಗೆ ಸಾಲ ಮನ್ನಾ ಮಾಡಬೇಕು ಎಂದು ಹೇಳುವುದು ತಪ್ಪು. ಹೀಗೆ ಮಾಡಿದರೆ ನೂರು ವರ್ಷಗಳಿಂದ ಕಟ್ಟಿರುವ ಈ ಸಹಕಾರಿ ಸಂಘಗಳನ್ನು ಕೇಂದ್ರವಾಗಲೀ, ರಾಜ್ಯವಾಗಲೀ ಹಾಳು ಮಾಡಿದಹಾಗೆ ಆಗುತ್ತದೆ ಎನ್ನುವ ಅಭಿಪ್ರಾಯ ನನ್ನದಿದೆ. ನೀವು ಬೇಕಾದರೆ ಸಾಲ ಮರು ಪಾವತಿಯನ್ನು ಮುಂದಕ್ಕೆ ಹಾಕಿ, ಕಂತುಗಳಲ್ಲಿ ಕಟ್ಟಲು ಸಾಕಷ್ಟು ಅವಕಾಶವನ್ನು ಕೊಡಿ ಎಂದು ಹೇಳಿ ಅದು ಏನೂ ರೈತರಿಗೆ ಹೊರೆ ಆಗುವುದಿಲ್ಲ ಇವತ್ತು ರೈತ ಕೊಡುವುದಕ್ಕೆ ತಯಾರು ಇದ್ದಾರೆ. ಆದರೆ ಆತನಿಗೆ ಕೊಡುವುದಕ್ಕೆ ಬೇಕಾಗುವ ಉತ್ಪತ್ತಿ ಇಲ್ಲ. ಈ ಬಗ್ಗೆ ನಾನು ನಂಜುಂಡಸ್ವಾಮಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ರೈತರ ಮುಖಂಡರಾದ ತಾವು ಈ ಬಗ್ಗೆ ಯೋಚನೆ ಮಾಡಿ ಬಹಳ ದಿವಸಗಳ ಹಿಂದೆ ಶಿವಮೊಗ್ಗದಲ್ಲಿ ಸಿಕ್ಕಿದ್ದ ರುದ್ರಪ್ಪನವರಿಗೆ ನಾನು ಇದನ್ನು ಹೇಳಿದೆ, ರುದ್ರಪ್ಪನವರೇ ನೀವು ಫೈಟ್ ಮಾಡುವುದಾದರೆ ವರ್ಷಕ್ಕೆ ಎಷ್ಟು ವಸೂಲಿ ಮಾಡುತ್ತೀರೋ ಅಗ್ರಿಕಲ್ಚರಿಸ್ಟ್‌ಗೆ ಇನ್ ದಿ ಫಾರಂ ಆಫ್ ಶೇರ್ ಕೊಡಿ, ಕೋ ಆಪರೇಟೀವ್ ಸೊಸೈಟಿಯವರಿಗೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಇಂಡಸ್ಟ್ರೀ ಮಾಡಿರಿ ಆ ತಾಲ್ಲೂಕಿನಲ್ಲಿ, ಆಗ್ರೊ ಬೇಸ್ಡ್ ಇಂಡಸ್ಟ್ರಿ ಮಾಡಿ ರೈತರ ಮಾಲು ಪರಿವರ್ತನೆ ಮಾಡುವ ಸಂಘಗಳನ್ನು ಮಾಡಿ. ಸಂಘಗಳನ್ನು ಮಾಡಿದರೆ ಧಾರಣೆ ಹೆಚ್ಚು ಆಗುತ್ತದೆ. ಅದು ಒಂದಕ್ಕೆ ನಾಲ್ಕು ಆಗುತ್ತದೆ. ಅಲ್ಲಿ ಬರತಕ್ಕ ಲಾಭದಿಂದ ನಿಮ್ಮ ಸಾಲವನ್ನು ತೆಗೆದುಕೊಂಡು ಹೋಗಿ ಎಂದು ಮೋರ್ಗೆಗೆ ಕೆತ್ತುವಂತೆ ಒಗೀರಿ ಎಂದು ಹೇಳಿದೆ. ಇದು ನನ್ನ ಅಭಿಪ್ರಾಯ. ಇದು ರೈತರಿಗೆ ವಿರೋಧ ಮಾಡಿದಹಾಗೆ ಆಗುತ್ತದೆಯೆ ? ಮಾನ್ಯ ಬಾಬುಗೌಡರು ನೋಡಿದ್ದಾರೆ. ಇವತ್ತು ನಮ್ಮಲ್ಲಿಯೇ ನಡೆದಂತಹ ಸಹಕಾರ ಸಂಘಗಳನ್ನು ನೋಡಿದರೆ, ರೈತ ಹತ್ತಿ ಬೆಳೆದರೆ ಅದನ್ನು ಮಾರಾಟ ಮಾಡಲಿಕ್ಕೆ ತೊಂದರೆಯಿಲ್ಲ. ಶೇಂಗಾ ಮಾರಾಟ ಮಾಡಲಿಕ್ಕೆ ತೊಂದರೆಯಿಲ್ಲ. ಇವತ್ತು ಅಲ್ಲಿ ಒಂದು ಷೇರ್ ಕೇಳಿದರೆ ಹತ್ತು ಷೇರ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಒಬ್ಬ ರೈತ ೧೦ ರೂಪಾಯಿ ಷೇರ್ ಇಟ್ಟಿದ್ದರೆ ಇವತ್ತು ಅದಕ್ಕೆ ೨೦೦, ೩೦೦ ರೂಪಾಯಿವರೆಗೆ ಕೊಟ್ಟಿದ್ದಾರೆ ಇವತ್ತು ಸರ್ಕಾರದ ಷೇರುಗಳನ್ನು ಒಳ್ಳೆಮುಂಟ್ಟಿಸಿದ್ದಾರೆ. ನಿಮ್ಮ ಷೇರು ಹಣವನ್ನು ನೀವು ತೆಗೆದುಕೊಂಡು ಹೋಗಿಯೆಂದು ಹೇಳುತ್ತಾರೆ. ಯಾರದೇ ಸಹಾಯವಿಲ್ಲದೆ ರೈತರು ತಮ್ಮದೇ ಆದ ಸಂಸ್ಥೆಯನ್ನು ಮಾಡಿದ್ದಾರೆ. ಆ ತರಹ ಪ್ರತಿಯೊಂದು ತಾಲ್ಲೂಕಿಗೂ ಒಂದು ಮಾಡ್ರಿಯೆಂದು ನೀವು ಗಂಟುಬಿದ್ದರೆ ಒಳ್ಳೆಯದಾಗುತ್ತದೆ. ಇವತ್ತು ೧೦ ಸಾವಿರ ರೂಪಾಯಿ ಸೂಟ್‌ಬಿಟ್ಟರೆ ಅವನೇನು ಮಹಾ ಶ್ರೀಮಂತ ಆಗುತ್ತಾನೇನು? ನಮ್ಮ ಅಪ್ಪ ಹೇಳುತ್ತಿದ್ದರು ಯಾರದೂ ಋಣ ಇಟ್ಟುಕೊಳ್ಳಬೇಡ, ೧೦ ರೂಪಾಯಿ ಸಾಲ ಇದ್ದರೂ ಮುಟ್ಟಿಸಿ ಬಾ ಎಂದು ಹೇಳುತ್ತಿದ್ದರು. ಆ ಮಾತು ಇವತ್ತಿಗೂ ರೈತನ ಮನಸ್ಸಿನಲ್ಲಿದೆ. ಅಂದಮೇಲೆ ರೈತ ಯಾವಾಗಲೂ ಕೊಡುವ ದಾನಿ, ರೈತ ಯಾವಾಗಲೂ ತೆಗೆದುಕೊಳ್ಳುವವನಲ್ಲ, ಇದು ಕಾನ್ಸೆಪ್ಟ್, ಅತ್ಯಂತ ಅವಶ್ಯಕ ರಾಜಕೀಯವಾಗಿ ಆದರೆ ಅವರು ಸೂಟ್ ಬಿಡುತ್ತೇವೆ ಎನ್ನುತ್ತಾರೆ ಅವರು ಕೊಡುತ್ತೇನನ್ನುತ್ತಾರೆ. ನಾವು ಸುಮ್ಮನಿರಬೇಕಾಗಿದೆ ಇದು ನನ್ನ ವೈಯಕ್ತಿಕ ಅಭಿಪ್ರಾಯ ನಾನು ಈಗ ಹೇಳುತ್ತಿದ್ದೇನೆ ಎಂದು ನನ್ನ ಪ್ರಾಮಾಣಿಕವಾದ ಅಭಿಪ್ರಾಯವನ್ನು ಚುನಾವಣೆಯಲ್ಲಿ ಹೇಳಿದ್ದೇನೆ ಇದು ಬಾಬುಗೌಡರಿಗೆ ಗೊತ್ತಿದೆ ಇದು ಆಗಬಾರದೆಂದು ನಾನು ಪ್ರತಿಯೊಂದು ಮೀಟಿಂಗ್‌ನಲ್ಲಿ ಹೇಳಿದ್ದರೂ ಜನ ನನ್ನನ್ನು ಆರಿಸಿ ಕಳುಹಿಸಿದ್ದಾರೆ. ಏಕೆಂದರೆ ೧೦ ಸಾವಿರ ರೂಪಾಯಿ ಸೂಟ್ ಬಿಡುವುದರಿಂದ ನಾವು ಶ್ರೀಮಂತರಾಗುವುದಿಲ್ಲವೆಂದು ಅವರಿಗೆ ಗೊತ್ತಿದೆ.

ಶ್ರೀ ಹೆಚ್. ವಿಶಾಂತಯ್ಯ.—ಸಾಲ ಮನ್ನಾ ಮಾಡುತ್ತೇವೆಂದು ನಾವು ಹೇಳಿದರೂ ಜನ ನಮ್ಮನ್ನು ಆರಿಸಿ ಕಳುಹಿಸಲಿಲ್ಲ, ಇದು ನಿಮಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಇದರ ಕಾನ್ಸೆಪ್ಟ್ ಮಾನ್ಯ ನಂಜುಂಡಸ್ವಾಮಿಯವರು ಈ ಸಭೆ ಬಿಟ್ಟು ಮತ್ತೊಂದು ಕಡೆ ಚರ್ಚೆಮಾಡಿದರೆ ನಾನು ಬರುತ್ತೇನೆ. ರೈತನ ಕಲ್ಯಾಣವಾಗಬೇಕಾದರೆ ಆಗ್ರೋ ಬೇಸ್ಡ್ ಇಂಡಸ್ಟ್ರಿಗಳು ಆಗಬೇಕು. ರೈತ ಶ್ರಮದಿಂದ ಬೆಳೆದಂತಹ ಬೆಳೆಗೆ ಸರಿಯಾದ ಧಾರಣೆ ಸಿಗಬೇಕು. ಬೆಲೆಯನ್ನು ನಿಗದಿ ಮಾಡದಿದ್ದರೆ ಅದು ಸಿಗುವುದಿಲ್ಲ. ಸರ್ಕಾರಿ ನೋಟಿಫಿಕೇಶನ್‌ನಲ್ಲಿ ರಾಗಿಗೆ ೨೦೦ ರೂಪಾಯಿ ಧಾರಣೆ ಆಗಬೇಕು, ಅಕ್ಕಿಗೆ ೧೨೦೦ ರೂಪಾಯಿ ಧಾರಣೆ ಆಗಬೇಕು ಎಂದು ಠರಾವು ಮಾಡಿದರೆ ಆಗುತ್ತದೇನು ? ಆ ರೇಟಿಗೆ ಸರ್ಕಾರದವರು ಖರೀದಿ ಮಾಡಿರಿ ಅಂದರೆ ಸರ್ಕಾರದವರು ಹಣವನ್ನು ಎಲ್ಲಿಂದ ತರಬೇಕು ? ಸರ್ಕಾರದವರು ಅವರ ಅಪ್ಪನ ಮನೆಯಿಂದ ದುಡ್ಡನ್ನು ತರುತ್ತಾರೇನು ? ನಿಮ್ಮ ದುಡ್ಡನ್ನು ತೆಗೆದುಕೊಂಡು ನಿಮಗೆ ಅನುಕೂಲ ಮಾಡುತ್ತಾರೆ. "ಬೆಲ್ಲದ

ಗಣಪ ಬೆಲ್ಲದ ನೈವೇದ್ಯ ಅದನ್ನು ತಾವು ಆಲೋಚನೆ ಮಾಡಬೇಕು. ನೀವೇ ಸರ್ಕಾರದಲ್ಲಿದ್ದೇವೆಂದು ತಿಳಿದುಕೊಂಡು ಯೋಚಿಸಿ ? ರೈತರ ಕಲ್ಯಾಣಕ್ಕೋಸ್ಕರ, ರೈತರ ಅನುಕೂಲಕ್ಕೋಸ್ಕರ, ಅನೇಕರು ಕಟ್ಟಿದಂತಹ ನೂರಾರು ವರ್ಷಗಳಿಂದ ಬೆಳೆಸಿಕೊಂಡು ಬಂದಂತಹ ಸಹಕಾರ ಚಳುವಳಿಯನ್ನು ನಾವು ನಾಶಮಾಡಿದರೆ ರಾಜಕೀಯ ಜೀವನದಲ್ಲಿ ಮಹಾಪಾಪ ಮಾಡಿದಂತಾಗುತ್ತದೆ ಎಂಬುದನ್ನು ಮರೆಯ ಮರೆಯಬೇಡಿ. ಇದು ಕೇವಲ ಹಿಂದೂಸ್ಥಾನದಲ್ಲಿಲ್ಲ. ಜಗತ್ತಿನ ಎಲ್ಲ ಇತಿಹಾಸವನ್ನು ತೆಗೆದುನೋಡಿ, ರಷ್ಯಾ ದೇಶ ನೋಡಿರಿ, ಅಮೇರಿಕಾದೇಶದವರು ನಮ್ಮ ಮಾರ್ಕೆಟ್ಟಿಗೆ ಬರಲಿಕ್ಕೆ ಹತ್ತಿದ್ದಾರೆ ಇಂಗ್ಲೆಂಡ್ ಜರ್ಮನ್—ಈ ದೇಶಗಳಲ್ಲಿಯೂ ಸಹಿತ ಡೆಮಾಕ್ರಟಿಕ್ ಸೆಟ್‌ಅಪ್ ಸಹಕಾರದಿಂದ ಮಾತ್ರ ಜೀವಂತ ಇದೆಯೇ ಹೊರತು ಬೇರೆ ರೀತಿಯಿಂದ ಸಾಧ್ಯವಿಲ್ಲ. ಇವತ್ತು ರೈತರಿಗೆ ೧೦ ಸಾವಿರ ರೂಪಾಯಿ ಸೂಟ್‌ಸಾಲವನ್ನು ಕೊಡುವುದಾದರೆ ಮುಂದಿನ ಸಾರಿ ಸಾಲವನ್ನು ಕೊಡುವವರು ಯಾರು ?

ಶ್ರೀ ಬಿ. ಹೆಚ್. ಬನ್ನಿಕೋಡ್.—ನೀವು ಹೇಳುವ ಪ್ರಕಾರ ಎಲ್ಲ ವ್ಯವಸ್ಥೆಯಾಗುವ ತನಕ ರೈತರ ಸಾಲ ಸೂಟ್ ಬಿಡ್ರಿ.

ಶ್ರೀ ಕೆ. ಹೆಚ್. ಪಾಟೀಲ್.—ನನ್ನ ಪ್ರಾಮಾಣಿಕವಾದ ಅಭಿಪ್ರಾಯವನ್ನು ನಾನು ಹೇಳಿದ್ದೇನೆ. ನೀವು ೧೦ ಸಾವಿರ ಅಲ್ಲ ೨೦ ಸಾವಿರ ಸಾಲ ಸೂಟ್ ಮಾಡಿಸಿಕೊಳ್ಳಿ ನಾನು ಬೇಡವೆನ್ನುವುದಿಲ್ಲ ನಾನು ವಿರೋಧ ಮಾಡುವುದಿಲ್ಲ. ಮಾನ್ಯ ಬನ್ನಿಕೋಡ್‌ರವರೆ ನೀವೇ ಹೇಳಿ ನಿಮ್ಮ ಮಾರ್ಕೆಟಿಂಗ್ ಸೊಸೈಟಿಗಳು ಇಲ್ಲದಿದ್ದರೆ ರೈತರ ಗತಿಯೇನು ?

ಶ್ರೀ ಬಿ. ಹೆಚ್. ಬನ್ನಿಕೋಡ್.—ಈ ವ್ಯವಸ್ಥೆ ಬೇಕು. ಆದರೆ ಈ ವ್ಯವಸ್ಥೆ ಇನ್ನೂ ಬಂದಿಲ್ಲ ವಾದ್ದರಿಂದ ಹಿಂದೆ ಆದಂತೆದ ಹಾನಿಯನ್ನು ತೊಂದರೆಗಳನ್ನು ತುಂಬಿಕೊಡಲಿಕ್ಕೆ ಈ ತಾತ್ಕಾಲಿಕ ಪರಿಹಾರ ರೈತರಿಗೆ ಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ರೆವಿನ್ಯೂ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿ.

ಶ್ರೀ ಕೆ. ಹೆಚ್. ಪಾಟೀಲ್.—ಇಂದು ಈ ಕಂದಾಯ ಇಲಾಖೆಯಲ್ಲಿ ಅನೇಕ ನ್ಯೂನತೆಗಳಿವೆ. ಆ ನ್ಯೂನತೆಗಳೆಲ್ಲವನ್ನು ಸರಿಪಡಿಸಬೇಕಾದರೆ ಎಷ್ಟೋ ದಿವಸಗಳು ಬೇಕು. ಆದರೂ ಸಹ ನಾವು ಹಂತ ಹಂತವಾಗಿ ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಲ್ಯಾಂಡ್ ಗ್ರಾಂಟ್ ಸಮಿತಿಗಳ ಬಗ್ಗೆ ಸದಸ್ಯರು ಗಳು ಮಾತನಾಡಿದ್ದಾರೆ. ಲ್ಯಾಂಡ್ ಗ್ರಾಂಟ್ ಸಮಿತಿಗಳಿದ್ದವು. ಅವುಗಳ ಕಾರ್ಯ ಮುಗಿದಮೇಲೆ, ಲ್ಯಾಂಡ್ ಗ್ರಾಂಟ್ ಸಮಿತಿಗಳನ್ನು ನೇಮಕ ಮಾಡಿದಂತಹವರು ಪುನಃ ಅಪಲೇಟ್ ಅಥಾರಿಟಿ ಇರಬೇಕೆಂದು ಮಾಡಿದರು. ಹೈಕೋರ್ಟ್‌ನವರು ಒಂದು ಡೈರೆಷನ್ ಕೊಟ್ಟರು. ಟ್ರಿಬ್ಯೂನಲ್ ಮಾಡಿ ಎಂದರು, ಇವರು ಟ್ರಿಬ್ಯೂನಲ್ ಮಾಡಿದರು.

ಆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಏನು ಆಯಿತು ಎಂದರೆ, ಅನೇಕ ಸಂದರ್ಭದೊಳಗೆ ಯಾವ ಉದ್ದೇಶಕ್ಕಾಗಿ ಈ ಕಾನೂನು ಮಾಡಲ್ಪಟ್ಟಿತ್ತೋ ಆ ಉದ್ದೇಶಕ್ಕೆ ವ್ಯತಿರಿಕ್ತ ಆಗುವ ರೀತಿಯಲ್ಲಿ ನಿರ್ಣಯಗಳು ಬರಲಿಕ್ಕೆ ಹತ್ತಿದವು. ಅನೇಕ ಮಾನ್ಯ ಸದಸ್ಯರು ಅಲ್ರಿ, ನಿಮಗೆ ನ್ಯಾಯಾಂಗದಲ್ಲಿ ವಿಶ್ವಾಸ ಇಲ್ಲವೆಂದರೆ ಹೇಗೆ? ನ್ಯಾಯಾಂಗ ಬಿಟ್ಟು ಇವರಿಗೆ ಹೇಗೆ ಇಲ್ಲಿ ಕೊಡುತ್ತೀರಿ ಎಂದು ಕೇಳಿದರು. ಅಂದರೆ ನ್ಯಾಯಾಂಗದಲ್ಲಿ ವಿಶ್ವಾಸ ಇಲ್ಲ ಎಂದಲ್ಲ. ನ್ಯಾಯ ಬಡವರಿಗೆ ಮುಟ್ಟುವ ರೀತಿಯಲ್ಲಿ, ಅವನ ಮನೆಗೇ ಹೋಗಿ ನ್ಯಾಯ ಕೊಡಬೇಕೆನ್ನುವುದೇ ನಮ್ಮ ಉದ್ದೇಶ. ನ್ಯಾಯಾಂಗ ದುಬಾರಿಯಾಗಬಾರದು. ನ್ಯಾಯಾಂಗ ಅಗ್ಗದ ರೀತಿಯಲ್ಲಿ ಸುಲಭವಾಗಿ ಪ್ರತಿಯೊಬ್ಬ ಮನುಷ್ಯನಿಗೂ ಸಿಗಬೇಕು, ಬಡವನಾದಂಥ ಅಜ್ಞಾನಿಯಾದಂಥ ರೈತನಿಗೆ ಸಿಗಬೇಕು. ಹೊಲ ಮಾಡುವಂಥ ಆತ ಆ ಹೊಲದ ಮಾಲೀಕನಾಗಬೇಕು ಎನ್ನುವಂಥ ತತ್ವ ಏನಿದೆ ತತ್ವಕ್ಕೆ ಅನುಗುಣವಾಗಿ ಇದನ್ನು ಮಾಡಿದೆ. ದಿವಂಗತ ದೇವರಾಜ ಅರಸು ಅವರನ್ನು ಈ ಹೊತ್ತಿನಲ್ಲಿ ನೆನಸಬೇಕಾಗುತ್ತದೆ. ಅವರು ಮಾಡಿದಂಥ ಕಾನೂನು ಇವತ್ತೂ ಸಹಿತ ಬರೇ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ಭಾರತ ದೇಶದಲ್ಲಿ ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಮೊನ್ನೆ ತಾನೆ ಶ್ರೀಮಾನ್ ವಿ. ಪಿ ಸಿಂಗ್‌ರವರು, ಶ್ರೀ ದೇವಿಲಾಲ್ ರವರು ಕರ್ನಾಟಕದ ಕಾನೂನು ಬಹಳ ಅತ್ಯುತ್ತಮವಾಗಿದೆ ಎಂಬ ಪ್ರಶಂಸೆಯನ್ನು ಮುಖ್ಯಮಂತ್ರಿಗಳ ಕಾನ್ಫರೆನ್ಸ್‌ನಲ್ಲಿ ಮಾಡಿದ್ದರು, ಆಗ ನಾನು ಇದ್ದೆ. ಅವತ್ತಿನ ದಿವಸ ಅವರು ಈ ಲ್ಯಾಂಡಿನ ಪರಿಮಿತಿಯನ್ನು ಕಡಿಮೆ ಮಾಡಬೇಕೆಂದು ಹೇಳಿದರು. ನಾವು ಹೇಳಿದೆವು ಏನೆಂದರೆ, ಈಗಾಗಲೇ ನಮ್ಮ ರಾಜ್ಯದ ಜನ ಅದಕ್ಕೆ ಅಡ್ಜಸ್ಟ್ ಆಗಿದ್ದಾರೆ, ಇದಕ್ಕಿಂತ ಹೆಚ್ಚು ಅಡ್ಜಸ್ಟ್ ಆಗುವುದಕ್ಕೆ ಸಾಧ್ಯ ಇಲ್ಲ. ಮತ್ತೆ ನಾವು ರೆವಲ್ಯೂಷನ್ ಮಾಡುವುದಕ್ಕೆ ತಯಾರಿಲ್ಲ, ಆದ್ದರಿಂದ ನಾವು ಏನು ಕಾನೂನು ಮಾಡಿದ್ದೇವೆ, ನಾವು ಮಾಡಿದ್ದನ್ನು ಮಾದರಿಯಾಗಿಟ್ಟುಕೊಂಡು ಉಳಿದವರಿಗೆ ತೋರಿಸಿರಿ. ಕಡಿಮೆ ಮಾಡುವುದು ಬೇಡ ಎಂದು ನಾವು ಹೇಳಿದೆವು. ಅವರು ಅದಕ್ಕೆ ಒಪ್ಪಿದರು. ಇದನ್ನು ಏಕೆ

ಹೇಳುತ್ತಿದ್ದೇನೆ ಎಂದರೆ, ನಮ್ಮ ರಾಜ್ಯದಲ್ಲಿ ಅತ್ಯಂತ ಉತ್ತಮ ರೀತಿಯ ಕಾನೂನನ್ನು ಮಾಡಿರುವಾಗ ಈ ಕಾನೂನಿನನ್ವಯ ಕಾರ್ಯಕ್ರಮವನ್ನು ಕೈಗೊಳ್ಳುವುದು ನಮ್ಮ ಕರ್ತವ್ಯ. ಈ ಸಂಸ್ಥೆಗೆ ಅಂದರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಮಾತೃ ಸಂಸ್ಥೆಯೆಂದು ಕೆಲವು ಹಿರಿಯರು ಹೇಳಿದ್ದಾರೆ. ಮಾನ್ಯ ಶ್ರೀ ಚಂದ್ರೇಗೌಡರು ಇದು ಮಾತೃ ಸಂಸ್ಥೆ. ಆದರೆ ತಾಯ್ತನ ಇಲ್ಲದ ಮಾತೃ ಸಂಸ್ಥೆ ಎಂದು ಹೇಳಿದ್ದಾರೆ, ಎರಡೂ ನಿಜ. ತಾಯ್ತನ ಏಕೆ ಇಲ್ಲವೆಂದರೆ, ತಾಯ್ತನ ಬರಬೇಕಾದರೆ ಮಕ್ಕಳ ಮೇಲೆ ಹಿಡಿತ ಇರಬೇಕು: ಮಕ್ಕಳ ಮೇಲೆ ಹಿಡಿತ ಇರಬೇಕು, ಮಕ್ಕಳು ಏನೇನು ಮಾಡುತ್ತಾರೆ ಎಂಬುದು ಕಣ್ಣೆದುರಿಗೆ ಕಾಣಬೇಕು. ಈಗ ಮಕ್ಕಳು ಬಹಳ ಇದ್ದಾರೆ, ಆದರೆ ಹಿಡಿತ ಇಲ್ಲ. ಈ ಹಿಡಿತ ಇಲ್ಲದೇ ಇರುವುದರಿಂದ ಒಮ್ಮೊಮ್ಮೆ ಮಕ್ಕಳು ದುರಾಚಾರಿಗಳಾಗುತ್ತಾರೆ, ಒಮ್ಮೊಮ್ಮೆ ಸದಾಚಾರಿಗಳೂ ಆಗುತ್ತಾರೆ. ದೇವರಿಗೆ ಪ್ರಾರ್ಥನೆ ಮಾಡುವುದು ಬಿಟ್ಟರೆ ಆ ತಾಯಿಗೆ ಹೆಚ್ಚಿನದು ಏನೂ ಇಲ್ಲ. ಆದರೂ ಪರವಾಗಿಲ್ಲ, ಇದ್ದುದರಲ್ಲಿ ನಾವು ಹಿಡಿತವನ್ನು ಬಿಗಿ ಮಾಡಿ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಇನ್ನೂ ಹೆಚ್ಚು ಕ್ರಿಯಾತ್ಮಕವಾಗಿ ನಡೆಯುವಂತೆ ಮಾಡಬೇಕೆಂದು ತಾವೆಲ್ಲ ಆಶೀರ್ವಾದ ಮಾಡಿದ್ದೀರಿ. ಕಾಯಕಲ್ಪ ಮಾಡಿ ಎಂದು ಹೇಳಿದ್ದೀರಿ. ಕಾಯಕಲ್ಪ ಹೇಗೆ ಮಾಡಬೇಕು ಎಂದು ನಿಮ್ಮನ್ನೆಲ್ಲ ಕೇಳೋಣ. ಅದನ್ನು ನಾವು ನೀವು ಕೂಡಿ ಮಾಡೋಣ. ಇವತ್ತು ನಾವು ಅಧಿಕಾರದಲ್ಲಿ ಇರಬಹುದು, ನೀವು ಇರಲಿಕ್ಕಿಲ್ಲ. ನೀವು ಅಧಿಕಾರದಲ್ಲಿ ಇಲ್ಲದೇ ಹೋದರೆ ನಿಮ್ಮ ಮಹತ್ವವನ್ನು ಕಡಿಮೆ ಮಾಡುವುದಕ್ಕೆ ನಾನು ತಯಾರಿಲ್ಲ. ಹಿಂದೆ ಮಾಡಿದಂಥ ತಪ್ಪನ್ನು ನಾವು ನೀವು ಕೂಡಿ ತಿದ್ದಿಕೊಳ್ಳೋಣ. ಮುಂದೆ ತಪ್ಪಾಗದಂತೆ ಮತ್ತು ಹೆಚ್ಚು ಸುಸ್ಥಿತಿಗೆ ಬರುವಂತೆ ಈ ವ್ಯವಹಾರವನ್ನು ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ತಿದ್ದುಪಡಿ ಮಾಡಿಕೊಳ್ಳೋಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಡಿವಿಜನಲ್ ಕಮಿಷನರ್ ಹುದ್ದೆ ಬಗ್ಗೆ ಒಬ್ಬಿಬ್ಬರು ಮಾತನಾಡಿದ್ದಾರೆ. ಡಿವಿಜನಲ್ ಕಮಿಶನರ್ ಆರ್ನಮೆಂಟಲ್ ಎಂದು ಹೇಳಿದರು. ಈ ಹುದ್ದೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲ. ಈ ಹುದ್ದೆಗಳನ್ನು ತೆಗೆಯುವುದರಿಂದ ಸರ್ಕಾರಕ್ಕೆ ಮಹಾ ದೊಡ್ಡ ಲಾಭವಾಗುವುದಿಲ್ಲ. ಈ ಹುದ್ದೆಗಳು ಇರುವುದರಿಂದ ಬಹಳಷ್ಟು ಲುಕ್ಸಾನೂ ಆಗುವುದಿಲ್ಲ. ಈ ಹುದ್ದೆಗಳನ್ನು ಏಕೆ ಇಟ್ಟಿದ್ದೇವೆ ಎಂದರೆ ಅವರು ಕೋ ಆರ್ಡಿನೇಟರ್ಸ್ ಆಗಿದ್ದಾರೆ. ಉಳಿದಂತೆ ಅವರಿಗೆ ಹೆಚ್ಚು ಅಧಿಕಾರ ಇದೆಯೆಂದು ನಾನು ಹೇಳುವುದಿಲ್ಲ. ಆದರೆ ಮನಸ್ಸು ಮಾಡಿದರೆ ಅವರು ಏನಾದರೂ ಮಾಡಬಹುದು. ಡಿವಿಜನಲ್ ಆಫೀಸರ್ಸ್ ಎಲ್ಲಾ ಲೆವೆಲ್‌ನಲ್ಲೂ ಇದ್ದಾರೆ. ಕೋ-ಆಪರೇಟಿವ್, ಡಿಪಾರ್ಟ್‌ಮೆಂಟ್, ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲೂ ಇದ್ದಾರೆ. ಅವರೆಲ್ಲರನ್ನೂ ಕೂಡಿಸಿಕೊಂಡು ಮಾಡಲಿಕ್ಕೆ ಯಾರಾದರೂ ಒಬ್ಬರು ಹೆಡ್ ಬೇಕು. ಇಲ್ಲದಿದ್ದರೆ ಅವರಷ್ಟಕ್ಕೆ ಅವರು ಇರುತ್ತಾರೆ. ಅವರನ್ನು ಕೂಡಿಸಿಕೊಂಡು ಮಾಡುವ ಕೆಲಸವನ್ನು ಡಿವಿಜನಲ್ ಕಮಿಷನರ್ ಮಾಡಬೇಕು ಅವರು ಏನೂ ಮಾಡುವುದಿಲ್ಲ ಈಗ ಮಾಡುವುದಕ್ಕೆ ಹೊರಟಿದ್ದಾರೆ. ಡಿವಿಜನ್ ಮಟ್ಟದಲ್ಲಿ ಅನೇಕ ಖಾತೆಗಳು ಇವೆ. ಇಂಡಸ್ಟ್ರಿ, ಲೇಬರ್, ಫೈನಾನ್ಸಿಯಲ್ ಇನ್‌ಸ್ಟಿಟ್ಯೂಶನ್ಸ್ ಬಂದಿವೆ, ಬ್ಯಾಂಕುಗಳು ಬಂದಿವೆ. ಸೆಂಟ್ರಲ್ ಏಜೆನ್ಸಿ, ಸ್ಟೇಟ್ ಏಜೆನ್ಸಿ ಇದೆ. ಇವೆಲ್ಲವನ್ನೂ ಕ್ರೋಢೀಕರಿಸಿಕೊಂಡು ಕಾರ್ಯಾಚರಣೆಗೆ ಹೆಚ್ಚುವಂತಹ ಕೆಲಸವನ್ನು ಡಿವಿಜನಲ್ ಕಮಿಷನರ್ ಮಾಡಬೇಕು. ಅದನ್ನು ಮಾಡಿಸೋಣ. ಈಗ ಅವರು ಏನು ಶೂನ್ಯಾವಸ್ಥೆಯೊಳಗಿದ್ದಾರೆ ಅವರನ್ನು ಒಂದೊ ಎರಡೂ ಅವಸ್ಥೆಗೆ ತರೋಣ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಅಸಿಸ್ಟೆಂಟ್ ಕಮೀಷನರ್ ಹುದ್ದೆ ರಿಡೆನ್‌ಡೆಂಟ್ ಎಂದು ಕೆಲವರು ಹೇಳಿದ್ದಾರೆ, ಇದು ನಿಜ. ಏತಕ್ಕಾಗಿ ಎಂದರೆ, ಇವತ್ತು ಹೊಸದಾಗಿ ರೆಕ್ರೂಟ್ ಆಗಿ ಬರತಕ್ಕ ತಹಶೀಲ್ದಾರ್ ಅವರಿಗೂ, ಹಿಂದಿನ ತಹಶೀಲ್ದಾರ್ ಅವರುಗಳಿಗೂ ತುಲನೆ ಮಾಡಿ ನೋಡಿದರೆ, ಅಷ್ಟೊಂದು ಅನುಭವ ಇರತಕ್ಕ ಜನ ಕಡಿಮೆ. ಈ ತಹಶೀಲ್ದಾರ್ ಅವರ ಮೇಲೆ ಸ್ವಲ್ಪವಾದರೂ ನಿಗಾ ವಹಿಸಿ, ಅವರ ಮೇಲೆ ಅಪಲೇಟ್ ಅಥಾರಿಟಿಯನ್ನು ಕ್ರಿಯೇಟ್ ಮಾಡಿ, ಅಸಿಸ್ಟೆಂಟ್ ಕಮೀಷನರ್ ಅವರನ್ನು ಇಡಲಾಗಿದೆ, ಇವರು ಇರುವುದರಿಂದಲೇ, ಸೂಪರ್‌ವಿಷನ್ ಕೆಲಸ ಸರಿಯಾಗಿ ಆಗುತ್ತಿದೆ. ಅಸಿಸ್ಟೆಂಟ್ ಕಮೀಷನರ್ ಅವರು ಅನೇಕ ಸಂದರ್ಭದೊಳಗೆ ತಮ್ಮ ಕಾರ್ಯಭಾರದ ನಿಮಿತ್ತ ಸೂಪರ್‌ವಿಷನ್ ಮಾಡದೇ ಹೋದರೆ, ಚಾಚೂ ತಪ್ಪದೆ ಸೂಪರ್‌ವಿಷನ್ ಮಾಡುವುದಕ್ಕೆ ಹಚ್ಚೋಣ. ಇನ್ನು ತಹಶೀಲ್ದಾರ್ ಹುದ್ದೆಯನ್ನು ಹೆಚ್ಚು ಮಾಡಬೇಕೆಂದು ಕೆಲವರು ಹೇಳಿದ್ದಾರೆ. ತಹಶೀಲ್ದಾರರು ಎಲ್ಲಿದ್ದರೆ ಏನು, ಹೆಚ್ಚು ಮಾಡಬೇಕಾದರೆ ಎಲ್ಲಿ ಮಾಡಬೇಕು ಅವರನ್ನು ಕ್ಲಾಸ್-1ಗೆ ತರಬೇಕೆಂದು ಹೇಳಿದ್ದಾರೆ. ಅವರನ್ನು ಕ್ಲಾಸ್-1ಗೆ ತಂದರೆ ಅಸಿಸ್ಟೆಂಟ್ ಕಮೀಷನರನ್ನು ಏನು ಮಾಡಬೇಕೆನ್ನುತ್ತೀರಿ. ಅವರೂ ಕ್ಲಾಸ್-1 ಆದರೆ ಎಲ್ಲಾ ಒಂದೇ ಆಗುತ್ತದೆ. ಆದ್ದರಿಂದ ಸ್ಟೆಪ್ ಬೈ ಸ್ಟೆಪ್ ಹೋಗಬೇಕು. ಅಸಿಸ್ಟೆಂಟ್ ಕಮೀಷನರ್ ಆಗಬೇಕಾದರೆ ತಹಶೀಲ್ದಾರ್ ಅವರು ಇಷ್ಟು ವರ್ಷ ಸರ್ವೀಸ್ ಮಾಡಬೇಕು, ಅನಂತರ ಅವರಿಗೆ ಪ್ರಮೋಷನ್ ಆಗಬೇಕೆಂದು ಇದೆ. ಅದನ್ನು ಬಿಟ್ಟು ಇವನನ್ನೂ ಒಂದನೇ ವರ್ಗ, ಅವನನ್ನೂ

ಒಂದನೇ ವರ್ಗ ಮಾಡಿದರೆ, ಯದ್ವಾತದ್ವಾ ಆಗುತ್ತದೆ. ಆಗ ಯಾರ ಮೇಲೆ ಯಾರು ಕುಳಿತುಕೊಳ್ಳಬೇಕೆಂದು ಗೊತ್ತಾಗುವುದಿಲ್ಲ. ಈ ದೃಷ್ಟಿಯಿಂದ ಕೆಲವು ದಿವಸಗಳವರೆಗಾದರೂ ಅಸಿಸ್ಟೆಂಟ್ ಕಮಿಷನರ್ ಹುದ್ದೆ ಅತ್ಯಂತ ಅವಶ್ಯ ಇದೆ. ಇನ್ನು ನಾಡ ಕಚೇರಿಗಳಿಗೆ ಡೆಪ್ಯೂಟಿ ತಹಶೀಲ್ದಾರ್ ರವರನ್ನು ಹಾಕಿದ್ದಾರೆ. ನಾನು ಈಗಾಗಲೇ ಯೋಚನೆ ಮಾಡಿದ್ದೇನೆ. ತಾವು ಮಂಜೂರಿ ಕೊಡುತ್ತೀರೋ ಇಲ್ಲವೋ ಗೊತ್ತಿಲ್ಲ. ಸರ್ಕಾರ ಅನುಮತಿ ಕೊಡುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ನನ್ನ ಮಟ್ಟಿಗೆ ನಾಡ ಕಚೇರಿ ನಿರುಪಯುಕ್ತ ಎಂದು ಅಭಿಪ್ರಾಯಪಟ್ಟಿದ್ದೇನೆ. ನಮ್ಮ ಸೆಕ್ರೆಟರಿಯವರು ವರ್ಕ್‌ಔಟ್ ಮಾಡಬೇಕಾಗಿದೆ. ನಾನು ಅವರನ್ನು ರಿಪೋರ್ಟ್ ಕೇಳಿದ್ದೇನೆ. ಅದು ಬಂದ ನಂತರ, ಕ್ಯಾಬಿನೆಟ್ ಮುಂದೆ ಇಟ್ಟು...

ಶ್ರೀ ಎಲ್. ಆರ್. ಶಿವರಾಮೇಗೌಡ.— ಅವುಗಳನ್ನು ಇವರ ಕಾಲದಲ್ಲಿ ಮಾಡಿದ್ದು. ಅದರಿಂದ ಏನೂ ಪ್ರಯೋಜನವಿಲ್ಲ. ಅಲ್ಲಿ ಏನೂ ನಡೆಯುತ್ತಾ ಇಲ್ಲ. ಆದ್ದರಿಂದ ದಯಮಾಡಿ ನಿಮ್ಮ ಕಾಲದಲ್ಲಾದರೂ ನಾಡ ಕಚೇರಿಗಳನ್ನು ತೆಗೆಯಿರಿ...

ಶ್ರೀ ಕೆ. ಹೆಚ್. ಪಾಟೀಲ್.— ಯಾರದೇ ಕಾಲ ಇದ್ದರೂ ಡೆಮಾಕ್ರಸೀನೇ ಅವರನ್ನೂ ಜನ ಆರಿಸಿದ್ದರು. ನಮ್ಮನ್ನೂ ಜನ ಆರಿಸಿದ್ದಾರೆ. ನನ್ನ ಅಭಿಪ್ರಾಯ ಈ ರೀತಿ ಇದೆ, ಈ ಅಭಿಪ್ರಾಯ ತಪ್ಪೋ ಒಪ್ಪೋ ಗೊತ್ತಿಲ್ಲ; ಆಫೀಸರಿಗೆ ಹೇಳಿದ್ದೇನೆ. ವರ್ಕ್‌ಔಟ್ ಮಾಡುತ್ತಿದ್ದಾರೆ. ಇದರ ಬಗ್ಗೆ ಇನ್ಸ್‌ಪೆಕ್ಷನ್ ಮಾಡಿ, ಸರಿ ಇದೆಯೋ ಇಲ್ಲವೋ ನೋಡುತ್ತೇನೆ. ನೋಡಿದ ನಂತರ ಕ್ಯಾಬಿನೆಟ್ ಮುಂದೆ ಇಟ್ಟು, ಅವಶ್ಯ ಇದ್ದರೆ ತಮ್ಮ ನಜರಿಗೂ ತಂದು, ನಾಡ ಕಛೇರಿಗಳನ್ನು ರದ್ದು ಮಾಡೋಣ. ನಾಡ ಕಛೇರಿಗಳನ್ನು ರದ್ದು ಮಾಡಿ ನಮ್ಮ ಜಿಲ್ಲೆಗಳನ್ನು ಪುನರ್ ವಿಂಗಡಣೆ ಮಾಡಿ, ಎಲ್ಲಾ ಅಧಿಕಾರಿಗಳನ್ನೂ ಅಲ್ಲಲ್ಲಿಗೆ ವರ್ಗಾವಣೆ ಮಾಡಿದರೆ, ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ನಡೆದೀತು ಎಂದು ನನ್ನ ಅನಿಸಿಕೆ. ಇನ್ನು ಲ್ಯಾಂಡ್ ಟ್ರಿಬ್ಯುನಲ್ಸ್ ಬಹಳ ದಿವಸದಿಂದ ಖಾಲಿ ಇವೆ. ಈ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಒಂದು ವಾರದೊಳಗಾಗಿ ನಾನು ಕಾನ್‌ಸ್ಟಿಟ್ಯೂಟ್ ಮಾಡುತ್ತೇನೆ...

ಶ್ರೀ ಡಿ. ಬಿ. ಚಂದ್ರೇಗೌಡ.— ಎಷ್ಟು ಕೇಸ್‌ಗಳು ಉಳಿದಿವೆ, ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಕೆ. ಹೆಚ್. ಪಾಟೀಲ್.— ಕೇಸ್‌ಗಳು ಹದಿನೇಳು ನೂರು ಮೇಲೆ ಇವೆ. ಇವೆಲ್ಲವೂ ಮುಗಿಯಬೇಕು. ಎಷ್ಟೇ ಇರಲಿ, ನಾವು ಮಾಡುವಂಥ ಕೆಲಸ, ಇದನ್ನು ಮಾಡಬೇಕು. ಈ ದೃಷ್ಟಿಯಿಂದ ಇನ್ನೊಂದು ವಾರದೊಳಗಾಗಿ ಇವೆಲ್ಲಾ ಕೇಸುಗಳನ್ನೂ...

ಶ್ರೀ ಎಂ. ಪಿ. ವೆಂಕಟೇಶ್.— ಹಿಂದಿನ ಕಮಿಟಿಗಳನ್ನು ಕಿತ್ತು ಹಾಕುತ್ತೀರಾ...

ಶ್ರೀ ಕೆ. ಹೆಚ್. ಪಾಟೀಲ್.— ಹಿಂದೆ ಯಾವುವೂ ಇಲ್ಲ, ನನಗೆ ಗೊತ್ತಿರುವ ಹಾಗೆ ಯಾವುವೂ ಇಲ್ಲ. ಯಾವುದಾದರೂ ಇದ್ದರೆ ಹೇಳಿ. ಅನಂತರ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯನ್ನು ಹಾಗೂ ಲ್ಯಾಂಡ್ ಟ್ರಿಬ್ಯುನಲ್ ಅನ್ನು ಮಾಡುವುದಕ್ಕೆ ತ್ವರಿತ ರೀತಿಯಿಂದ ಕೆಲಸ ಮಾಡುವುದಕ್ಕೆ ಹಚ್ಚಿದ್ದೇನೆ. ಈ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಮತ್ತು ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಒಂದು ವಾರದೊಳಗಾಗಿ ಮಾಡಿ ಮುಗಿಸುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅದಕ್ಕೆ ಎಲ್ಲಾ ಎಂ ಎಲ್.ಎ.ಗಳ ಸಹಕಾರ ಬೇಕು. ಯಾರು ಚಲೋ ಜನರು ನಿಮ್ಮ ತಾಲ್ಲೂಕಿನಲ್ಲಿದ್ದಾರೆ ಎಂದು ಹೇಳಿದರೆ, ನಿಜವಾಗಲೂ ಉತ್ತಮವಾದ ಜನರನ್ನು, ಸಾಧ್ಯವಾದಷ್ಟೂ ಲಂಚದಿಂದ ದೂರ ಇರತಕ್ಕ ಜನರನ್ನು ಸಾಧ್ಯವಾದಷ್ಟು ಟೆನೆನ್ಸಿಗೆ ಕಮಿಟ್ ಆಗುವಂತಹ ಜನರನ್ನು ಅದಕ್ಕೆ ಹಾಕಬೇಕೆಂಬುದು ನಮ್ಮ ಇಚ್ಛೆಯಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್.— ಈ ಕಡೆಯವರನ್ನೂ ಕೇಳುತ್ತೀರ.

ಶ್ರೀ ಕೆ.ಹೆಚ್. ಪಾಟೀಲ್.— ಸದಸ್ಯರು ಎಂದರೆ ಎಲ್ಲರೂ ಬರುತ್ತಾರೆ. ಆ ಕಡೆಯವರು ಈ ಕಡೆಯವರು ಎಲ್ಲರೂ ಬರುತ್ತಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಇವರಿಗೆ ಬೇಕು ಬೇಕಾದವರನ್ನು ಹಾಕಿಕೊಂಡು ಮಾಡಿ ರೂಢಿಯಾಗಿದೆ. ಅದಕ್ಕೆ ಈ ರೀತಿ ಕೇಳುತ್ತಿದ್ದಾರೆ. ನಾವು ಹೇಳಿದವರನ್ನೆಲ್ಲಾ ಹಾಕುತ್ತೀರಾ ?

ಶ್ರೀ ಕೆ.ಹೆಚ್. ಪಾಟೀಲ್.— ಈಚೆ ಕಡೆಯವರಾಗಲೀ, ಆಚೆ ಕಡೆಯವರಾಗಲೀ ನೀವು ಹೇಳಿದ ಎಲ್ಲರನ್ನೂ ಹಾಕುತ್ತೇನೆ ಎಂದಲ್ಲ. ನೀವು ಕೊಡತಕ್ಕ ಹೆಸರುಗಳನ್ನು, ನೀವು ಹೇಳತಕ್ಕ ಮಾತುಗಳನ್ನು ಬಹಳ ಲಕ್ಷ್ಯದಲ್ಲಿಟ್ಟುಕೊಂಡು ಹಾಕುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಈ ವಿಚಾರದಲ್ಲಿ ಶಾಸಕರು ಹೇಳುವಂತಹವರನ್ನು ಹೆಚ್ಚು ರೀತಿಯಲ್ಲಿ ಹಾಕಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.— ಎಲ್ಲಾ ನೀವೆ ಮಾಡುವುದಾದರೆ ನನ್ನದೇನು ತಕರಾರು ಇಲ್ಲ ನಿಮಗೆ ಅಧಿಕಾರ ಕೊಡುತ್ತೇವೆ. ಎಲ್ಲೆಲ್ಲಿ ಬೇಕೋ ನೀವು ಅಲ್ಲೇ ಮಾಡಿಕೊಳ್ಳಿ. ನಾನೂ ವಿಚಾರ ಮಾಡಬೇಕು. ನೀವು ಹೇಳುವಂತಹವನು ಅವನೇನು ಟೆನೆಂಟ್ ಇದ್ದಾನೋ, ಲ್ಯಾಂಡ್‌ಲಾರ್ಡ್ ಇದ್ದಾನೊ, ಕಳ್ಳ ಇದ್ದಾನೋ, ಸುಳ್ಳ ಇದ್ದಾನೋ ಎಂದು ವಿಚಾರ ಮಾಡಿ ಮಾಡುತ್ತೇನೆ. ನೀವು ಕೊಡುವಾಗ ಚಲೋ ಜನರನ್ನು ಕೊಟ್ಟರೆ ಅವರನ್ನೆ ಹಾಕುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್.— ಪೋಲೀಸ್ ರಿಪೋರ್ಟ್ ನೋಡುತ್ತೀರಾ ?

ಶ್ರೀ ಕೆ.ಎಚ್. ಪಾಟೀಲ್.— ಪೋಲೀಸ್ ರಿಪೋರ್ಟ್ ಒಂದೇ ಏಕೆ, ನನ್ನ ರಿಪೋರ್ಟ್ ಇದೆ. ನಿಮ್ಮ ಬಗ್ಗೆ ಮತ್ತೊಬ್ಬರನ್ನು ಕೇಳುತ್ತೇನೆ. ಮತ್ತೊಬರ ಬಗ್ಗೆ ನಿಮ್ಮನ್ನು ಕೇಳುತ್ತೇನೆ.

ಇನ್ನು ಸಿ ಅಂಡ್ ಡಿ ಫಾರಂ ಆಫ್ ಲ್ಯಾಂಡ್ ಬಗ್ಗೆ ಮಾನ್ಯ ಸದಸ್ಯರು ಬಹಳ ಆಳವಾದಂಥ ದಿಗ್ಭ್ರಮೆಯನ್ನು ವ್ಯಕ್ತ ಮಾಡಿದ್ದಾರೆ. ಇವುಗಳ ಡಿಸ್ಟ್ರಿಬ್ಯೂಷನ್ ಯಾವರೀತಿ ಮಾಡುತ್ತೀರಿ, ಮತ್ತು ಅನ್‌ಆಥರೈಸ್ಡ್ ಕಲ್ಟಿವೇಷನ್ ಬಗ್ಗೆ ಯಾವರೀತಿ ಮಾಡುತ್ತೀರಿ ಎಂದು ಕೇಳಿದ್ದಾರೆ. ಅನ್‌ಆಥರೈಸ್ಡ್ ಕಲ್ಟಿವೇಷನ್ ಸಲುವಾಗಿ ನಮ್ಮ ಖರ್ಗೆಯವರು ನಾನು ಹಿಂದಕ್ಕೆ ಮಾಡಿದ್ದೆ, ಗೌರ್ನಮೆಂಟ್ ನೋಟಿಫಿಕೇಷನ್‌ಗೇ ಇದು ಬರುತ್ತದೆ ಎಂದು ಹೇಳಿದರು. ಆದರೆ ಅವರು ಹೆಚ್ಚು ಧೈರ್ಯಶಾಲಿಗಳಾಗಿ ಮಾಡಿರಬಹುದು. ಆದರೆ ನಾನು ಕಾನೂನಿನ ವಿಷಯವಾಗಿ ವಿಚಾರ ಮಾಡಿದಾಗ ಸೆಕ್ಷನ್ ೯೪ನ್ನು ಅಮೆಂಡ್ ಮಾಡದೇ ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂಬ ಅಭಿಪ್ರಾಯ ಬಂದಿರುವುದರಿಂದ ಇದು ಆಗುವುದಿಲ್ಲ. ಇವತ್ತು ಮಾಡುವುದನ್ನು ಇನ್ನು ಎಂಟು ದಿನಕ್ಕೆ ಮಾಡಿದರೆ ಏನೂ ತೊಂದರೆಯಾಗುವುದಿಲ್ಲ ನೀವೆಲ್ಲಾ ಕೂಡಿ ಒಪ್ಪುವಾಗ ಸೆಕ್ಷನ್ ೯೪ ಅಮೆಂಡ್ ಆಗೇ ಆಗುತ್ತದೆ ಎಂಬ ಆತ್ಮ ವಿಶ್ವಾಸ ನನಗೆ ಇದೆ. ಈ ದೃಷ್ಟಿಯಿಂದ ನಾನು ಈಗಾಗಲೇ ಇದರ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇನೆ. ಕ್ಯಾಬಿನೆಟ್‌ನಲ್ಲಿ ಮಂಜೂರಾಗಿದೆ. ಇದೇ ಸದನದಲ್ಲಿ ನಿಮ್ಮೆದುರು ಬರುತ್ತಿದೆ. ಸೆಕ್ಷನ್ ೯೪ ಅಮೆಂಡ್ ಆದರೆ ರೆಗ್ಯುಲರೈಸೇಷನ್ ಆಫ್ ಲ್ಯಾಂಡ್ಸ್ ಆಗುತ್ತದೆ. ಆ ವೇಳೆಗೆ ಮಾನ್ಯ ಖರ್ಗೆಯವರು ಹೇಳಿದ ಹಾಗೆ ಎಸ್.ಸಿ.ಎಸ್.ಟಿ. ಜನರಿಗೆ ಕೆಲವು ಅನ್ಯಾಯ ಆಗಿದ್ದರೆ, ಅದನ್ನೂ ಗಮನದಲ್ಲಿಟ್ಟು ಕೊಂಡು ಅದನ್ನು ಪೂರ್ತಿ ನಿವಾರಣೆ ಮಾಡುವುದು ಆಗದಿದ್ದರೂ, ಎಷ್ಟರ ಮಟ್ಟಿಗೆ ಸಾಧ್ಯ ಇದೆಯೋ ಅಷ್ಟೆಲ್ಲಾ ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಲ್ಯಾಂಡ್ ಟ್ರಿಬ್ಯೂನಲ್ ವಿಷಯದಲ್ಲಿ ಕೆಲವರು ಕೇಸ್ ಎಲ್ಲಾ ಮುಗಿದೇ ಹೋಗಿದೆ ಎಂದು ಹೇಳಿದರು ಸಾಕಷ್ಟು ಕೇಸ್‌ಗಳು ಇನ್ನೂ ಇದ್ದಾವೆ. ಆ ಕೇಸ್‌ಗಳನ್ನು ಲ್ಯಾಂಡ್ ಟ್ರಿಬ್ಯೂನಲ್ ಎದುರಿಗೆ ಕೊಡುತ್ತೇವೆ. ಹೈಕೋರ್ಟಿನಿಂದ ರಿವಿಜನ್‌ಗೆ ಆರ್ಡರ್ ಆಗಿ ಬರುವುದನ್ನು ಯಾವರೀತಿ ಮಾಡಬೇಕೆಂಬುದೂ ಅದರ ಎದುರಿಗೆ ಬರುತ್ತದೆ. ಈ ಎಲ್ಲಾ ಕೇಸ್‌ಗಳನ್ನೂ ತೀವ್ರವಾಗಿ ವಿಚಾರಣೆ ಮಾಡಿದರೆ ಬಡ ಜನರಿಗೆ ಕಲ್ಯಾಣವಾಗುತ್ತದೆ. ನಾವು ಪಾಸ್ ಮಾಡಿದ ಕಾನೂನಿನ ಸದುಪಯೋಗ ಆಗುತ್ತದೆ. ಈ ದೃಷ್ಟಿಯಿಂದ ಇದನ್ನು ತರಬೇಕೆಂದಿದ್ದೇವೆ. ಇದಕ್ಕೆ ನಿಮ್ಮ ಬೆಂಬಲ ಬೇಕು ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರು ಒಂದು ಮಾತನ್ನು ಹೇಳಿದರು. ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ರಿಆರ್ಗನೈಸೇಷನ್ ಆಗಬೇಕೆಂದು ಹೇಳಿದರು, ನಿಜ. ರೀಆರ್ಗನೈಸ್ ಹೇಗೆ ಆಗಬೇಕೆಂಬುದರ ಬಗ್ಗೆ ಮೂರು ಕಮಿಟಿಗಳು ವರದಿ ಕೊಟ್ಟಿವೆ. ವಾಸುದೇವರಾವ್ ಸಮಿತಿ ೧೯೭೩ ರಲ್ಲಿ ವರದಿ ಕೊಟ್ಟಿದೆ. ಹುಂಡೇಕಾರ್ ಸಮಿತಿ ೧೯೮೦ ರಲ್ಲಿ ವರದಿ ಕೊಟ್ಟಿದೆ, ಗದ್ದೀಗೌಡರ್ ಸಮಿತಿ ೧೯೮೭ ರಲ್ಲಿ ವರದಿ ಕೊಟ್ಟಿದೆ ಇಷ್ಟು ದಿವಸಗಳಾದರೂ ಈ ಬಗ್ಗೆ ಇನ್ನೂ ಸರಕಾರದ ಗಮನ ಪೂರ್ತಿಯಾಗಿ ಹರಿದಿಲ್ಲ. ಈಗ ಮಾಡಲೇಬೇಕು. ಏಕೆಂದರೆ, ನನ್ನನ್ನು ಆರಿಸಿ ಕಳುಹಿಸಿದವರು ಗದಗ್‌ನವರು. ಗದಗೂ ಇದರೊಳಗೆ ಇದೆ. ನನ್ನ ಕೈಯೊಳಗೆ ಇದು ಆಗದೇ ಇದ್ದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್.— ಇದನ್ನು ಬೇಗ ಮಾಡಿ, ನಿಮ್ಮದೊಂದೇ ಮಾಡಿಕೊಳ್ಳಬೇಡಿ. ಇದನ್ನು ಮಾಡಿದರೆ ನಮ್ಮ ತಾಲ್ಲೂಕು ಜಿಲ್ಲೆ ಆಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.— ಅದನ್ನು ನಾನು ಮಾಡಲೇಬೇಕು. ಅದಕ್ಕಾಗಿ ನನ್ನನ್ನು ಅವರು ಚುನಾಯಿಸಿ ಕಳುಹಿಸಿದ್ದಾರೆ. ಅವರು ನನ್ನನ್ನು ಆರಿಸಿ ಕಳುಹಿಸುವಾಗ ಮ್ಯಾಂಡೇಟ್ ಕೊಟ್ಟಿದ್ದಾರೆ. ಆ ಮ್ಯಾಂಡೇಟ್ ಪಾಲನೆ ಮಾಡದಿದ್ದರೆ ನಾನು ನನ್ನ ಮತ ಕ್ಷೇತ್ರಕ್ಕೆ ದ್ರೋಹ ಮಾಡಿದಂತಾಗುತ್ತದೆ. ಆ ದೃಷ್ಟಿಯಿಂದ...

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**— ನಿಮ್ಮದು ಮಾಡುವಾಗ ನಮ್ಮದೂ ಗಮನದಲ್ಲಿಟ್ಟು ಕೊಂಡು ಮಾಡಬೇಕು.

**ಶ್ರೀ ಕೆ. ಎಚ್. ಪಾಟೀಲ್.**— ಒಂದೇ ಮಾಡಲಿಕ್ಕೆ ಬರುವುದಿಲ್ಲ. ಆ ವರದಿಯಲ್ಲಿ ಏನು ಇದೆ ಎನ್ನುವುದನ್ನು ಪರಿಶೀಲನೆ ಮಾಡಿ ಅದರಲ್ಲಿ ಯಾವು ಯಾವುದು ಯಾವ ರೀತಿಯಲ್ಲಿ ಮಾಡುವುದಕ್ಕೆ ಬರುತ್ತದೊ ಆ ರೀತಿಯಲ್ಲಿ ಮಾಡುತ್ತೇವೆ. ಅದರಲ್ಲಿ ಯಾವುದೇ ಸಂದೇಹ ಮಾನ್ಯ ಸದಸ್ಯರಿಗೆ ಬರುವುದು ಬೇಡ. ನನಗೆ ಇದೇ ತಿಂಗಳಲ್ಲಿ ಮಾಡಬೇಕೆನ್ನುವ ಮನಸ್ಸು ಇದೆ. ಆದರೆ ದುರ್ದೈವದಿಂದ ಸೆಂಟ್ರಲ್ ಗೌರ್ನ್‌ಮೆಂಟ್‌ನಿಂದ ಒಂದು ಸರ್ಕ್ಯುಲರ್ ಬಂದಿದೆ. ಅದೇನೆಂದರೆ, ಓಟರ್ಸ್ ಲಿಸ್ಟ್, ಸೆನ್ಸಸ್ ಮುಗಿಯುವವರೆಗೂ ನೀವು ಯಾವುದೇ ರೀತಿಯಾದ ತಾಲ್ಲೂಕು, ಹಳ್ಳಿ, ಜಿಲ್ಲೆಗಳ ಪುನರ್ ವಿಂಗಡಣೆ ಮಾಡಬಾರದು ಅಂತ ಬಂದಿದೆ. ಮಾಡಬಾರದು ಎಂದು ನಾವೇನೂ ಸುಮ್ಮನೆ ಕೈ ಕಟ್ಟಿ ಕೊಂಡು ಕುಳಿತುಕೊಂಡಿಲ್ಲ. ಅದನ್ನು ಮಾಡುವುದಕ್ಕೆ ಎಲ್ಲಾ ತಯಾರಿಗಳನ್ನು ಮಾಡಿಟ್ಟುಕೊಂಡಿದ್ದು ಕೆಲಸ ಪೂರೈಸಿರುತ್ತೇವೆ. ಆ ಸರ್ಕ್ಯುಲರ್ ಮಾರ್ಚಿ ೩೧ಕ್ಕೆ ಮುಗಿಯುತ್ತದೆ. ಮಾರ್ಚಿ ೩೧ರ ನಂತರ ಏಪ್ರಿಲ್ ನೊಳಗೆ ಈ ಕಾರ್ಯವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳು ವುದಕ್ಕೆ ಇಷ್ಟಪಡುತ್ತೇನೆ. ನಂತರ ಇನ್ನು ಬಹಳ ಪ್ರಮುಖವಾದ ವಿಷಯ ಏನೆಂದರೆ, ನಮ್ಮಲ್ಲಿ ಅನೇಕ ಕಡೆ ಲಂಬಾಣಿ ಎಸ್.ಟಿ.ಯವರು ಅಲ್ಲಲ್ಲಿ ವಾಸವಾಗಿದ್ದಾರೆ. ಆ ರೀತಿ ವಾಸ ಮಾಡುತ್ತಿರುವ ಎಲ್ಲಾ ಲಂಬಾಣಿಗಳಿಗೂ ಸಹಿತ ರಾಜ್ಯಾಂಗದಲ್ಲಿ ಯಾವ ಯಾವ ಅಧಿಕಾರಗಳು ಇವೆ, ಹಕ್ಕು ಇವೆ ಆ ಎಲ್ಲಾ ಅಧಿಕಾರಗಳು ಇವರಿಗೆ ಇಲ್ಲ. ಆ ಬಗ್ಗೆ ಒಬ್ಬ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶಿವಮೂರ್ತಿಯವರು ನನಗೆ ಇಲ್ಲಿ ಹೇಳದಿದ್ದರೂ ನನ್ನ ಗಮನಕ್ಕೆ ತಂದಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು ಮೂರುವರೆ ನೂರು ಲಂಬಾಣಿ ತಾಂಡಗಳು ಇರತಕ್ಕಂಥ ಗ್ರಾಮಗಳು ಇವೆ. ಇವು ಹ್ಯಾಮ್ಲೆಟ್ಸ್. ಅವುಗಳೆಲ್ಲವನ್ನೂ ಹಳ್ಳಿಗಳನ್ನಾಗಿ ಮಾಡ ಬೇಕೆಂದು ನನ್ನ ಉದ್ದೇಶ. ಇದು ತಡವಾಗಬಾರದು; ನಿಧಾನ ಅಪಾಯ. ಆದರೆ ನಾನು ಈಗಾಗಲೇ ಗೌರ್ನ್‌ಮೆಂಟ್ ಆಫ್ ಇಂಡಿಯಾದಿಂದ ಒಂದು ಸರ್ಕ್ಯುಲರ್ ಬಂದಿದೆ ಎಂದು ಹೇಳಿದ್ದೇನೆ. ಗೌರ್ನ್‌ಮೆಂಟ್ ಆಫ್ ಇಂಡಿಯಾದಿಂದ ಬಂದ ಸರ್ಕ್ಯುಲರನ್ನು ಆಲಿಸಿ ಏಪ್ರಿಲ್ ತಿಂಗಳಲ್ಲಿ ಮಾಡುವುದಕ್ಕೆ ಯಾವತ್ತೂ ತಯಾರಿ ಮಾಡಿ ಇಡಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಸದನದ ಮೂಲಕ ಆದೇಶ ಕೊಡುತ್ತಿದ್ದೇನೆ. ನಿಜವಾಗಿಯೂ ಅವರು ಬಹಳ ಉತ್ತಮ ಜನರು. ಬಹಳ ಸಜ್ಜನರು, ಅವರು ಹೊಲಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಹೊಲ ಬಿಟ್ಟರೆ ಅವರಿಗೆ ಮತ್ತೊಂದು ಇಲ್ಲ. ಆ ಹೊಲವೇ ಅವರಿಗೆ ದೇವರು. ಯಾರಿಗೂ ಅವರನ್ನು ಹೊಲದಿಂದ ಬಿಡಿಸುವುದಕ್ಕೂ ಆಗುವುದಿಲ್ಲ. ದುರ್ದೈವದಿಂದ ಏನಾಗಿದೆಯೆಂದರೆ, ನಮ್ಮ ರೆಕಾರ್ಡ್‌ನಲ್ಲಿ ಅದು ಫಾರೆಸ್ಟ್ ಲ್ಯಾಂಡ್ ಆಗಿದೆ. ಅದು ಎಂದೂ ಫಾರೆಸ್ಟ್ ಲ್ಯಾಂಡ್ ಅಲ್ಲ, ಇಂದೂ ಇಲ್ಲ, ಮುಂದೂ ಇಲ್ಲ ಎಂದೆಂದೂ ಇಲ್ಲ. ಆದರೆ ನಮ್ಮ ರೆಕಾರ್ಡ್‌ನಲ್ಲಿ ಮಾತ್ರ ಫಾರೆಸ್ಟ್ ಲ್ಯಾಂಡ್ ಎಂದು ಇದೆ. ನಮ್ಮಲ್ಲಿ ಯಾನಾದರೂ ಮನುಷ್ಯ ಸತ್ತ ಎಂದು ಹೇಳಲು ಮೂರು ಜನರು ಇದ್ದರೆ ಸಾಕು. ಒಬ್ಬರು ವಾರಸುದಾರರು, ಇಬ್ಬರು ಸಾಕ್ಷಿಗಳು ಇವರಿದ್ದರೆ ಆತ ಇದ್ದರೂ ಸತ್ತ ಹಾಗೆ. ಆ ಹಣೆಬರಹ ಇವತ್ತಿನ ದಿವಸ ಇವರಿಗಿದೆ. ನಾನು ಮೊನ್ನೆ ಎಲ್ಲಾ ಮುಖ್ಯಮಂತ್ರಿಗಳ ಕಾನ್ಫರೆನ್ಸ್‌ಗೆ ಡಿಲ್ಲಿಗೆ ಹೋಗಿದ್ದೆ. ನಾನು ಅಲ್ಲಿ ಮಾತನಾಡಿದ ನಂತರ ಶ್ರೀಮಾನ್ ವಿ.ಪಿ. ಸಿಂಗ್‌ರವರು ಮತ್ತು ಶ್ರೀಮಾನ್ ದೇವಿಲಾಲ್‌ರವರ ಗಮನಕ್ಕೆ ಈ ವಿಷಯ ತಂದೆ. ನೀವು ಎಲ್ಲಾ ಹೇಳುತ್ತೀರಿ, ಈ ಲಂಬಾಣಿ ಜನರಿಗೆ ಪ್ರೊಟೆಕ್ಷನ್ ಕೊಡಿ, ಅವರ ಹೊಲಗಳನ್ನು ಬಿಡಿಸಬೇಡಿ ಎಂದು ಬಾಯಲ್ಲಿ ಹೇಳಿದಂತೆ ಕೈಯಲ್ಲಿ ಮಾಡುವುದಕ್ಕೆ ತುಂಬಾ ಡಿಫಿಕಲ್ಟ್ ಇದೆ. ನನಗೆ ಈ ಡಿಫಿಕಲ್ಟಿ ಇದೆ, ನೀವು ಏನು ಮಾಡುತ್ತೀರಿ ಎಂದಾಗ ವಿಚಾರ ಮಾಡುತ್ತೇ ನೆಂದು ಶ್ರೀಮಾನ್ ವಿ ಪಿ ಸಿಂಗ್‌ರವರು ಹೇಳಿದ್ದಾರೆ. ಫಾರೆಸ್ಟ್ ಲ್ಯಾಂಡನ್ನು ಅವರಿಗೆ ಬಿಟ್ಟುಬಿಡ ಬೇಕೆಂಬ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ಅದು ಎಷ್ಟು ಏರಿಯಾ ಇದೆ ಎನ್ನುವುದನ್ನು ಸರ್ವೆ ಮಾಡಿಸಿ ಆ ಎಲ್ಲಾ ಏರಿಯಾವನ್ನು ಈ ಲಂಬಾಣಿ ಜನರಿಗೆ ಪುಕ್ಕಟೆಯಾಗಿ ಬಿಟ್ಟು ಕೊಡುವ ಸಲುವಾಗಿ ನೀವು ರಿಲೀಜ್ ಮಾಡಿ ಎಂದು ನಾನು ಅವರನ್ನು ಕೇಳಬೇಕು ಎಂದಿದ್ದೇನೆ. ಒಂದುವೇಳೆ ನಾವು ಮಾಡದಿದ್ದರೂ ಅವರು ಬಿಡುವುದಿಲ್ಲ, ಅವರನ್ನು ಆ ಜಾಗದಿಂದ ಬಿಡಿಸುವುದಕ್ಕೆ ಆಗುವುದಿಲ್ಲ. ಏನು ಮಾಡಿದರೂ ಅವರು ಆ ಲ್ಯಾಂಡನ್ನು ಬಿಡುವುದಿಲ್ಲ. ಅವರನ್ನು ಕೊಂದರೆ ಮಾತ್ರ ಅವರು ಆ ಲ್ಯಾಂಡ್ ಬಿಡುತ್ತಾರೆ ಹೊರತು ಇಲ್ಲದಿದ್ದರೆ ಬಿಡುವುದಿಲ್ಲ. ಹಾಗಾದರೆ ಅಂತಹ ಲ್ಯಾಂಡನ್ನು ಇಟ್ಟುಕೊಂಡು ಏನು ಉಪಯೋಗ ಅದು ಫಾರೆಸ್ಟ್ ಲ್ಯಾಂಡ್ ಎಂದು ಹೇಳುತ್ತಾರೆ. ನಾನು ನೋಡಿದಾಗ ಅಲ್ಲಿ ಒಂದು ಗಿಡವೂ ಇಲ್ಲ. ಅನೇಕ ಲ್ಯಾಂಡ್ಸ್ ಈ ರೀತಿ ಇವೆ. ಅದಕ್ಕೆ ನಾವು ಅವರಿಗೆ ಆ ಜಮೀನನ್ನು ಬಿಟ್ಟು ಕೊಟ್ಟು ನೋಡಿಯಪ್ಪ ನೀವು ಒಂದು ಎಕರೆಗೆ ನಾಲ್ಕು ಮರ ಬೆಳೆಸಬೇಕೆನ್ನುವ

ಮರತ್ತು ಹಾಕಿ ಕೊಟ್ಟರೆ ಅವರು ಗಿಡ ಬೆಳೆಸುತ್ತಾರೆ. ಆ ದೃಷ್ಟಿಯಿಂದ ಈ ವರ್ಷ ಅದೊಂದು ಪವಿತ್ರವಾದ ಕಾರ್ಯವನ್ನು ಮಾಡಬೇಕೆಂದು ನಮ್ಮ ರೆವಿನ್ಯೂ ಅಧಿಕಾರಿಗಳಿಗೆ ನಾನು ಈ ಮೂಲಕ ಹೇಳುತ್ತಿದ್ದೇನೆ. ಮತ್ತು ತ್ವರಿತವಾಗಿ ಈ ಕಾರ್ಯವನ್ನು ಮಾಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.— ಬೇರೆ ಜನಾಂಗದವರು ಇದ್ದರೂ ಮಾಡುತ್ತೀರಾ ಹೇಗೆ? ನನ್ನ ಕ್ಷೇತ್ರದಲ್ಲಿ ಟ್ರೈಬ್ಸ್ ಅಲ್ಲದೆ ಬೇರೆ ರೈತರು ಸುಮಾರು ೧೦ ಸಾವಿರ ಎಕರೆ ಮಾಡುತ್ತಿದ್ದಾರೆ.

ಶ್ರೀ ಕೆ ಎಚ್. ಪಾಟೀಲ್.— ನಾನು ಹೇಳಿದ್ದು ಯಾವುದು ಎಂದು ನಿಮಗೆ ತಿಳಿಯಲಿಲ್ಲ. ಊರು ಬಿಟ್ಟು ಹೊರಗಡೆವಾಸ ಮಾಡುವವರು ಯಾರು ಇದ್ದರೂ ಅವರಿಗೆಲ್ಲಾ ನಾವು ಮಾಡುತ್ತೇವೆ.

೩.೦೨ ಪಿ. ಎಂ.

ಈ ತರಹ ೩೫೦ ಗ್ರಾಮಗಳು ಇವೆ. ಆ ಗ್ರಾಮಗಳನ್ನು ನೋಟಿಫೈ ಮಾಡಬೇಕಾದರೆ ಸರ್ವೆ ನಂಬರ್ ಹಾಕಬೇಕು. ಸರ್ವೆ ನಂಬರ್ ಹಾಕಬೇಕಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ನಮಗೆ ಬಿಟ್ಟುಕೊಡಬೇಕು. ಇವೆಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಮುಖ್ಯವಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿನ ಕೆಲಸವನ್ನೇ ಮರೆತೆ. ಇವೆಲ್ಲಾ ಇತ್ತೀಚಿಗೆ ಬಂದ ಕೆಲಸ. ಲ್ಯಾಂಡ್ ರಿಫಾರ್ಮ್ಸ್ ಆಗಲಿ, ಲ್ಯಾಂಡ್ ಗ್ರ್ಯಾಂಟ್ ಆಗಲಿ ಮುಖ್ಯವಾದ ಕೆಲಸ ಏನು ? ಅವರು ರೆಕಾರ್ಡ್‌ನ್ನು ಸರಿಯಾಗಿ ಇಡುವುದಿಲ್ಲ. ಮಾನ್ಯ ಬಾಬಾಗೌಡ ಪಾಟೀಲರು ಬಹಳ ಚೆನ್ನಾಗಿ ಹೇಳಿದ್ದಾರೆ. ಮಾನ್ಯ ಬಾಬಾಗೌಡ ಪಾಟೀಲರು ಹೇಳಿದಂಥ ಮಾತನ್ನು ನಾನು ಒಪ್ಪುತ್ತೇನೆ ಇದು ಸರ್ವೇ ಆಗಬೇಕು. ಹೊಲಕ್ಕೂ ಹೋಗುವಾಗ ಸಹಿತ ದಾರಿ ಇಲ್ಲದ ಹಾಗೆ ಆಗಿದೆ. ಆಚೆಕಡೆಯವರು ಈಚೆಕಡೆಯವರು ಸಾಗಿಸಿದ್ದಾರೆ. ಹೊಲ ಸರ್ವೆ ಆಗದಿದ್ದರೆ ದಾರಿ ಇಲ್ಲ. ದಾರಿ ಇಲ್ಲದೆ ಬಹಳ ತೊಂದರೆಯಾಗಿದೆ ಎನ್ನುವ ಮಾತನ್ನು ಅವರು ಬಹಳ ಸುಂದರವಾಗಿ ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಎಲ್ಲವನ್ನೂ ಸರ್ವೆ ಮಾಡಬೇಕೆಂದರೆ ಜನ ಎಲ್ಲಿದ್ದಾರೆ? ಬ್ರಿಟಿಷ್‌ನವರು ಮಾಡಿರುವ ಸರ್ವೆಯನ್ನು ತೆಗೆದುಹಾಕಿ ಎಂದು ಒಂದು ಕಡೆ ಹೇಳುತ್ತಾರೆ ತೆಗೆದು ಹಾಕಿದರೆ ಮುಂದೆ ನಮ್ಮ ಸರ್ವೆ ಆಗುವುದೆಂದು ? ನಮ್ಮ ಕಾಲಕ್ಕಂತೂ ಆಗುವುದಕ್ಕೆ ಸಾಧ್ಯವಿಲ್ಲ. ಇನ್ನು ೧೦೦ ವರ್ಷ ಕಾಯಬೇಕೋ ಏನೋ, ಈಗಿನ ಸರ್ವೆ ಡಿಪಾರ್ಟ್‌ಮೆಂಟಿಗೆ ಈ ಕೆಲಸವನ್ನು ವಹಿಸಿದರೆ ಇನ್ನೂ ಸಾವಿರಾರು ಜನರನ್ನು ನೇಮಿಸಬೇಕಾಗುತ್ತದೆ, ಒಂದು ಕೂರ್ಗ್‌ನಲ್ಲಿ ಸರ್ವೆ ಮುಗಿಸಬೇಕೆಂದರೆ ಎರಡು ವರ್ಷವಾದರೂ ಕೂರ್ಗ್‌ನಲ್ಲಿ ಸರ್ವೆ ಕೆಲಸ ಮುಗಿಯಲಿಲ್ಲ, ಇನ್ನೂ ಹಾಗೇ ಇದೆ. ಕೂರ್ಗ್‌ನಲ್ಲಿ ಇರತಕ್ಕಂಥ ಸರ್ವೇಯರುಗಳು ವಸೂಲಿ ಹೆಚ್ಚು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಯಾರೂ ಹೋಗುವುದಕ್ಕೂ ತಯಾರಿಲ್ಲ. ಏಕೆಂದರೆ ಕೆಲಸ ಇದೆ. ಕೆಲಸ ಇಲ್ಲದೆ ಇರುವವರು ಯಾರದೋ ಹೊಲಕ್ಕೆ ಯಾವುದೋ ಬಾಂದ್ ಕಲ್ಲು ಹಾಕಿ ರೂಪಾಯಿ ತೆಗೆದುಕೊಳ್ಳುವ ಕೆಲಸಕ್ಕೆ ಬರುತ್ತಾರೆ. ಇದು ಬಂದ್ ಆಗಬೇಕು. ಪೂರ್ತಿ ಸರ್ವೆ ಆಗಬೇಕು. ಅದಕ್ಕೆ ಸರ್ವೆ ಡಿಪಾರ್ಟ್‌ಮೆಂಟಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಫೀಸರ್‌ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಫೀಸರ್‌ಗಳನ್ನು ತೆಗೆದುಕೊಳ್ಳತಕ್ಕಂಥದ್ದಕ್ಕೆ ಇರುವ ಬ್ಯಾನ್‌ಅನ್ನು ತೆಗೆದುಹಾಕಬೇಕೆಂದು ನಾನು ಫೈನಾನ್ಸ್ ಮಿನಿಸ್ಟರ್‌ಗೆ ಹೇಳಿದ್ದೇನೆ. ಅವರು ಈಗಲೇ ಅದರ ಬಗ್ಗೆ ಕಮಿಟ್ ಮಾಡಬೇಡಿ ಆದರೆ ಅದರ ಬಗ್ಗೆ ವಿಚಾರ ಮಾಡೋಣವೆಂದು ಹೇಳಿದ್ದಾರೆ. ಅದಕ್ಕೆ ನಾನು ಮತ್ತೊಮ್ಮೆ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ, ಹಾಗೂ ಈ ವಿಷಯವನ್ನು ಕ್ಯಾಬಿನೆಟ್ ಎದುರಿಗೂ ಇಡುತ್ತೇನೆ. ಹೆಚ್ಚು ಜನರನ್ನು ನೇಮಿಸಿ ಕಡೆಗೆ ಒಂದೊಂದು ವರ್ಷಕ್ಕೆ ೪-೫ ಜಿಲ್ಲೆಗಳನ್ನಾದರೂ ಸರ್ವೆ ಮಾಡಿದರೆ ೫ ವರ್ಷದೊಳಗಾಗಿ ನಾವು ಪೂರಾ ಸರ್ವೆ ಮಾಡುವುದಕ್ಕೆ ಸಾಧ್ಯವಾದೀತೆಂದು ನಾನು ಅಂದುಕೊಂಡಿದ್ದೇನೆ ಆ ದೃಷ್ಟಿಯಿಂದ ಕೆಲಸ ಮಾಡಬೇಕು. ಇನ್ನು ರೆಕಾರ್ಡ್ಸ್ ರೆಕಾರ್ಡ್ಸ್ ಇವತ್ತು ಏನಾಗಿದೆ ? ಎಂದೋ ಬ್ರಿಟಿಷರ ಕಾಲದಲ್ಲಿ ಮಾಡಿದ ರೆಕಾರ್ಡ್ ಹಾಳೆಗಳನ್ನು ಮುಟ್ಟಿದರೆ ಎಲ್ಲಾ ಪುಡಿ ಪುಡಿಯಾಗುತ್ತದೆ. ಇವನ್ನೆಲ್ಲಾ ಹೊಸದಾಗಿ ಬರೆಸೋಣವೆಂದರೆ ಸ್ಟಾಫ್ ಇಲ್ಲ. ಲ್ಯಾಂಡ್ ರೆಕಾರ್ಡ್ಸ್ ಡಿಪಾರ್ಟ್‌ಮೆಂಟ್ ಏನಿದೆ ಅದು ದೇಶದಲ್ಲಿ ಅತ್ಯಂತ ಮಹತ್ವವಾದಂಥ ಡಿಪಾರ್ಟ್‌ಮೆಂಟ್. ಲ್ಯಾಂಡ್ ರೆಕಾರ್ಡ್ಸ್ ಡಿಪಾರ್ಟ್‌ಮೆಂಟ್ ಸುಧಾರಣೆಯಾಗದಿದ್ದರೆ ಯಾವ ಖಾತೆಯೂ ಸುಧಾರಣೆಯಾಗುವುದಿಲ್ಲ. ಇದರ ಕಡೆ ಲಕ್ಷ್ಯ ಇಟ್ಟು ನಾವು ಆದಷ್ಟು ಬೇಗ ಇದಕ್ಕೆ ಬೇಕಾದ ಸೌಕರ್ಯಗಳನ್ನು ಕೊಡಬೇಕು. ನನ್ನ ಅಭಿಪ್ರಾಯದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆಫೀಸನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಬೇಕು. ಹಾಗೂ ಇದಕ್ಕೆ ಕಂಪ್ಯೂಟರೈಸೇಷನ್ ಮಾಡಬೇಕು. ಕಂಪ್ಯೂಟರ್ ಮೂಲಕ ರೆಕಾರ್ಡ್ಸ್ ಆಫ್ ರೈಟ್ಸನ್ನು ನೋಂದಾಯಿಸಿದರೆ ಅದು ಎಷ್ಟು ವರ್ಷಗಳಾದರೂ ಹಾಗೇ ಇರುತ್ತದೆ ಆಮೇಲೆ ನಕಾಶೆ ತೆಗೆಯಬೇಕಾದರೆ, ಹಾಳೆ ಇರುವುದಿಲ್ಲ, ಹಾಳೆ ಇದ್ದರೆ ಅದರಲ್ಲಿ ಗೆರೆ ಹಾಕುವುದಕ್ಕೆ ಇಂಜಿನಿಯರ್

ಇರುವುದಿಲ್ಲ, ಇಂಜಿನಿಯರನ್ನು ನೇಮಿಸಿದರೆ ಟ್ರೇಸರ್ ಇರುವುದಿಲ್ಲ. ಇವೆಲ್ಲಾ ಡಿಮ್ಯಾಂಡ್ಸ್‌ನ್ನು ಪೂರೈಸಬೇಕಾದರೆ ಬಹಳ ವರ್ಷಗಳು ಬೇಕು. ಒಂದು ಹಳ್ಳಿಯ ಮ್ಯಾಪನ್ನು ಒಬ್ಬ ಇಂಜಿನಿಯರ್ ಅಥವಾ ಒಬ್ಬ ಟ್ರೇಸರೋ ಕೂಡಿ ತಯಾರು ಮಾಡಬೇಕಾದರೆ ಎಷ್ಟೋ ದಿವಸಗಳು ಬೇಕು. ನಾನು ಮೊನ್ನೆ ಚೀಫ್ ಮಿನಿಸ್ಟರ್ ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ಅಲ್ಲಿ ಓದಿ ನೋಡಿದೆ ಕೇಂದ್ರ ಸರ್ಕಾರದ ಒಂದು ಸ್ಕೀಮ್ ಇದೆ, ಅವರು ಸೆಂಟ್ ಪರ್‌ಸೆಂಟ್ ಗ್ರ್ಯಾಂಟ್ ಕೊಡುತ್ತಾರೆ. ಆದರೆ ಆ ಸ್ಕೀಮ್ ಮಂಜೂರಾಗಬೇಕು. ಆ ಸ್ಕೀಮಿನ ಅನ್ವಯ ಕಂಪ್ಯೂಟರೈಸೇಷನ್ ಮಾಡಿದರೆ ಒಂದು ದಿವಸದಲ್ಲಿ ಅದು ಮಾಡತಕ್ಕ ಕೆಲಸವನ್ನು ಇವರು ೨ ತಿಂಗಳಾದರೂ ಮಾಡುವುದಕ್ಕಾಗುವುದಿಲ್ಲ ಎಂದು ಬರೆದಿದ್ದಾರೆ. ಅಲ್ಲಿಗೆ ನಮ್ಮ ಆಫೀಸರ್‌ಗಳನ್ನು ಕಳುಹಿಸಿ ಟ್ರೈನಿಂಗ್ ತೆಗೆದುಕೊಂಡು ಬರುವುದಕ್ಕೆ ವಿಚಾರ ಮಾಡೋಣ.

ಡಾ॥ ಎಸ್.ಬಿ. ನಂಜಪ್ಪ.—ಲ್ಯಾಂಡ್ ರೆಕಾರ್ಡ್ಸ್‌ನ್ನು ಮೈಕ್ರೋ ಫಿಲಂ ರೂಪದಲ್ಲಿ ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಮೈಕ್ರೋ ಫಿಲಂ ಬಹಳ ಕಾಸ್ಟ್ಲಿ ಮತ್ತು ಬಹಳ ತಡವಾಗುತ್ತದೆ. ನಾನು ಹೇಳುತ್ತಿರುವುದು ಮೈಕ್ರೋ ಫಿಲ್ಮನ್ನೂ ಮೀರಿಸಿಹೋದಂಥ ವಿಜ್ಞಾನ. ನೀವು ಹೇಳುತ್ತಿರುವುದು ೧೯೮೬ನೇ ಇಸವಿಯದು. ನಾನು ೧೯೮೯-೯೦ನೇ ಇಸವಿಯ ಮುಂದುವರಿದ ಕಂಪ್ಯೂಟರೈಸೇಷನ್‌ದು ಹೇಳುತ್ತಿದ್ದೇನೆ. ಈ ಒಂದು ಕಂಪ್ಯೂಟರೈಸೇಷನ್‌ನಲ್ಲಿ ತಾನೇ ಗೆರೆ ಹಾಕುವಂತಹ ಮಿಷಿನ್‌ಗಳು ಬಂದಿದೆ. ಅದನ್ನು ಮಾಡಿದರೆ ಒಂದು ದಿವಸಕ್ಕೆ ೫೦-೬೦ ಹಳ್ಳಿಗಳ ನಕಾಶೆಗಳನ್ನು ತಯಾರು ಮಾಡಲಿಕ್ಕೆ ಆಗುತ್ತದೆ. ಮತ್ತು ಎಷ್ಟು ಬೇಕೋ ಅಷ್ಟು ಕಾಪಿಗಳು ಸಿಗುತ್ತವೆ. ಮೈಕ್ರೋ ಫಿಲಂ ಆದರೆ ಮೈಕ್ರೊ ಫಿಲಂದನ್ನು ಮಾಡೋಣ ಅಥವಾ ಇದನ್ನು ಮಾಡುವುದಾದರೆ ಮಾಡೋಣ. ಯಾವುದೇ ದೃಷ್ಟಿಯಿಂದಾಗಲಿ ನಮ್ಮ ರಿಕಾರ್ಡ್‌ಗಳನ್ನು ಅಪ್ ಟು ಡೇಟ್ ಮಾಡಬೇಕು ಎನ್ನುವಂಥಾದ್ದು ನಿರ್ವಿವಾದವಾದುದು. ಆ ದೃಷ್ಟಿಯಿಂದ ನಾವು ನಮ್ಮ ಕಾರ್ಯವನ್ನು ಮುಂದುವರಿಸೋಣ. ಈ ಲ್ಯಾಂಡ್ ರಿಕಾರ್ಡ್ಸ್‌ನಲ್ಲಿ ನಮ್ಮ ಪದ್ಧತಿಯು ಬಹಳ ತಪ್ಪು ಇದೆ. ಇವೊತ್ತು ಸಬ್‌ರಿಜಿಸ್ಟ್ರಾರ್ ಕಚೇರಿಯೊಳಗೆ ಏನು ನಡೆಯುತ್ತಿದೆ ಎಂದು ಬಹಳ ಜನ ಮಾನ್ಯ ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಅವರು ಆ ವಿಚಾರದಲ್ಲಿ ಬಹಳ ಕಡಿಮೆ ಮಾತನಾಡಿದ್ದಾರೆ. ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಹಾಕುವ ಬೆಲೆ ಒಂದು, ಕೊಟ್ಟಿರುವ ಬೆಲೆ ಒಂದು. ಹೀಗೆ ಮಾಡುವುದರಿಂದ ಸ್ಟ್ಯಾಂಪ್ ಡ್ಯೂಟಿ, ರಿಜಿಸ್ಟ್ರೇಶನ್ ಫೀ, ಇನ್‌ಕಂಟ್ಯಾಕ್ಸ್, ಮುಂತಾದ ಸರಕಾರದ ಆದಾಯ ಎಷ್ಟು ನಷ್ಟವಾಗುತ್ತದೆ. ಇದರಲ್ಲಿ ವೈಟ್‌ಮನಿ ಇದ್ದವರಿಗೆ ಬ್ಲಾಕ್‌ಮನಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಅಂಥ ಅನೇಕ ಕಾರಣಗಳಿಗೆ ನಮ್ಮ ಅಧಿಕಾರಿಗಳು ಕಾರಣರು. ನಮ್ಮ ಕಾನೂನು ಸಹಿತ ಅವರಿಗೆ ಹೊಂದಾಣಿಕೆ ಆಗುವಂಥಾದ್ದು ಇದೆ. ೧೨ ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಉತ್ಪನ್ನ ಇರುವವರು ಯಾರೂ ಹೊಲ ಖರೀದಿ ಮಾಡಬಾರದು ಎಂದು ಕಾನೂನು ಇದೆ, ೧೨ ಸಾವಿರ ಉತ್ಪನ್ನ ಇವೊತ್ತಿನ ದಿವಸ ಯಾರಿಗೆ ಇರುವುದಿಲ್ಲ ಎಂದು ಹೇಳಿ? ಇಲ್ಲಿ ಇರತಕ್ಕಂಥ ಒಬ್ಬ ಜವಾನನಿಗೂ ಕೂಡ ೧೨ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಆದಾಯ ಇದೆ. ಹಾಗಿದ್ದ ಮೇಲೆ ಅವನು ಹೊಲ ಖರೀದಿ ಮಾಡುವುದಕ್ಕೆ ಬರುವುದಿಲ್ಲ. ಉಳಿದವರ ವಿಷಯ ಬಿಟ್ಟು ಬಿಡಿ. ಇನ್ನೂ ಶಾಣೆ ಇದ್ದವರು ಖರೀದಿ ಮಾಡಬಹುದು. ಏಕೆಂದರೆ ಸುಳ್ಳು ಹೇಗೆ ಹೇಳಬೇಕೆನ್ನುವುದು ಅವರಿಗೆ ಗೊತ್ತಿದೆ, ತರಬೇಕಾಗಿದೆ. ಅವರು ೧೨ ಸಾವಿರ ಇದ್ದುದ್ದನ್ನು ಎರಡು ಸಾವಿರ ಎಂದು ಮಾಡಿ ಹೊಲ ಖರೀದಿ ಮಾಡುತ್ತಾರೆ. ಅವರು ಖರೀದಿ ಮಾಡಿದ್ದನ್ನು ಸಬ್-ರಿಜಿಸ್ಟ್ರಾರ್ ನೋಂದಣಿ ಮಾಡುತ್ತಾನೆ. ಮೊನ್ನೆ ನನ್ನ ಗಮನಕ್ಕೆ ಒಂದು ವಿಚಾರ ಬಂತು. ೧೧ ಲಕ್ಷ ರೂಪಾಯಿಗಳ ಬೆಲೆ ಬಾಳುವ ಆಸ್ತಿಯನ್ನು ೫೦ ಸಾವಿರ ರೂಪಾಯಿಗಳಿಗೆ ವ್ಯಾಲ್ಯುವೇಶನ್ ಮಾಡಿದ್ದಾರೆ. ಹೀಗೆ ಎಷ್ಟು ಆಸ್ತಿಗಳು ಆಗುತ್ತಿವೆಯೋ ಏನೋ ಕೆಲವರು ಬೆಂಗಳೂರಿನ ಆಸ್ತಿಯನ್ನು ಮುಂಬಯಿ, ಮದ್ರಾಸ್‌ನಲ್ಲೂ ಮಾರುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅವನ್ನೆಲ್ಲಾ ಪರಿಶೀಲನೆ ಮಾಡಬೇಕಾಗಿದೆ. ಅವಶ್ಯಕತೆ ಇದ್ದರೆ ಆ ಕಾನೂನು ಬದಲಾವಣೆ ಆಗಬೇಕು. ಬೆಂಗಳೂರಿನ ಆಸ್ತಿ ಬೆಂಗಳೂರಿನಲ್ಲೇ ರಿಜಿಸ್ಟರಾಗಬೇಕೇ ಹೊರತು ಬಾಂಬೆ ಮದ್ರಾಸಿನಲ್ಲಿ ಆಗಬಾರದು. ಅದರಲ್ಲಿ ಏನಾದರೂ ನ್ಯೂನತೆಗಳಿದ್ದರೆ ಆ ನ್ಯೂನತೆಗಳನ್ನು ತೆಗೆದು ಹಾಕಲಿಕ್ಕಾಗಿ ಕಾನೂನನ್ನು ಬದಲಾವಣೆ ಮಾಡೋಣ. ಇದಕ್ಕೆಲ್ಲಾ ನಮ್ಮದೂ ಕಾರಣ ಇದೆ. ಹೇಗೆಂದರೆ, ಅವರಿಗೆ ನಿರ್ದಿಷ್ಟವಾದ ವಿವರಣೆಗಳನ್ನು ನಾವು ಕೊಟ್ಟಿಲ್ಲ. ಇವೊತ್ತು ಸಬ್‌ರಿಜಿಸ್ಟ್ರಾರ್ ಕಾಗದವನ್ನು ರಿಜಿಸ್ಟರ್ ಮಾಡಿದರೆ ಮಾರುದಿವಸ ಆ ಕಾಗದದ ನೋಂದಾವಣೆಯ ಶೀಟು ತಹಶೀಲ್ದಾರ್ ಕಚೇರಿಗೆ ಒಂದು ಹೋಗಬೇಕು. ವಿಲೇಜ್ ಅಕೌಂಟೆಂಟ್‌ಗೆ ಒಂದು ಹೋಗಬೇಕು. ಇದು ಮುಂಬೈ ರಾಜ್ಯದಲ್ಲಿದ್ದಂಥ ಪದ್ಧತಿ ಅದು ಈಗ ಆಗುವುದಿಲ್ಲ. ಇವೊತ್ತು ರಿಜಿಸ್ಟರ್ ಆದರೆ

ಖರೀದಿದಾರನ ಕೈಗೆ ಕಾಗದ ಬರುವುದಕ್ಕೂ ಸಾಕಷ್ಟು ಸಮಯ ಬೇಕಾಗುತ್ತದೆ. ತಹಶೀಲ್ದಾರರ ಹತ್ತಿರಹೋದರೆ ಅದನ್ನು ಕಸದ ಬುಟ್ಟಿಗೆ ಎಸೆಯುತ್ತಾರೆ. ಹೊಲ ಖರೀದಿ ಮಾಡಿದವರು ಪುನಃ ಹಣ ಕೊಟ್ಟೇ ಅವನ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಇಂಥ ಒಂದು ದುರ್ದೈವ ನಮ್ಮಲ್ಲಿ ಇದೆ. ಇದನ್ನೆಲ್ಲಾ ತೆಗೆದು ಹಾಕಬೇಕಾದರೆ ಸಮಾಜದಲ್ಲಿ ಕ್ರಾಂತಿಯಾಗಬೇಕು. ಇದನ್ನು ಕೇವಲ ಮಂತ್ರಿಗಳಾಗಲಿ, ಅಧಿಕಾರಿಗಳಾಗಲಿ, ಲಂಚಕೋರರಾಗಲಿ, ಲಂಚ ಹಿಡಿಯುತ್ತೇನೆ ಎನ್ನುವವರಾಗಲಿ, ಲೋಕಾಯುಕ್ತರಿಂದಾಗಲಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಯಾರು ರೊಕ್ಕ ತಿನ್ನುತ್ತಾರೆ, ಯಾರು ಲಂಚಕೋರ ಇರುತ್ತಾನೆ ಅವನು ಮೊದಲೆ ವ್ಯವಸ್ಥೆ ಮಾಡಿಕೊಂಡಿರುತ್ತಾನೆ. ಕಾನೂನು ಮಾಡುವವರಿಗಿಂತಲೂ ಕಾನೂನು ಮುರಿಯುವವರು ಹೆಚ್ಚು ಬುದ್ಧಿವಂತರಾಗಿರುತ್ತಾರೆ. ಇದನ್ನೆಲ್ಲಾ ಮಾಡಬೇಕಾದರೆ ಸಮಾಜದಲ್ಲಿ ಕ್ರಾಂತಿಯಾದರೆ ಮಾತ್ರ ಸಾಧ್ಯವಾಗುತ್ತದೆ. ನಾವುಗಳು ಜಾಗೃತರಾಗಬೇಕಾಗುತ್ತದೆ. ನಾವು ಯಾವುದೇ ಪರಿಸ್ಥಿತಿಯಲ್ಲಿ ಲಂಚ ಕೊಡುವುದಿಲ್ಲ, ಕೆಲಸ ಮಾಡದಿದ್ದರೆ ನಾವು ಮಂತ್ರಿಗಳ ಹತ್ತಿರ ಹೋಗಿ ನಮ್ಮ ಕೆಲಸ ಮಾಡಿಸಿಕೊಳ್ಳುತ್ತೇವೆ ಎನ್ನುವ ಒಂದು ನೈತಿಕ ಧೈರ್ಯ ಜನರಲ್ಲಿ ಬರಬೇಕು ಅಂದಾಗ ಮಾತ್ರ ಈ ಲಂಚ ಕಡಿಮೆಯಾಗುತ್ತದೆ. ಬಾಯಲ್ಲಿ ಹೇಳುತ್ತಾ ಹೋದರೆ ಲಂಚ ಸ್ವಲ್ಪ ಕಡಿಮೆ ಆಗಬಹುದೇ ಹೊರತು ಬಂದ್ ಆಗುವುದಿಲ್ಲ ಇವೊತ್ತು ರಿಜಿಸ್ಟರ್ಡ್ ವರದಿ ತಲಾಟಿ ಹತ್ತಿರ ಹೋದ ನಂತರ ತಲಾಟಿ ತಕ್ಷಣ ಹಕ್ಕು ರಿಜಿಸ್ಟರ್‌ನಲ್ಲಿ ಆ ಹೆಸರನ್ನು ಎಂಟ್ರಿ ಮಾಡಬೇಕು. ಅದನ್ನು ಪೆನ್ಸಿಲ್‌ನಲ್ಲಿ ಎಂಟ್ರಿ ಮಾಡಿದ್ದನ್ನು ಅದು ಸಮರ್ಪಕವಾಗಿ ಇದೆಯೋ ಇಲ್ಲವೋ ಎಂಬುದನ್ನು ಅಸಿಸ್ಟೆಂಟ್ ಕಮಿಶನರ್ ತಹಶೀಲ್ದಾರ್, ಶಿರಸ್ತೇದಾರ್ ಇವರು ಆ ಊರಿಗೆ ಹೋದಾಗ ನೋಡಿದ ನಂತರ ಸರಿಯಾಗಿದ್ದರೆ ಪೆನ್ಸಿಲ್‌ನಲ್ಲಿ ಎಂಟ್ರಿ ಆದುದನ್ನು ತೆಗೆದು ಇಂಕ್‌ನಲ್ಲಿ ಮಾಡಬೇಕು. ಆಗ ಅದು ಪರಿಪೂರ್ಣ ರೆಕಾರ್ಡ್ ಆಗುತ್ತದೆ. ಹೀಗೆ ಸರಿಯಾದಂಥ ಒಂದು ರೆಕಾರ್ಡ್ ಇಲ್ಲದಿದ್ದರೆ ತಲಾಟಿಯಾಗಲಿ, ಇನ್ನಾರೇ ಸಂಬಂಧಪಟ್ಟವರಾಗಲಿ, ಹಿತಾಸಕ್ತಿಗಳಿಗೆ ಮಣಿದು ರಿಕಾರ್ಡನ್ನು ಬೇರೆ ರೀತಿಯಲ್ಲಿ ಮಾಡುವ ಸಂದರ್ಭಗಳೂ ಇವೆ. ಅದನ್ನು ತಪ್ಪಿಸಬೇಕಾದರೆ ರಿಕಾರ್ಡ್‌ಗಳನ್ನು ಪರಿಪೂರ್ಣವಾಗಿ ಇಟ್ಟಿರಬೇಕು. ಡಿಸ್ಪ್ಯೂಟ್ ಇದ್ದರಂತೂ ಆ ರಿಕಾರ್ಡ್ಸ್‌ನ್ನು ತಹಶೀಲ್ದಾರರು ಅಥವಾ ಅಸಿಸ್ಟೆಂಟ್ ಕಮಿಶನರ್ ವೆರಿಫೈ ಮಾಡಬೇಕು. ಅವರ ಮೇಲೆ ಇರತಕ್ಕ ಡೆಪ್ಯುಟಿ ಕಮಿಷನರು ಯಾವಾಗ ಆದರೂ ಆ ಊರಿಗೆ ಹೋದರೆ ಅವರು ಕೂಡ ಸರಿಯಾಗಿ ಮಾಡಿದೆಯೆ ಇಲ್ಲವೇ ಎಂದು ವೆರಿಫೈ ಮಾಡಬೇಕು.

ಈ ಡಿಸ್‌ಪ್ಯೂಟ್ ಹಾಕಿದಮೇಲೆ ವಾರಸುದಾರರಿಗೆ ನೋಟೀಸ್ ಕೊಟ್ಟು ಎನ್‌ಕ್ವಯರಿ ಮಾಡಬೇಕೆಂದರೆ ಹಾಗೆ ಮಾಡಲು ಅಸಿಸ್ಟೆಂಟ್ ಕಮಿಷನರಿಗೆ ಅಧಿಕಾರ ಇಲ್ಲ. ಇದನ್ನೆಲ್ಲ ಮಾಡಿದರೆ ಏನೂ ತಕರಾರು ಇರುವುದಿಲ್ಲ. ಆದರೆ ಇದನ್ನು ಮಾಡುವುದಿಲ್ಲ. ಯಾರದೋ ಹೊಲ ಯಾರಿಗೋ ಆಗುತ್ತದೆ ಈ ದೃಷ್ಟಿಯಿಂದ ಸಬ್ ರಿಜಿಸ್ಟ್ರಾರ್ ಕಚೇರಿಯನ್ನು ಬಹಳ ಕೂಲಂಕಷವಾಗಿ ಸ್ವಚ್ಛ ಮಾಡುವಂತಹ ಕೆಲಸ ಮಾಡಬೇಕಾಗಿದೆ. ಆದರೂ ಸ್ವಚ್ಛ ಮಾಡುವ ಕೆಲಸವನ್ನು ಪ್ರಾರಂಭಮಾಡೋಣ. ಅದು ಒಮ್ಮೆಲೇ ಆಗುತ್ತದೆಂದು ನಾನು ಹೇಳಲಾರೆ. ಪ್ರಯತ್ನ ಮಾಡೋಣ.

ಈ ರೆಕಾರ್ಡ್ ಅಪ್‌ಟುಡೇಟ್ ಮಾಡಿದ ಮೇಲೆ ಅದನ್ನು ಎಲ್ಲಿ ಇಡಬೇಕೆಂಬುದು ನಮ್ಮ ಮುಂದಿರುವ ಸಮಸ್ಯೆ. ಹಿಂದಿನ ಕಾಲಕ್ಕೂ ಈಗಿನ ಕಾಲಕ್ಕೂ ಬಹಳ ವ್ಯತ್ಯಾಸ ಇದೆ. ಹಿಂದೆಯೆಲ್ಲಾ ತಲಾಟಿಯವರು ಮತ್ತು ಶ್ಯಾನಭೋಗರೂ ಊರಿನಲ್ಲೇ ಇರುತ್ತಿದ್ದರು. ಏನಾದರೂ ಆಕಸ್ಮಿಕವಾಗಿ ಏರುಪೇರಾದರೆ ಕೊಡಲಿ ಪ್ರಸಾದ ಕೊಡುತ್ತಾರೆಂದು ಹೆದರುತ್ತಿದ್ದರು. ಆದರೆ ಇವತ್ತು ಯಾರೂ ಹೆದರುವ ಹಾಗಿಲ್ಲ. ಇವತ್ತಿನ ತಲಾಟಿ ಏನಾದರೂ ಹೆಚ್ಚೂಕಡಿಮೆ ಮಾಡಿದರೆ ಹಳ್ಳಿಯವರ ಕೈಗೆ ಸಿಗದಂತೆ ಹೊರಟುಹೋಗುತ್ತಾನೆ. ಹಿಂದಿನ ಪರಿಸ್ಥಿತಿ ಈಗ ಬದಲಾವಣೆಯಾಗಿದೆ. ಹಿಂದೆ ಊರ ಗೌಡನ ಮನೆಯಲ್ಲಿ ಅವನನ್ನು ಇಟ್ಟುಕೊಳ್ಳುತ್ತಿದ್ದರು. ಸ್ವಲ್ಪ ತಪ್ಪಾದರೆ ಊರಿನಲ್ಲಿ ಅವನನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಊರಿನ ಗೌಡ ಏನಾದರೂ ತಪ್ಪುಮಾಡಿದರೆ ಅವನನ್ನು ಮಾನಗೇಡಿ ಮಾಡುತ್ತಿದ್ದರು. ಆ ಸ್ಥಿತಿ ಇವತ್ತಿಲ್ಲ. ಇವತ್ತಿನ ತಲಾಟಿಗೂ ಮತ್ತು ಆ ರಿಕಾರ್ಡಿಂಗೂ ಒಂದಕ್ಕೊಂದು ಸಂಬಂಧವಿಲ್ಲದ ಹಾಗೆ ಆಗುತ್ತದೆ. ಆದೃಷ್ಟಿಯಿಂದ ಬಿಲ್ಡಿಂಗ್‌ನ ಅವಶ್ಯಕತೆ ಬಹಳ ಇದೆ ಅದರ ಬಗ್ಗೆ ಮೂನ್ನ ಖರ್ಗೆಯವರೂ ಹೇಳಿದರು, ಬೇರೆಯವರೂ ಹೇಳಿದರು, ಆ ಬಿಲ್ಡಿಂಗ್‌ಗಳನ್ನು ಕಟ್ಟುವ ಸಲುವಾಗಿ ಕೆಲವು ಪ್ರದೇಶಗಳಲ್ಲಿ ಮೂನ್ನ ಖರ್ಗೆಯವರು ಮಂಜೂರು ಮಾಡಿದ್ದಾರೆ ಆದರೆ ಇನ್ನೂ ಅನೇಕ ಪ್ರದೇಶಗಳಲ್ಲಿ ಬಿಲ್ಡಿಂಗ್ ಆಗದೆ ಉಳಿದಿವೆ. ಕ್ರಮೇಣ ನಮ್ಮ ಈ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಟ ಸಬ್ ಡಿವಿಜನಲ್ ಆಫೀಸ್ ಇರುವ ಪ್ರದೇಶದಲ್ಲಾದರೂ ಈ ಬಿಲ್ಡಿಂಗನ್ನು ಕಟ್ಟೋಣ. ಅದಕ್ಕೆ ಮಿನಿ ವಿಧಾನಸೌಧ ಎಂದೋ ಬಡವರ ಕುಟೀರ ಎಂದೋ ಏನು ಬೇಕಾದರೂ ಕರೆದುಕೊಳ್ಳಿ. ಹೆಸರು ಇಂಥದೇ ಇರಬೇಕೆಂದು ನನ್ನದೇನಿಲ್ಲ. ಹಾಲಪ್ಪನ ಮನೆಯಲ್ಲಿ ಕೇಳಿದರೆ ಮಜ್ಜಿಗೆ ಇಲ್ಲದಹಾಗೆ

ಆಗಬಾರದು. ನಮ್ಮ ಆಫೀಸರುಗಳು ಅನೇಕ ಸಲ ಹೇಳುತ್ತಾರೆ. ನೀವು ಹೇಳಿದಿರಿ ಪಾಟೀಲರೆ. ಸರ್ಕ್ಯುಲರ್ ಕೊಟ್ಟಿರಿ. ಯಾವನೆ ತಲಾಟಿ ಊರು ಬಿಟ್ಟು ಬೇರೆ ಕಡೆ ಹೋದರೆ ಅವನನ್ನು ಕೆಲಸದಿಂದ ಸಸ್ಪೆಂಡ್ ಮಾಡುತ್ತೇನೆಂದು ಹೇಳಿದಿರಿ. ಆದರೆ ಅವನು ಹೊರಗಡೆ ಹೋಗದೆ ಇನ್ನೆಲ್ಲಿ ಇರಬೇಕು. ಏಕೆಂದರೆ ತಲಾಟಿಗೆ ಅಲ್ಲಿಮನೆ ಇಲ್ಲ, ಅವನು ಎಲ್ಲಿರಬೇಕು ಎಂದು ಕೇಳಿದರು. ಆದ್ದರಿಂದ ಈ ಸಂದರ್ಭದಲ್ಲಿ ರಾಜ್ಯದಲ್ಲಿನ ಎಲ್ಲ ತಲಾಟಿಗಳಿಗೆ ಈ ಸದನದ ಮೂಲಕ ಹೇಳುತ್ತಿದ್ದೇನೆ. ಅವನು ಎಲ್ಲಿರಬೇಕು ಅಂದರೆ ಈಗ ಎಲ್ಲಿರುತ್ತಾನೊ ಅಲ್ಲಿರಬೇಕು. ಅವರು ಹಳ್ಳಿಯಲ್ಲಿರಬೇಕು, ಅಲ್ಲಿ ಮನೆ ಸಿಗದಿದ್ದರೆ ಅವನು ತಳಾಟಿಯಾಗಿ ಏಕೆ ಅಲ್ಲಿರಬೇಕು ? ಹಳ್ಳಿಗಳಲ್ಲಿ ದೇವಸ್ಥಾನಗಳಿಲ್ಲವೇ, ಅಲ್ಲೇ ಜಮಖಾನ ಹಾಕಿ ಕೆಲಸ ಮಾಡಿ. ಹಿಂದೆ ಹಾಗೆ ಮಾಡುತ್ತಿದ್ದರು, ಈಗ ಕುರ್ಚಿಯಿಲ್ಲ ಎಂದರೆ ಹೇಗೆ ? ಕೆಲಸ ಆಗುವುದು ಮುಖ್ಯ. ಈ ದೃಷ್ಟಿಯಿಂದ ಅತ್ಯಗ್ರವಾಗಿ ತಲಾಟಿಗಳು ಊರಲ್ಲಿರಲೇಬೇಕು. ತಲಾಟಿಗಳ ವಶದಲ್ಲೇ ಎಲ್ಲ ದಾಖಲಾತಿಗಳು ಇರುವುದು. ತಲಾಟಿಗಳೇ ರೈತರಿಗೆ ನೇರವಾಗಿ ಕೊಡತಕ್ಕಂಥ ವ್ಯಕ್ತಿಗಳು ಇವರ ಪೈಕಿ ಕೆಲವರಂತೂ ಜಿಲ್ಲಾ ಕೇಂದ್ರಗಳಲ್ಲೇ ಇರುತ್ತಾರೆ. ಏಕೆಂದರೆ ಅವರು ತಲೆಮಾರಿನಿಂದ ಬಂದಂಥ ತಲಾಟಿಗಳು, ಬೇಕಾದರೆ ತಹಸೀಲ್ದಾರರನ್ನೇ ಟ್ರಾನ್ಸ್‌ಫರ್ ಮಾಡಿಸಿರಿ ಎನ್ನುವಂತಹ ಸ್ಥಿತಿಯನ್ನು ಮುಟ್ಟಿದಂಥ ತಲಾಟಿಗಳು. ಅವರ ಬಗ್ಗೆ ಬಹಳ ನಿಗಾ ವಹಿಸಬೇಕು. ನಿಜವಾಗಿಯೂ ಎಲ್ಲಿಯತನಕ ತಲಾಟಿಯವರು ಆ ಹಳ್ಳಿಯಲ್ಲಿ ಇರುವುದಿಲ್ಲ, ಎಲ್ಲಿಯತನಕ ಹಳ್ಳಿಯ ಜನರಿಗೆ ತಲಾಟಿಯವರಿಂದ ಸರ್ವೀಸ್ ಸಿಗುವುದಿಲ್ಲ, ಎಲ್ಲಿಯತನಕ ತಲಾಟಿಯವರ ಮೇಲೆ ತಹಶೀಲ್ದಾರ್ ಸೂಪರ್ ವಿಷನ್ ಮಾಡುವುದಿಲ್ಲ, ತಹಶೀಲ್ದಾರ್ ಏನು ಸೂಪರ್‌ವಿಷನ್ ಮಾಡಿದ್ದಾನೆ ಎನ್ನುವುದನ್ನು ಡಿ. ಸಿ. ಯವರು ತಿಂಗಳಿಗೆ ಒಂದು ದಿವಸವಾದರೂ ನೋಡುವುದಿಲ್ಲ, ಆಂದಾಗ ಆ ಸರ್ಕಾರ ಸುಸ್ಥಿತಿಯಲ್ಲಿ ಇಲ್ಲ ಎಂದು ತಿಳಿಯಬೇಕು ಎಂದು ನನ್ನ ಅಭಿಪ್ರಾಯ. ಆ ದೃಷ್ಟಿಯಿಂದ ನಾನು ಇವತ್ತು ಅಧಿಕಾರಿಗಳಿಗೆ ಈ ಸದನದ ಮುಖಾಂತರ ಹೇಳುತ್ತಿದ್ದೇನೆ, ಎಲ್ಲಾ ತಲಾಟಿಯವರನ್ನು ಕೂಡಲೇ ಹೋಗಿಲ್ಲದಿದ್ದರೆ ಹೋಗಲಿಕ್ಕೆ ಹಚ್ಚಿ, ಹೋಗಲಿಕ್ಕೆ ಹಚ್ಚದೇ ಇದ್ದಂಥ ತಲಾಟಿಗಳು ಯಾರಾದರೂ ಕಂಡು ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಮತ್ತೆ ಬೇರೆ ಅನ್–ಎಂಪ್ಲಾಯ್ಡ್ ಇದ್ದಂಥ ಅನೇಕ ಜನರು ಇದ್ದಾರೆ, ಕಾಫಿ ವೆಂಡರ್ಸ್ ಎಲ್ಲರೂ ಇದ್ದಾರೆ, ಅವರು ನಮಗೆ ನೌಕರಿ ಎಂದು ಹೇಳುತ್ತಾರೆ ಅಂಥವರನ್ನು ನೇಮಿಸಿಕೊಳ್ಳಿ ಇವರನ್ನು ಮನೆಗೆ ಕಳಿಸಿ. ಈ ರೀತಿಯಾಗಿ ನೀವು ಆಪರೇಟೀವ್ ಮೇಜರ್ ಮಾಡಿದ್ದಕ್ಕೆ ಈ ಸದನದ ಎಲ್ಲಾ ಸದಸ್ಯರು ಸಮ್ಮತಿಯನ್ನು ಕೊಡುತ್ತಾರೆ ಎಂದು ನಾನು ಭಾವನೆ ಮಾಡುತ್ತೇನೆ.

HON. MEMBER.—Village Accountants are more Powerful than the Deputy Commissioners. Can it be possible to withdraw some of the powers delegated to them ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರವನ್ನು ಮುಗಿಸಿಬಿಡಿ.

ಶ್ರೀ ಕೆ. ಹೆಚ್ ಪಾಟೀಲ್.—ಮಾನ್ಯ ಅಧ್ಯಕ್ಷಣಿಯವರೇ, ಇನ್ನೊಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇವೆ. ನಾವು ಚುನಾವಣೆಯಲ್ಲಿ ಸೈಟುಗಳು ಇಲ್ಲದವರಿಗೆ ಸೈಟುಗಳನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ. ನಮ್ಮ ಮೇಲೆ ಈ ಕರ್ತವ್ಯ ಇದೆ. ಪ್ರತಿಯೊಂದು ಹಳ್ಳಿಯಲ್ಲಿ ಇರತಕ್ಕಂಥ ಜನರಲ್ಲಿ ಯಾರ್ಯಾರಿಗೆ ಸೈಟುಗಳು ಇಲ್ಲವೋ ಅವರಿಗೆಲ್ಲರಿಗೂ ಸೈಟುಗಳನ್ನು ಕೊಡುವಂಥ ಕಾರ್ಯವನ್ನು ನಾವು ತ್ವರಿತ ಗತಿಯಿಂದ ಹಾಕಿಕೊಳ್ಳುತ್ತೇವೆ.

ಯಾವ ಊರಿನಲ್ಲಿ ಸರ್ಕಾರಿ ಜಮೀನು ಇದೆಯೋ ಅವರಿಗೆ ಸರ್ಕಾರಿ ಜಮೀನಲ್ಲಿ ಕೊಡಬೇಕು ಎಂದು ಇದ್ದೇವೆ. ಸರ್ಕಾರದ ಜಮೀನು ಇಲ್ಲದಿದ್ದರೆ ಅಂಥ ಗ್ರಾಮಗಳಲ್ಲಿ ಕೊಡಲೇ ಅಕ್ವೈರ್ ಮಾಡಿ ಆ ಲ್ಯಾಂಡನ್ನು ಪ್ರಿಸರ್ವ್ ಮಾಡಿ ಒಂದು ವರ್ಷದೊಳಗಾಗಿ ಜನರಿಗೆ ಸೈಟುಗಳನ್ನು ಹಂಚುವಂಥ ಕಾರ್ಯವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಜಾತಿ ಗೀತಿ ಏನೂ ಇಲ್ಲ, ಷೆಡ್ಯೂಲ್ಡ್ ಕ್ಯಾಸ್ಟ್ ಇರಲಿ ಬಡವರೇ ಇರಲಿ, ಲಿಂಗಾಯಿತರು ಇರಲಿ, ಬ್ರಾಹ್ಮಣರು ಇರಲಿ, ಯಾರೇ ಇರಲಿ. ಯಾರು ಸೈಟು ಇಲ್ಲದೇ ಇದ್ದಾರೆ. ಆ ರೀತಿ ಸೈಟಿಲ್ಲದ ಬಡವರಿಗೆ ನಮ್ಮ ದೇಶದಲ್ಲಿ ಇರಲಿಕ್ಕೆ ವಾಸ ಮಾಡುವುದಕ್ಕೆ ಒಂದು ಮನೆಯಾದರೂ ಬೇಕು. ಮನೆಯನ್ನು ಕೊಡಲಿಕ್ಕೆ ನಮ್ಮಲ್ಲಿ ಆಗದಿದ್ದರೂ ಸಹಿತ ಒಂದು ಸೈಟನ್ನು ಕೊಡಬೇಕು ಎನ್ನತಕ್ಕಂಥ ದೃಷ್ಟಿಯಲ್ಲಿ ನಾವು ಹೇಳಿದ್ದೇವೆ. ಆ ದೃಷ್ಟಿಯಿಂದ ಸೈಟನ್ನು ಕೊಡಬೇಕು ಎಂದು ಈ ಸದನದ ಮುಖಾಂತರ ಅನೌನ್ಸ್ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ .—ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಬಹಳ ತಡವಾಗುತ್ತಿದೆ

ಶ್ರೀ ಕೆ. ಹೆಚ್. ಪಾಟೀಲ್.—ಮಾಡುವವರ ಮೇಲೆ ಇದು ಆಗುತ್ತದೆ. ತಡ ಹೇಗೆ ಆಗುತ್ತದೆ ನೋಡೋಣ. ಒಂದು ವರ್ಷ ಟೈಮ್ ಕೊಟ್ಟಿದ್ದೇವೆ. ಮೂರು ತಿಂಗಳಲ್ಲಿ ಅಕ್ವಿಜಿಷನ್ ಮಾಡೋಣ. ಅವಶ್ಯಕತೆ ಇದ್ದರೆ ಅಕ್ವಿಜಿಷನ್ ಆಕ್ಟ್‌ನ್ನು ಬದಲಾವಣೆ ಮಾಡಿ ತೀವ್ರವಾಗುವಂಥ ರೀತಿಯಲ್ಲಿ ಮಾಡೋಣ.

ಶ್ರೀ ಎಂ. ಪಿ. ವೆಂಕಟೇಶ್.—ತಾಲ್ಲೂಕು ಬೋರ್ಡ್ ಸಮಿತಿ ಏನು ಇದೆ, ಅಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ತಹಶೀಲ್ದಾರರನ್ನು ಸೆಕ್ರೆಟರಿ ಮಾಡಿ, ವಿಲೇಜ್ ಅಕೌಂಟೆಂಟನ್ನು ಸೇರಿಸಿಕೊಂಡು ಸಮಿತಿ ರಿವ್ಯೂ ಮಾಡುತ್ತದೆ. ಆ ರೀತಿ ಎರಡು ತಿಂಗಳಿಗೊಂದು ಸಾರಿ ರಿವ್ಯೂ ಮಾಡಿದರೆ ಅರ್ಜಿಯನ್ನು ಕೊಟ್ಟಾಗ ತಡವಾಗಿದ್ದರೆ ಏತಕ್ಕೆ ಈ ರೀತಿ ಮಾಡಿದ್ದೀರಿ ಎಂದು ಕೇಳುವುದಕ್ಕೆ ಅಧಿಕಾರ ಇರುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಮಾನ್ಯ ಸದಸ್ಯರುಗಳು ಅವರ ಲೆವೆಲ್‌ಗೆ ಹೋಗುವುದು ಬೇಡ. ನೀವೆಲ್ಲಾ ಸೂಪರ್‌ವಿಷನ್ ಲೆವೆಲ್‌ನಲ್ಲಿ ಇದ್ದೀರಿ. ಮಂತ್ರಿಗಳೇ ನಿಮ್ಮ ಕೈಯಲ್ಲಿ ಇರುವಾಗ ತಲಾಟಿ ಹತ್ತಿರ ಏತಕ್ಕೆ ಹೋಗುತ್ತೀರಿ ? ಅವರು ಯಾವ ಕೆಲಸವನ್ನು ತಪ್ಪು ಮಾಡುತ್ತಾರೆ, ಅದನ್ನು ನನ್ನ ಜನರಿಗೆ ತನ್ನಿ, ನಾವು ತಿದ್ದೋಣ. ನೀವು ಅವರ ಲೆವೆಲ್‌ನಲ್ಲಿ ಅವರ ಕಮಿಟಿಗೆ ಹೋಗಿ ಮಾಡಿದರೆ...

ಶ್ರೀ ಎಂ. ಪಿ. ವೆಂಕಟೇಶ್.—ನಿಮ್ಮ ಹತ್ತಿರ ಏನಾದರೂ ತಂದರೆ ವಿಲೇಜ್ ಅಕೌಂಟೆಂಟ್ ಬಗ್ಗೆ ನನ್ನ ಹತ್ತಿರ ತರಬೇಡಿ ಎಂದು ಹೇಳುತ್ತೀರಿ. ದೂರನ್ನು ತಂದರೆ ಅದನ್ನು ಎನ್‌ಕ್ವೈರಿಗೆ ಹಾಕುತ್ತೀರಿ.

ಉಪಾಧ್ಯಕ್ಷರು.—ಶ್ರೀಯುತ ವೆಂಕಟೇಶ್‌ರವರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮುಗಿಸಲಿ. ಆ ನಂತರ ಬೇಕಾದರೆ ಕೇಳುವಿರಂತೆ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ವಿಲೇಜ್ ಅಕೌಂಟೆಂಟ್ ಇರಲಿ. ಸಿಪಾಯಿಯೇ ಇರಲಿ, ಅವನು ಮಾಡಿದ ತಪ್ಪಿನ ಮೇಲೆ ಅವನಿಗೆ ಶಿಕ್ಷೆ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ಸರ್ಕಾರ ಎಂದರೆ ಬರೀ ಮಂತ್ರಿಗಳೇ ಅಲ್ಲ. ಮಂತ್ರಿಗಳು ಕಮಿಷನರ್ ಮುಖಾಂತರ ಮಾಡಬಹುದು. ಡೆಪ್ಯುಟಿ ಕಮೀಷನರ್ ಮುಖಾಂತರ ಮಾಡಬಹುದು, ತಹಶೀಲ್ದಾರ್ ಮುಖಾಂತರ ಮಾಡಬಹುದು. ಆದರೆ ಎಲ್ಲದಕ್ಕೂ ಇಲ್ಲಿಂದಲೇ ಆರ್ಡರ್ ಮಾಡುತ್ತೇವೆ ಎಂದೇನೂ ಅಲ್ಲ. ಆದರೆ ನೀವು ನನ್ನ ಗಮನಕ್ಕೆ ತರುವುದನ್ನು ತಂದರೆ ಯಾರ್ಯಾರ ಮುಖಾಂತರ ಎಲ್ಲೆಲ್ಲಿ ಮಾಡಬೇಕೊ ಅದನ್ನು ಮಾಡಿಕೊಡುವಂಥ ಕೆಲಸ ನನ್ನದು. ನಾನು ನಿಮ್ಮ ಪ್ರತಿನಿಧಿ ನಿಮ್ಮ ಪ್ರತಿನಿಧಿಯಾಗಿ ನಾನಿರುವಾಗ, ಜನರ ಪ್ರತಿನಿಧಿಯಾಗಿ ನೀವು ಇರುವಾಗ ಅದನ್ನು ನೆರವೇರಿಸುವಂತಹ ಕರ್ತವ್ಯ ನಮ್ಮದು. ನಾವು ಕರ್ತವ್ಯ ವಿಮುಖರಾದರೆ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳಿ. ಆದರೆ ತಹಶೀಲ್ದಾರ್ ಕೂಡಿ ನಿಮ್ಮನ್ನು ಹಾಕಿದರೆ ಅದು ಸರಿಯಲ್ಲ. ತಹಶೀಲ್ದಾರ್ ಹಾಗೂ ನೀವು ಕೂಡಿ ಏನಾದರೂ ತಪ್ಪು ಮಾಡಿದರೆ ಯಾರು ತಿದ್ದುವವರು.

ಶ್ರೀ ಎಂ. ಪಿ. ವೆಂಕಟೇಶ್.—ವಿಲೇಜ್ ಅಕೌಂಟೆಂಟ್ ಡಾಕ್ಯುಮೆಂಟ್ಸ್ ಬರೆಯುವುದನ್ನು ಮಾಡಬೇಕಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರವರೇ, ನಾನು ಬಹಳ ಹೊತ್ತು ತೆಗೆದುಕೊಂಡೆ. ಮಾನ್ಯ ಸದಸ್ಯರು ನನಗೆ ಅನೇಕ ಉತ್ತಮವಾದಂತಹ ಮತ್ತು ಪ್ರೋತ್ಸಾಹ ದಾಯಕವಾಗುವಂತಹ ಮಾತುಗಳನ್ನು ನಮ್ಮ ಪಕ್ಷದಲ್ಲೂ ಆಡಿದ್ದಾರೆ. ಎದುರು ಪಕ್ಷದವರೂ ಆಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಅವರು ನನ್ನಿಂದ ಬಹಳಷ್ಟು ಅಪೇಕ್ಷೆ ಮಾಡಿದ್ದಾರೆ, ಅವರ ಅಪೇಕ್ಷೆಗೆ ನಿಲುಕುವಷ್ಟು ಕಾರ್ಯವನ್ನು ಮಾಡಲಿಕ್ಕೆ ದೇವರು ನನಗೆ ಶಕ್ತಿ ಕೊಡುತ್ತಾನೋ ಇಲ್ಲವೋ ಗೊತ್ತಿಲ್ಲ. ಆದರೆ ನನ್ನ ಕೈಲಾದ ಮಟ್ಟಿಗೆ ಸಹಾಯವನ್ನೆಲ್ಲಾ ಮಾಡುತ್ತೇನೆಂದು ಭರವಸೆ ಕೊಟ್ಟು ತೀವ್ರವೇ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಮಾದರಿ ಡಿಪಾರ್ಟ್‌ಮೆಂಟ್ ಆಗಿ ಸರ್ಕಾರವನ್ನು ಒಂದು ಯೋಗ್ಯವಾದಂತಹ ಮಾರ್ಗಕ್ಕೆ ತರುವಂತಹ ಡಿಪಾರ್ಟ್‌ಮೆಂಟ್ ಆಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ ಮತ್ತು ನನ್ನ ಬೇಡಿಕೆಗಳಿಗೆ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರವರೇ, ಬಹಳ ಮುಖ್ಯವಾದಂತಹ ಒಂದೆರಡು ವಿಚಾರಗಳನ್ನು ಬಿಟ್ಟು ಬಿಟ್ಟಿದ್ದಾರೆ. ಅದು ಭೂ ಸ್ವಾಧೀನದ ವಿಚಾರ. ೧೯೬೪ರಲ್ಲಿ ಸಮಗ್ರ ತಿದ್ದುಪಡಿ ಮಾಡುವುದರ ಮೂಲಕ ಭೂ ಮಾಲೀಕರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗುವಂತಹ, ಸೌಲಭ್ಯವನ್ನು ಕೊಡತಕ್ಕಂಥ ಒಂದು ತೀರ್ಮಾನ ಆಗಿತ್ತು. ಆದರೆ ಏನು ಆಗಿದೆ ಅಂದರೆ

ಭೂ ಸ್ವಾಧೀನ ನಡವಳಿಕೆಗಳು ಬೇಗ ಮುಕ್ತಾಯ ಆಗಬೇಕು ಎಂದು ಕಾನೂನು ಮಾಡಲಾಗಿದೆ. ಈಗ ಅಧಿಕಾರಿಗಳ ಅಪರಾಧದಿಂದ ಭೂ ಸ್ವಾಧೀನದಲ್ಲಿ ವಿಳಂಬ ಆಗುವುದರ ಜೊತೆಗೆ ಕಾಲಕಾಲಕ್ಕೆ ಅದನ್ನು ಮಾಡದೇ ಇರುವುದರಿಂದ ಈ ಇಲಾಖೆ ಪ್ರತಿವರ್ಷ ಲಕ್ಷಾಂತರ ಅಲ್ಲ, ಕೋಟ್ಯಾಂತರ ರೂಪಾಯಿ ಬಡ್ಡಿ ಕೊಡುತ್ತಾ ಇದೆ. ನಾವು ಮುಳುಗಡೆ ಪ್ರದೇಶದಿಂದ ಬರತಕ್ಕಂಥವರು. ಎಷ್ಟು ದೂರಕ್ಕೆ ಇದಳಿ ಹೋಗಿದೆ ಅಂದರೆ ಮೊದಲು ೪/೧ ನೋಟಿಫಿಕೇಶನ್ ೬/೧ ನೋಟಿಫಿಕೇಶನ್ ಆಗುವುದಿಲ್ಲ ಎಂದು ಹೇಳಿ ಬೆಳೆಯು ಪರಿಹಾರ ಕೊಡುವುದರಲ್ಲಿ ಹತ್ತತ್ತು ವರ್ಷ ಬೆಳೆ ಪರಿಹಾರ ಕೊಡುವುದು. ಆಮೇಲೆ ನಿಧಾನವಾದರೆ ಈ ಶಾಸನದನ್ವಯ ೪/೧ ನೋಟಿಫಿಕೇಶನ್ ಆದ ತಾರೀಖಿನಿಂದ ನೀವು ಶೇಕಡಾ ೧೨ ರಂತೆ ಬಡ್ಡಿ ಕೊಡಬೇಕಾಗುತ್ತದೆ. ಆದುದರಿಂದ ಇಂಥಾದ್ದನ್ನು ಏನಾದರೂ ಪರಿಹಾರ ಮಾಡುವುದಕ್ಕೆ ಬೇಗ ಕ್ರಮ ತೆಗೆದುಕೊಳ್ಳುತ್ತೀರ ಎನ್ನುವುದು ಒಂದು ಎರಡನೆಯದು. ಬಹಳ ಮುಖ್ಯವಾಗಿ ನಾನು ಕೇಳಿದ್ದೆ, ಅದು ವ್ಯವಸಾಯಗಾರರ ಕುಟುಂಬದಲ್ಲಿ ಹುಟ್ಟಿದ್ದರೂ ಕೂಡ ಆತ ಭೂಮಿ ತೆಗೆದುಕೊಳ್ಳಬೇಕು ಎಂದರೆ ನೀವು ಒಂದು ಮಿತಿಯನ್ನು ಹಾಕಿದ್ದೀರಿ. ೧೨ ಸಾವಿರ ರೂಪಾಯಿಗಳ ವರಮಾನಕ್ಕಿಂತ ಹೆಚ್ಚು ಇರುವವರು ಭೂಮಿ ಕೊಂಡುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ಆದ್ದರಿಂದ ಈ ಮಿತಿಯನ್ನು ಸಡಿಲಗೊಳಿಸಬೇಕು ಎಂದು ಹೇಳಿದೆ. ನನಗೆ ಅನ್ನಿಸುತ್ತದೆ. ಇವೊತ್ತು ಸಾಧಾರಣ ಇಲ್ಲಿ ಕೆಲಸ ಮಾಡತಕ್ಕ ಚಪರಾಸಿ ಕೂಡ ಎರಡು ಸಾವಿರ ರೂಪಾಯಿ ವರಮಾನ ದಾಟಿದ್ದಾನೆ. ಅದಕ್ಕೆ.

ಉಪಾಧ್ಯಕ್ಷರು.—ಅವರು ಈ ಬಗ್ಗೆ ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.– ಆಮೇಲೆ ೧೯೮೬ರಲ್ಲಿ ರಚಿಸಲಾದಂತಹ ಭೂಸ್ವಾಧೀನ ಮೇಲ್ಮನವಿಯ ಪ್ರಾಧಿಕಾರಗಳನ್ನು ರದ್ದು ಮಾಡಿದ್ದೇವೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ನೀವು ಇದನ್ನು ರದ್ದು ಮಾಡಿದ್ದೀರೋ ಅಥವಾ ಅವು ಜೀವಂತವಾಗಿ ಇದ್ದಾವೆಯೋ ಎಂಬುದರ ಬಗ್ಗೆ ಏನಾದರೂ ದಯಮಾಡಿ ತಿಳಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಮೊದಲನೆಯದಾಗಿ, ಅಪೆಲೇಟ್ ಟ್ರಿಬ್ಯೂನಲ್‌ಗಳನ್ನು ರದ್ದು ಮಾಡುತ್ತೇವೆಂದು ಹೇಳಿದರೂ ಸಹ ರದ್ದು ಮಾಡಿದ್ದೇವೆ ಎಂದಲ್ಲ. ಇನ್ನೂ ಅವು ಜೀವಂತವಾಗಿ ಇವೆ. ನಿಮ್ಮ ನಜರಿಗೆ ಯಾವಾಗ ಆಕ್ಟ್ ಬರುತ್ತದೋ, ಆವತ್ತು ರದ್ದಾಗುತ್ತವೆ. ನೀವು ಆಕ್ಟ್ ಪಾಸ್ ಮಾಡುವ ತನಕ ಅವು ರದ್ದು ಆಗುವುದಿಲ್ಲ ಇದು ಮೊದಲನೆಯದು.

ಶ್ರೀ ಡಿ. ಬಿ. ಚಂದ್ರೇಗೌಡ.—ಕ್ಲಾರಿಫಿಕೇಷನ್ ಕೇಳಲಾರದಂತಹ ಸ್ಥಿತಿಗೆ ನಮ್ಮನ್ನು ತಂದು ಬಿಟ್ಟಿದ್ದೀರಿ. ಇದರ ಬಗ್ಗೆ ನಿಮ್ಮ ಆಲೋಚನೆ ಏನು ಎಂದು ಅಷ್ಟಾದರೂ ಹೇಳಿ.

ಶ್ರೀ ಕೆ. ಹೆಚ್. ಪಾಟೀಲ್.—ಅವುಗಳನ್ನು ರದ್ದು ಮಾಡಿ ಹೊಸದಾಗಿ ಎಲ್ಲಿಗೆ ಕಳಿಸಬೇಕು ಎನ್ನುವುದರ ಬಗ್ಗೆ ಆಕ್ಟ್ ಮಾಡಬೇಕು ಎನ್ನುವುದು ಸರ್ಕಾರದ ಆಲೋಚನೆ. ಅದರ ಬಗ್ಗೆ ಕ್ಯಾಬಿನೆಟ್‌ನವರು ನಿರ್ಣಯ ಮಾಡಿದ್ದಾರೆ. ನಿಮ್ಮ ಎದುರಿಗೆ ಕಾನೂನು ಬರುತ್ತದೆ. ಕಾನೂನು ಬಂದಾಗ ನೀವು ತಿದ್ದುಪಡಿ ಮಾಡಿದರೆ ರದ್ದು ಆಗುತ್ತದೆ, ಇಲ್ಲ ನಾವು ತಿದ್ದುಪಡಿ ಮಾಡುವುದಿಲ್ಲ ಎಂದರೆ ಅದು ಹಾಗೆಯೇ ಉಳಿಯುತ್ತದೆ ಅಷ್ಟೆ. ಎರಡನೆಯದು ೧೨ ಸಾವಿರ ಉತ್ಪನ್ನ ಮಿತಿಯ ಬಗ್ಗೆ ನಾನು ಹೇಳಿದ್ದೇನೆ. ತಾವು ಇರಲಿಲ್ಲ. ಆದರೂ ಇನ್ನೊಮ್ಮೆ ಹೇಳುತ್ತೇನೆ. ಈ ೧೨ ಸಾವಿರ ಉತ್ಪನ್ನದ ಮಿತಿಯಿಂದ ಬಹಳ ಅನ್ಯಾಯ ಆಗಲಿಕ್ಕೆ ಹತ್ತಿದೆ. ಅದರ ಬಗ್ಗೆ ಏನು ಮಾಡಬೇಕು ಎನ್ನುವ ಬಗ್ಗೆ ನಾನು ಕ್ಯಾಬಿನೆಟ್ ಮುಂದೆ ಇಡುತ್ತೇನೆ. ಮತ್ತು ಅವರ ನಿರ್ಣಯದಂತೆ ನಡೆದುಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಸ್ಟೇ ಆದರೂ ಮಾಡಿ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ಸ್ಟೇ ಮಾಡುವ ಬಗ್ಗೆ ಆಲೋಚನೆ ಮಾಡೋಣ. ಆಮೇಲೆ ಭೂ ಸ್ವಾಧೀನದ ಬಗ್ಗೆ ಹೇಳಿದ್ದಾರೆ. ಅವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಏಕೆಂದರೆ, ಭೂಸ್ವಾಧೀನದಲ್ಲಿ ಬಹಳ ತಡ ಆಗಿದೆ. ತಡವಾದುದರಿಂದ ಬಡ್ಡಿಕೊಡುವುದು ಮುಂತಾಗಿ ಸರ್ಕಾರಕ್ಕೆ ಹಣ ಲುಕ್ಸಾನಾಗಿದೆ. ಅದರ ಬಗ್ಗೆ ಯೋಗ್ಯ ತನಿಖೆ ಮಾಡಿ, ಉಳಿದ ರಾಜ್ಯಗಳವರು ಹೇಗೆ ಮಾಡುತ್ತಾರೆಂದು ನೋಡಿ, ನಾವು ಶೀಘ್ರಗತಿಯಿಂದ ಏನೇನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇವೆ, ಮತ್ತು ನಿಮ್ಮ ನಜರಿಗೆ ತರುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ.–ಜಮಾಬಂದಿ ಪದ್ಧತಿಯನ್ನು ಮತ್ತೆ ಜಾರಿಗೆ ತರುತ್ತೀರಾ, ಅದನ್ನು ಜಾರಿಗೆ ತರುವುದರಿಂದ ಅಧಿಕಾರಿಗಳಿಗೂ ಮತ್ತು ಸಾರ್ವಜನಿಕರಿಗೂ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡ ರೈತರಿಗೂ ಇರತಕ್ಕಂಥ ಅಂತರ ಕಡಿಮೆಯಾಗುತ್ತದೆ. ಅವರ ಕಷ್ಟಸುಖ

ಹೇಳಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಹಿಂದಿದ್ದ ಜಮಾಬಂದಿ ಪದ್ಧತಿಯನ್ನು ಮತ್ತೆ ಜಾರಿಗೆ ತರುತ್ತೀರ.

ಶ್ರೀ ಕೆ. ಹೆಚ್. ಪಾಟೀಲ್.—ವಿಚಾರ ಮಾಡೋಣ.

ಶ್ರೀ ಎಂ. ವಿ. ವೆಂಕಟಪ್ಪ.—ಮನೆ ಬಾಡಿಗೆ ಕಾಯಿದೆ ಬಗ್ಗೆ ಪ್ರಮಿಳ ಕಮಿಟಿಯವರು ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದರು. ಅದನ್ನು ಜಾರಿಗೆ ಕೊಡುವುದಕ್ಕೆ ಏನಾದರೂ ಕಾನೂನು ತರುತ್ತೀರ ಎನ್ನುವುದು ಒಂದು. ಎರಡನೆಯದು, ಮಾನ್ಯ ಮಂತ್ರಿಗಳು ಡೆಪ್ಯುಟಿ ಕಮಿಷನರ್. ತಹಶೀಲ್ದಾರ್, ಸಬ್‌ಡಿವಿಜನ್ ಆಫೀಸರ್, ರೆವಿನ್ಯು ಇನ್ಸ್‌ಪೆಕ್ಟರ್‌ರವರುಗಳು ಹಳ್ಳಿಗಳಲ್ಲಿ ಹೋಗಿ ಒಂದೊಂದು ದಿವಸ ಇರಬೇಕು ಎಂದು ಹೇಳಿದರು. ಅದೇರೀತಿ ಮಂತ್ರಿಗಳು ಹೋಗಿ ಒಂದೊಂದು ದಿವಸ ಹಳ್ಳಿಯಲ್ಲಿ ಇರುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮಂತ್ರಿಗಳಂತೂ ಹಳ್ಳಿಯಲ್ಲಿ ಇರಲೇಬೇಕು. ಇಲ್ಲದೇ ಇದ್ದರೆ ನೀವು ಕೇಳುತ್ತೀರ, ಇರಬೇಕಾಗುತ್ತದೆ. ಏನಾಗದೇ ಇದ್ದರೂ ಕಡೆಗೆ ನಿಮ್ಮ ಮನೆಗೆ ಊಟಕ್ಕಾದರೂ ಬರಬೇಕು. ಚಹಕ್ಕಾದರೂ ಬರಬೇಕು. ಅದೇ ರೀತಿಯಾಗಿ ಡೆಪ್ಯುಟಿ ಕಮಿಷನರ್ ಹೋಗಲಿಕ್ಕೆ ಪ್ರಯತ್ನ ಮಾಡುತ್ತೇನೆ, ಅವರು ಹೋಗುತ್ತಾರೋ ಏನೋ ಗೊತ್ತಿಲ್ಲ. ಎಲ್ಲವೂ ನಾವು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ, ಆದರೆ ಪ್ರಯತ್ನ ಮಾಡೋಣ. ಆಮೇಲೆ ಮಾನ್ಯ ಸದಸ್ಯರೊಬ್ಬರು ಜಮಾಬಂದಿ ವಿಷಯ ಹೇಳಿದರು. ಜಮಾಬಂದಿ ವಿಷಯದಲ್ಲೂ ಸಹಿತ ನಾವು ಆಲೋಚನೆ ಮಾಡುತ್ತೇವೆ ಮತ್ತು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಮೇಲೆ ಮಾನ್ಯ ಸದಸ್ಯರು ರೆಂಟ್‌ಕಂಟ್ರೋಲ್ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಅದು ಉತ್ತಮವಾದ ಸಲಹೆ ಇದೆ. ಪ್ರಮಿಳಾರವರ ರಿಪೋರ್ಟ್ ತರಿಸಿ ಯಾವ ರೀತಿಯಾಗಿ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಾನು ಆಲೋಚನೆ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು, ಕರ್ನಾಟಕ ರಾಜ್ಯದಲ್ಲಿರ ತಕ್ಕಂಥ ಲಂಬಾಣಿ ತಾಂಡಾಗಳನ್ನು ರೆವಿನ್ಯು ಗ್ರಾಮಗಳಾಗಿ ಮಾಡುತ್ತೇವೆ ಎಂದು ಹೇಳಿರುವುದಕ್ಕಾಗಿ ಮಾನ್ಯ ಮಂತ್ರಿಗಳಿಗೆ ನಾನು ನಿಜವಾಗಲೂ ಅಭಾರಿಯಾಗಿದ್ದೇನೆ. ಮತ್ತು ಸದನದ ಮೂಲಕ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ ಈಗ ಕೊಟ್ಟಿರತಕ್ಕಂಥ ಅಂಕೆ ಸಂಖ್ಯೆ ಪ್ರಕಾರ ಬರೀ ೩೫೦ ತಾಂಡಾಗಳು ಇವೆ ಎಂದು ಅಧಿಕಾರಿಗಳು ಹೇಳುತ್ತಾ ಇದ್ದಾರೆ. ಆ ವರದಿಯನ್ನು ತರಿಸಿ ಇನ್ನೊಂದುಸಲ ಪರಿಶೀಲನೆ ಮಾಡಿ. ಏಕೆಂದರೆ, ೩೫೦ಕ್ಕಿಂತ ಜಾಸ್ತಿ ತಾಂಡಾಗಳು ಇವೆ. ಜಂಗಲ್‌ನಲ್ಲಿ ೧೦-೧೫ ಮನೆಗಳನ್ನು ಕಟ್ಟಿಕೊಂಡಿರುವುದನ್ನು ನೋಡಿರತಕ್ಕವರು ಬಹಳ ಜನ ಮಾನ್ಯ ಸದಸ್ಯರಿದ್ದಾರೆ. ಅವರು ಜಂಗಲ್‌ನಲ್ಲಿ ೧೦–೧೫ ಮನೆಗಳನ್ನು ಕಟ್ಟಿಕೊಂಡು, ಕಾಡಿನಲ್ಲಿ ವಾಸ ಮಾಡಿ ತಾಂಡ ಮಾಡಿಕೊಂಡಿದ್ದಾರೆ. ಆ ತಾಂಡಾಗಳನ್ನು ರೆವಿನ್ಯು ಗ್ರಾಮಗಳೆಂದು ಗುರುತಿಸಬೇಕು, ಆದ್ದರಿಂದ ಕೊಟ್ಟಿರತಕ್ಕಂಥ ಸಂಖ್ಯೆ ಸರಿಯಲ್ಲ. ೩೫೦ ತಾಂಡಾಗಳು ಇವೆ ಎಂದು ಏನು ಹೇಳುತ್ತಾರೆ ಅದು ತಪ್ಪಾಗಿ ಕೊಟ್ಟಿರತಕ್ಕಂಥಾದ್ದು. ಎರಡನೆಯದು, ಈ ತಾಂಡಾಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ತಡವಾದರೆ ಸರ್ಕಾರದಿಂದ ಸಿಗತಕ್ಕ ಸೌಲಭ್ಯದಿಂದ ಅವರು ವಂಚಿತರಾಗುತ್ತಾರೆ. ಸೌಲಭ್ಯ ಸಿಗುವುದಿಲ್ಲ. ಅದಕ್ಕೋಸ್ಕರ ೧೯೭೦ ಎಂದು ಏನು ಡೆಡ್‌ಲೈನ್ ಹಾಕಿದ್ದಾರೋ ಅಥವಾ ಕೇಂದ್ರ ಸರ್ಕಾರದವರು ಒಂದು ರಿಸ್ಟ್ರಿಕ್ಷನ್ ಕೊಟ್ಟಿದ್ದಾರೆಂದು ಹೇಳುತ್ತಾ ಇದ್ದರೆ ತಾವು ಬೇಗ ಆ ರಿಸ್ಟ್ರಿಕ್ಷನ್ ತೆಗೆದು, ಬೇಗ ಮಾಡಿದರೆ ನಮಗೆ ಸೌಲತ್ತು ಸಿಗುತ್ತದೆ. ಮೂರನೆಯದು, ಖಾಸಗಿ ಜಮೀನಿನಲ್ಲಿ ತಾಂಡಾಗಳನ್ನು ಕಟ್ಟಿದ್ದಾರೆ, ಖಾಸಗಿ ಜಮೀನಿನಲ್ಲಿ, ಯಾರದೋ ಜಮೀನಿನಲ್ಲಿ ಏನು ತಾಂಡಾಗಳನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ, ಈಗ ಅವರು ಜಮೀನು ನಮ್ಮದು ನೀವು ಇಲ್ಲಿಂದ ಹೋಗಬೇಕು. ನೀವು ಮನೆ ಖಾಲಿ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾ ಇದ್ದಾರೆ. ಆದುದರಿಂದ ದಯಮಾಡಿ ಎಲ್ಲೆಲ್ಲಿ ಖಾಸಗಿ ಜಮೀನಿನಲ್ಲಿ ತಾಂಡಾಗಳನ್ನು ಕಟ್ಟಿಕೊಂಡಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡಿಕೊಡಿ. ಇಲ್ಲದೇ ಇದ್ದರೆ ಫಾರೆಸ್ಟ್‌ನವರು ಬಂದು ಬುಲ್ಡೋಜರ್ ಹೊಡೆಯುತ್ತಾ ಇದ್ದಾರೆ. ಆದುದರಿಂದ ದಯಮಾಡಿ ಅಲ್ಲಿಯವರೆಗೂ ಫಾರೆಸ್ಟ್‌ನವರು ಬುಲ್ಡೋಜರ್ ಹೊಡೆಯುವುದನ್ನು ನಿಲ್ಲಿಸಬೇಕು ಎಂದು ನನ್ನ ಪ್ರಾರ್ಥನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಈ ಮೊದಲೇ ಹೇಳಿದೆ. ಈ ೩೫೦ ತಾಂಡಾಗಳು ಯಾವುವು ಅಂದರೆ, ಹಳ್ಳಿ ಆಗಲಿಕ್ಕೆ ಯೋಗ್ಯ ಇರುವಂಥ ತಾಂಡಾಗಳು. ಈ ೩೫೦ ಹೊಸ ಹಳ್ಳಿಗಳೆಂದು ಡಿಕ್ಲೇರ್ ಮಾಡಬೇಕು. ಅದೂ ಅಲ್ಲದೆ, ೧೦–೨೦ ಮಂದಿ ಇದ್ದರೆ ಅದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ವಿಚಾರ ಮಾಡೋಣ. ಆದರೆ ೧೦–೧೦ ಮಂದಿಗೆ ಒಂದೊಂದು ಹಳ್ಳಿ ಎಂದು ಮಾಡುವುದಕ್ಕಾಗುತ್ತದೆಯೇ, ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಆ ಹೊಲ ಏನು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡೋಣ.

ಶ್ರೀ ಕೆ. ಶಿವಮೂರ್ತಿ.—ಜನಸಂಖ್ಯೆ ಆಧಾರದ ಮೇಲೆ ಮಾಡುತ್ತೀರೊ ಅಥವಾ ಹೇಗೆ ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್.—೩೫೦ ತಾಂಡಾಗಳು ಇದೆಯೋ ಅಥವಾ ಹೆಚ್ಚು ಇದೆಯೋ ಎಕ್ಸಾಮಿನ್ ಮಾಡಿಸೋಣ.

ಶ್ರೀ ಕೆ. ಶಿವಮೂರ್ತಿ.—ಜನಸಂಖ್ಯೆ ಆಧಾರದ ಮೇಲೆ ಮಾಡಿ.

ಶ್ರೀ ಕೆ. ಹೆಚ್. ಪಾಟೀಲ್.—ಗ್ರಾಮ ಎಂದು ಪರಿವರ್ತನೆ ಆಗಲಿಕ್ಕೆ ಎಷ್ಟು ತಾಂಡಾಗಳು ಯೋಗ್ಯ ಇದೆಯೋ ಅವುಗಳಲ್ಲಿ ಲಂಬಾಣಿಯವರೇ ಇರಲಿ, ಷೆಡ್ಯೂಲ್ ಕ್ಯಾಸ್ಟನವರೇ ಇರಲಿ ಅಥವಾ ಮತ್ತೆ ಯಾರೇ ಇರಲಿ ಅವನ್ನೆಲ್ಲಾ ಹಳ್ಳಿಗಳನ್ನಾಗಿ ಪರಿವರ್ತಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

೩–೩೦ ಪಿ. ಎಂ.

ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಮಂಗಳೂರಿನಲ್ಲಿ ಕನ್ವರ್ಷನ್‌ಗೆ ಸಂಬಂಧಪಟ್ಟಂತೆ ಬಹಳ ದೊಡ್ಡ ಗಲಾಟೆ ಉಂಟು. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲ ಭೂಮಿ ಕೃಷಿ ಭೂಮಿಯೆಂದು ಹೇಳಿರುವುದರಿಂದ ಬಹಳ ತೊಂದರೆಯಾಗಿದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಅನೇಕರು ತಂದಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು. ಇನ್ನು ನಮ್ಮಲ್ಲಿ ಬೀಡಿ ಕಾರ್ಮಿಕರು ಮೂರೂವರೆ ಲಕ್ಷ ಇದ್ದಾರೆ. ಅವರಿಗೆ ವಾರದಲ್ಲಿ ಒಂದು ಕೆಲಸವೂ ಕೂಡ ಸಿಗುತ್ತಿಲ್ಲ. ಮಧ್ಯಪ್ರದೇಶದಿಂದ ಬೀಡಿ ಸುತ್ತುವ ಎಲೆಗಳು ಬರುವುದಿಲ್ಲವೆಂದು ಅವರಿಗೆ ಮಾಲೀಕರು ಕೆಲಸವನ್ನೆ ಕೊಡದೆ ಎಲ್ಲ ದುರವಸ್ಥೆಯಲ್ಲಿದ್ದಾರೆ. ಈ ಬಗ್ಗೆ ಕೂಡ ನಮ್ಮ ಜಿಲ್ಲೆಯಲ್ಲಿ ಬಹಳ ಗೊಂದಲ ಉಂಟು ಅದರ ಬಗ್ಗೆ ಕೂಡ ತಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ಪ್ರತಿ ಗ್ರಾಮದಲ್ಲಿ ಮುಸಲ್ಮಾನರಿಗಾಗಲಿ. ಕ್ರೈಸ್ತರಿಗಾಗಲೀ ಅಥವಾ ಹಿಂದೂಗಳಿಗಾಗಲೀ ಸ್ಮಶಾನ ಇಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂ ಕಲಹಗಳು ಬರುವುದೇ ಸ್ಮಶಾನ ಇಲ್ಲದ್ದರಿಂದ. ಆದ್ದರಿಂದ ಪ್ರತಿ ಗ್ರಾಮಕ್ಕೂ ಎಲ್ಲರಿಗೂ ಒಂದು ಸ್ಮಶಾನ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ದೇವಸ್ಥಾನಗಳ ಜೊತೆಗೆ ಒಂದೊಂದು ಸ್ಮಶಾನವನ್ನೂ ಕೊಡೋಣ, ಬೀಡಿ ಕಾರ್ಮಿಕರ ವಿಚಾರದಲ್ಲಿ ನಾನು ಈಗಾಗಲೇ ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ಮಾಡಲಿಕ್ಕೆ ಪ್ರಾರಂಭಿಸಿದ್ದೇನೆ. ಬೀಡಿ ಕಾರ್ಮಿಕರ ಬಗ್ಗೆ ಒಂದು ಸ್ಕೀಂ ಇದೆ. ಬೀಡಿ ಕಾರ್ಮಿಕರಿಗೆ ಬೇಕಾಗುವಂಥ ಮನೆ ಕಟ್ಟಲು ಕೇಂದ್ರ ಸರ್ಕಾರ ಸಹಾಯಧನ ಮತ್ತು ಸಾಲ ಇವೆರಡನ್ನೂ ಕೊಡುತ್ತದೆ. ಅದನ್ನು ತೆಗೆದುಕೊಂಡು ಎಲ್ಲೆಲ್ಲಿ ಬೀಡಿ ಕಾರ್ಮಿಕ ವರ್ಗದವರು ಬಹಳಷ್ಟು ಜನ ಇದ್ದಾರೆ ಆ ಎಲ್ಲಾ ಕಡೆ ಮನೆಗಳನ್ನು ಕಟ್ಟಿಸಿಕೊಡುವ ವಿಚಾರ ಇದೆ. ಮಾನ್ಯ ಸಿಂಧ್ಯಾರವರು ಕೇವಲ ೫೦೦ ಮನೆಗಳನ್ನು ಕಟ್ಟುವುದಕ್ಕೆ ಮಾತ್ರ ಹಣ ಕೊಡುತ್ತಾರೆಂದು ತಿಳಿಸಿದರು. ಆ ರೀತಿ ಏನೂ ಇಲ್ಲ. ಎಷ್ಟು ಮನೆಗಳನ್ನು ಬೇಕಾದರೂ ಕಟ್ಟಿಸಿಕೊಡಬಹುದು, ಇದಕ್ಕೆ ಹಣದ ಕೊರತೆಯಿಲ್ಲ. ಇದರಲ್ಲಿ ಒಂದು ಪ್ರಶ್ನೆ ಏನೆಂದರೆ ಬೀಡಿ ಕಾರ್ಮಿಕರು ರೆಕಗ್ನೈಸ್ ಕಾರ್ಮಿಕರು ಆಗಿರಬೇಕು. ನಮ್ಮ ಸಮಾಜದಲ್ಲಿ ಏನಾಗಿದೆಯೆಂದರೆ, ಅವನು ಕೆಲಸ ಮಾಡುತ್ತಿದ್ದರೂ ಸಹ ಅವನಿಗೆ ಸರ್ಟಿಫಿಕೇಟ್ ಕೊಡುವುದಿಲ್ಲ. ಮಾಲೀಕರು ನಮ್ಮಲ್ಲಿ ಇಂತಹ ವ್ಯಕ್ತಿ ಬೀಡಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದಾನೆಂದು ಸರ್ಟಿಫೀಕೇಟ್ ಕೊಡಬೇಕು. ಈ ರೀತಿ ಸರ್ಟಿಫಿಕೇಟ್ ಕೊಡದಿದ್ದರೆ, ಕೇಂದ್ರ ಸರ್ಕಾರ ಹಣ ಕೊಡುವುದಿಲ್ಲ. ಆದರೆ ಇವರು ಸರ್ಟಿಫಿಕೇಟ್ ಕೊಡುವುದಿಲ್ಲ. ಆ ಬಗ್ಗೆ ಏನು ಮಾಡಬೇಕೆಂದು ನಾನು ಯೋಚನೆ ಮಾಡುತ್ತಿದ್ದೇನೆ ಆ ಯೋಚನೆಯ ನಂತರ ಬೀಡಿ ಕಾರ್ಮಿಕರು ಎಲ್ಲೆಲ್ಲಿದ್ದಾರೋ ಅವರಿಗೆ ಮನೆಗಳನ್ನು ದೊರಕಿಸಿಕೊಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ. ಎರಡನೆಯದಾಗಿ, ಸ್ಮಶಾನದ ಬಗ್ಗೆ ಹೇಳಿದರು. ಎಲ್ಲಾ ಕಡೆ ತೊಂದರೆ ಇರಲಿಕ್ಕಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಇದೆಯೆಂಬುದನ್ನು ಪರಿಶೀಲನೆ ಮಾಡಿ ಸ್ಮಶಾನ ಇದ್ದರೆ ಅವನ್ನು ಕೊಡುವುದು ನಮ್ಮ ಕರ್ತವ್ಯ, ಅದನ್ನು ಮಾಡುತ್ತೇವೆ. ಮೂರನೆಯದಾಗಿ, ಅಲ್ಲಿ ಅತಿಕ್ರಮಣ ಮಾಡಿದಂಥ ಜನರ ಬಗ್ಗೆ ಹೇಳಿದರು ಅದರ ಬಗ್ಗೆ ಈಗಾಗಲೆ ಹೇಳಿದ್ದೇನೆ. ಎಲ್ಲೆಲ್ಲಿ ಅತಿಕ್ರಮಣ ಮಾಡಿರುವುದನ್ನು ಕಾನೂನು ಬದ್ಧವಾಗಿ ಮಾಡಲಿಕ್ಕೆ ಬರುತ್ತದೆಯೋ ಎಂದು ನೋಡಿ ನಾವು ಮಾಡುತ್ತೇವೆ.

ಶ್ರೀ ಎಲ್. ಆರ್, ಶಿವರಾಮೇಗೌಡ.—ಗ್ರಾಮಲೆಕ್ಕಾಧಿಕಾರಿಗಳು ಅವರ ಕೇಂದ್ರ ಸ್ಥಾನದಲ್ಲಿ ಇರಬೇಕೆಂದು ಹೇಳಿದ್ದೀರಿ. ಇದು ಸ್ವಾಗತಾರ್ಹವಾದ ವಿಚಾರ. ಆದರೆ ಖಾಲಿ ಇರತಕ್ಕ ಗ್ರಾಮ

ಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ? ಎಷ್ಟು ದಿವಸದಲ್ಲಿ ತುಂಬುತ್ತೀರಿ ಎನ್ನುವುದನ್ನು ಹೇಳುತ್ತೀರ.

ಶ್ರೀ ಕೆ. ಹೆಚ್. ಪಾಟೀಲ್ —ಯಾವಾಗ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೋ ಯಾವಾಗ ಅವರು ಬ್ಯಾನ್ ತೆಗೆಯುತ್ತಾರೋ ಆಗ ತುಂಬಲಾಗುವುದು.

ಶ್ರೀ ಶಫಿ ಅಹಮದ್ —ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಇದು ಸರಿಯಾಗಿ ಈ ಒಂದು ವರ್ಗದ ಮಕ್ಕಳಿಗೆ ದೊರೆಯುತ್ತಿಲ್ಲ. ಇಲಾಖೆಯವರು ಒದಗಿಸುವ ಫಾರಂಗಳನ್ನು ಯಾವ ಬೀಡಿ ಕಾರ್ಮಿಕರ ಮಕ್ಕಳೂ ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಮತ್ತೆ ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ವಿಚಾರ ಹೇಳಿದ್ದೀರಿ. ಬಿ. ಡಿ. ಎ. ಯಿಂದ ಜಮೀನು ಸ್ವಾಧೀನ ಪಡಿಸಿಕೊಳ್ಳುವಾಗ ನಿವೇಶನಗಳನ್ನು ಹಂಚಿಕೆ ಮಾಡುವಾಗ ಕೆಲವು ಪರ್‌ಸೆಂಟ್ ಎಕನಾಮಿಕಲಿ ವೀಕರ್ ಸೆಕ್ಷನ್‌ಗೆಂದು, ಬೀಡಿ ಕಾರ್ಮಿಕರಿಗೆಂದು ರಿಸರ್ವ್ ಮಾಡಿದರೆ ಅದರಲ್ಲಿ ಅವರು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಇವತ್ತು ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪ್ರೈವೇಟ್ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನವರಿಗೆ ಗ್ರಾಂಟ್ ಇನ್, ಏಯ್ಡ್ ಕೋಡ್‌ನಲ್ಲಿ ಅವಕಾಶ ಮಾಡಿದರೆ ಬಹಳ ಸೂಕ್ತವೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದಂತಹ ಸಲಹೆ ಯೋಗ್ಯವಾಗಿದೆ ವಿಚಾರ ಮಾಡುತ್ತೇನೆ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಕುಂಕಿ ಜಮೀನಿನ ಹಕ್ಕಿನ ಬಗ್ಗೆ ಮಾನ್ಯ ಜಿ. ಎಸ್. ಆಚಾರ್‌ರವರು ಮಾತನಾಡಿದ್ದಾರೆ, ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಬಹಳಷ್ಟು ಜನ ಅತಿಕ್ರಮಣ ಕೂಡ ಮಾಡಿದ್ದಾರೆ. ಅವರಿಗೆ ಇದನ್ನು ಊರ್ಜಿತಗೊಳಿಸತಕ್ಕ ವ್ಯವಸ್ಥೆ ಮಾಡುತ್ತೀರ ಎನ್ನುವುದು ಒಂದು ಪ್ರಶ್ನೆ, ಇನ್ನು ಕನ್ವರ್ಷನ್ ಬಗ್ಗೆ ಈಗಾಗಲೇ ಮಾನ್ಯ ಇದಿನಬ್ಬನವರು ಮಾತನಾಡಿದ್ದಾರೆ. ಇದು ನಮ್ಮ ಜಿಲ್ಲೆಯಲ್ಲಿ ಪ್ರಾಮುಖ್ಯವಾದ ಸಮಸ್ಯೆ. ಇದರ ಬಗ್ಗೆ ಕೂಡ ತಾವು ಹೇಳಿಕೆಯನ್ನು ಕೊಡಬೇಕು. ಮತ್ತೆ ಬೀಡಿ ಕಟ್ಟುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಎಲೆಗಳು ಸಿಗುತ್ತಿಲ್ಲ, 15 ರೂಪಾಯಿಗೆ ಮಾರುತ್ತಿದ್ದ ಬೀಡಿ ಎಲೆಗಳು 40 ರೂಪಾಯಿ ಜಾಸ್ತಿ, ಆಗಿದೆ ಇದರಿಂದ ಬೀಡಿ ಉದ್ದಿಮೆದಾರರಿಗೆ ತೊಂದರೆಯಾಗಿದೆ ಈ ವಿಚಾರದಲ್ಲಿ ಕೂಡ ತಾವು ಗಮನ ಹರಿಸಬೇಕು. ಮುಜರಾಯಿ ದೇವಸ್ಥಾನಗಳಲ್ಲಿ ಕೆಲವು ಕಡೆ ಆಡಳಿತಾಧಿಕಾರಿಗಳಿದ್ದಾರೆ ಇವರು ಮಠಾಧೀಶರಂತಿದ್ದಾರೆ. ಅವರು ಊರಲ್ಲಿ ರಾಜಕೀಯವಾಗಿ ಪ್ರಭಾವ ಬೀರುತ್ತಿದ್ದು ಇಲ್ಲೀಗಲ್ ಕಾರ್ಯಕ್ರಮಗಳಲ್ಲಿ ಕೂಡ ಹಸ್ತಕ್ಷೇಪ ಮಾಡುತ್ತಿದ್ದಾರೆ ಚುನಾವಣೆಗೆ ಜನರನ್ನು ನಿಲ್ಲಿಸತಕ್ಕಂಥ ಶಕ್ತಿವಂತರಾಗಿದ್ದಾರೆ ಅನೇಕ ವರ್ಷಗಳಿಂದ ಒಂದೇ ಕಡೆ ಇರತಕ್ಕ ಅಧಿಕಾರಿಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್, ಪಾಟೀಲ್.—ಅವರು ಹೇಳಿದಂಥ ಎರಡು ಸಲಹೆಗಳ ಬಗ್ಗೆ ನಾನು ಉತ್ತರ ಕೊಡಬಲ್ಲೆ. ಈ ಖುಷ್ಕಿ ಲ್ಯಾಂಡ್ ಬಗ್ಗೆ ಕುಮ್ಕಿ ಲ್ಯಾಂಡ್ ಬಗ್ಗೆ ಕೇಳಿದ್ದಾರೆ. ಎಲ್ಲಿಲ್ಲಿ ನಮ್ಮ ಕಡೆಯಿಂದ ಸಾಧ್ಯ ಇದೆಯೊ ಅವುಗಳನ್ನು ರೆಗ್ಯುಲರೈಸ್ ಮಾಡಲಿಕ್ಕೆ ಪ್ರಯತ್ನ ಮಾಡೋಣ ಅನಂತರ ಕನ್‌ವರ್ಷನ್ ಸಲುವಾಗಿ ಕೇಳಿದ್ದಾರೆ. ಇದರ ಬಗ್ಗೆ ನಾನು ಆಗಲೇ ಹೇಳಿದೆ. ಅವರು ಕೇಳಿದರೋ ಇಲ್ಲವೋ ಗೊತ್ತಾಗಲಿಲ್ಲ, ಯಾವುದು ನಮ್ಮ ಅಧಿಕಾರದ ಕಕ್ಷೆಯಲ್ಲಿ ಬರುತ್ತದೋ ಅದು ಯೋಗ್ಯವಿದ್ದರೆ ಆ ಕನ್ವರ್ಷನ್ ಬಗ್ಗೆ ಪ್ರಯತ್ನ ಮಾಡುತ್ತೇನೆ. ಇನ್ನು ಮೂರನೆಯದಾಗಿ ಕೆಲವು ಮಠಾಧೀಶರು ಇದ್ದಾರೆ. ಅವರು ಚುನಾವಣೆಗೆ ಜನರನ್ನೂ ಸಹಿತ ನಿಲ್ಲಿಸುತ್ತಾರೆಂದು ಹೇಳಿದರು.

ಶ್ರೀ ರಮಾನಾಥ ರೈ.—ಮಠಾಧೀಶರಲ್ಲ, ನೌಕರರು, ಅವರು ಆ ರೀತಿಯಲ್ಲಿ ವರ್ತನೆ ಮಾಡುತ್ತಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ —ಇವೊತ್ತಿನ ದಿವಸ ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಎಲ್ಲಿಯತನಕ ಪ್ರಾವಿಜನ್ ಇಲ್ಲ ಅಲ್ಲಿಯತನಕ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮಂತ್ರಿಗಳು ಇಲ್ಲಿ ಮಾತನಾಡುತ್ತೇವೆ. ಮಂತ್ರಿಗಳ ವಿರುದ್ಧ ಅವರ ಕೈಯೊಳಗೆ ಕೆಲಸ ಮಾಡುವವರೇ ಸಂಘ ಮಾಡಿಕೊಂಡು ಚುನಾವಣೆ ಮಾಡುತ್ತಾರೆ, ಅದು ಅನಿವಾರ್ಯ. ಆದರೆ ಅಂತಹವರು ಯಾರಾದರೂ ಮಿಸ್ ಚೀಫ್ ಮಾಡುತ್ತಾರೆ. ನಿಮ್ಮ ಕೆಲಸಕ್ಕೆ ತೊಂದರೆ ಮಾಡುತ್ತಾರೆ ಅಂದರೆ ಅದನ್ನು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಆಮೇಲೆ ನೋಡುತ್ತೇನೆ,

SRI SUBHASH SHRIDHAR JOSHI.—Sir, if you certify D L Cs and A C S as Appellate Authority the problem of pending cases will be solved and there will be no delay in giving Justice.

Second thing, because of the shortage of leave about one lakhs Beedi workers are unemployed. I therefore request that prompt action may be taken for that.

Thirdly, in Nippani lands have been acquired for construction of Houses for Beedi wokers three years ago but no work is started. I request the Hon'ble Minister to direct the concerned to commence work immediately.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಮೂರು ವರ್ಷಗಳ ಹಿಂದೆ ಲ್ಯಾಂಡ್ ಅಕ್ವೈರ್ ಆದ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಈ ವರ್ಷ ಅಲ್ಲಿ ಮನೆಗಳನ್ನು ಕಟ್ಟುವ ವಿಷಯದ ಬಗ್ಗೆ ಕಾರ್ಯಕ್ರಮ ಮಾಡೋಣ. ಅವರು ನನ್ನ ಹತ್ತಿರ ಬಂದರೆ, ನಿಜವಾಗಿಯೂ ಅವರ ಕೂಡ ಮಾತನಾಡಿ ಯಾವರೀತಿ, ಅಂದರೆ ತ್ವರಿತವಾದ ರೀತಿಯಿಂದ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯ ಇದೆಯೇ ಎಂದು ನೋಡುತ್ತೇನೆ. ಬರೀ ಲ್ಯಾಂಡ್ ಅಕ್ವೈರ್ ಮಾಡಿದರೆ ಆಗುವುದಿಲ್ಲ, ಅಲ್ಲಿ ಐಡೆಂಟಿಫೈಡ್ ಲೇಬರ್ಸ್, ಬೀಡಿ ವರ್ಕರ್ಸ್ ಬೇಕು. ಅಲ್ಲಿ ಬೀಡಿ ವರ್ಕರ್ಸ್‌ಗೆ ಐಡೆಂಟಿಫಿಕೇಷನ್ ಇದ್ದರೆ ನಾನು ಕೂಡಲೇ ಮನೆ ಕಟ್ಟುವಂಥ ಕಾರ್ಯವನ್ನು ಮಾಡಲಿಕ್ಕೆ ಸೆಂಟರ್‌ಗೆ ಬರೆಯುತ್ತೇನೆ, ಮತ್ತು ಗ್ರ್ಯಾಂಟ್ ತರಿಸಿಕೊಡುತ್ತೇನೆ. ಮತ್ತೊಂದು ಕಾರ್ಯಕ್ರಮವನ್ನು ಲೇಬರ್ ಆ್ಯಕ್ಟ್ ಸಲುವಾಗಿ ಹೇಳಿದರು. ಅವರು ನನ್ನ ಕೂಡ ಬಂದು ಚರ್ಚೆ ಮಾಡಿದರೆ ಯಾವರೀತಿಯಾಗಿ ಸೂಕ್ತವಾದಂಥ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯ ಇದೆ, ಅದನ್ನು ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಮುಕ್ತಾಯವಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

''ಪ್ರಸ್ತಾವ ಏನೆಂದರೆ, ದಿನಾಂಕ ೩೧ನೇ ಮಾರ್ಚ್ ೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೫೦, ೫೧, ೫೨, ೫೩, ೫೪ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಂ ಮಾಡಿದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು''.

(ಪ್ರಸ್ತಾವನೆ ಅಂಗೀಕಾರವಾಯಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ದೊರಕಿತು).

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಬೇಡಿಕೆಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ೫೦—ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೩.೩೩.೪೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪.೦೬,೫೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೧—ಮುದ್ರಾಂಕ (ಸ್ಟಾಂಪುಗಳು ಮತ್ತು ನೋಂದಣಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೆಯ ಮಾರ್ಚ್ ೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಂದ್ರಾಂಕ (ಸ್ಟಾಂಪುಗಳು ಮತ್ತು ನೋಂದಣಿ)ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೧,೭೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

### ಅಭಿಯಾಚನೆ ಕ್ರಮಾಂಕ ೫೨—ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೨೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಾಡವಾಳ ಖಾತೆಯಲ್ಲಿ ೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

### ಅಭಿಯಾಚನೆ ಕ್ರಮಾಂಕ ೫೩—ಮಠೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಠೀಯ ಮತ್ತು ಧರ್ಮದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೪೮,೫೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

### ಅಭಿಯಾಚನೆ ಕ್ರಮಾಂಕ ೫೪—ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧ನೇ ಮಾರ್ಚ್ ೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೮,೭೧,೦೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

**ಉಪಾಧ್ಯಕ್ಷರು.**—ಸಭೆಯು ಈಗ ಎದ್ದು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರುವುದು.

(ಸದನವು ಈ ದಿನ ೩ ಗಂಟೆ ೪೦ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಸೋಮವಾರ ಅಂದರೆ ದಿನಾಂಕ ೨೫ನೇ ಜೂನ್ ೧೯೭೦ ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶನಗೊಳ್ಳಲು ನಿರ್ಧರಿಸಿತು.)